
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಏಪ್ರಿಲ್ 6, 2011 ಪುಟ 20 ರೂ. 12/-


ಉರ್ದು ಅಕಾಡೆಮಿಗೆ ಉರುಳು



ಲಿಂಗಾಯತ ಮಠಕ್ಕೆ ಕೈ

ಕಳ್ಳ ಯಡ್ಡಿಗೆ ಕಾದಿದೆ ಕೈಕೋಳ

ಕೊಳ್ಳೆಯೇ ಕೋರೆಯ ಧರ್ಮವಯ್ಯಾ!





ಕಿಚ್ಚನ ರಾಜಕೀಯ ಖದರ್!

ಪಶ್ಚಿಮ ಬಂಗಾಳ ಚುನಾವಣೆ ಎಡ ಕಾಮ್ರೇಡುಗಳು, ಬಲ "ಕಾಮ್ರೇಡುಗಳು" ಮತ್ತು ಬಲಪಂಥೀಯರು



ಈ ಬಾರಿ ಪಶ್ಚಿಮ ಬಂಗಾಳದಲ್ಲಿ ನಡೆಯಲಿರುವ ಚುನಾವಣೆ ನಿಜಕ್ಕೂ ಎಡರಂಗದಲ್ಲಿ ನಡುಕ ಹುಟ್ಟಿಸಿದೆ. ಯಾವುದೋ ಪವಾಡ ನಡೆಯದಿದ್ದಲ್ಲಿ ಈ ಬಾರಿ 36 ವರ್ಷಗಳಷ್ಟು ಹಳೆಯದಾದ ಸಿಪಿಎಂ ಸಾಮ್ರಾಜ್ಯ ಕುಸಿದು ಬೀಳುವುದು ಖಂಡಿತಾ ಎಂದು ಎಲ್ಲಾ ಬಗೆಯ ರಾಜಕೀಯ ಪಂಡಿತರೂ ಹೇಳತೊಡಗಿದ್ದಾರೆ. ಇದು ಸಿಪಿಎಂ ಪಕ್ಷಕ್ಕೂ ಸ್ಪಷ್ಟವಾಗಿ ಅರ್ಥವಾದಂತಿದೆ. ಪಶ್ಚಿಮ ಬಂಗಾಳದ ಬಹುಸಂಖ್ಯಾತ ಮತದಾರರು ಈ ಬಾರಿ ಸ್ಪಷ್ಟವಾಗಿ ಸಿಪಿಎಂ ವಿರುದ್ಧ ನಿಂತಿದ್ದಾರೆ. ಈ ಸಿಪಿಎಂ ವಿರೋಧೀ ಅಲೆಯ ಲಾಭವನ್ನು ಮಮತಾ ಬ್ಯಾನರ್ಜಿಯ ತೃಣಮೂಲ್ ಕಾಂಗ್ರೆಸ್ ಮತ್ತು ಸೋನಿಯಾ ಕಾಂಗ್ರೆಸ್ಸು ಪಡೆದುಕೊಳ್ಳುತ್ತಿದೆ.

ಅದೇನೇ ಇರಲಿ, ಪಶ್ಚಿಮ ಬಂಗಾಳದ ಮತದಾರರು ಒಂದು ವಿಚಿತ್ರ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಸಿಪಿಎಂ ಎಂಬ ಹುಲಿಯ ಬದಲಿಗೆ ಅವರಿಗೆ ಇರುವ ಆಯ್ಕೆ ತೃಣಮೂಲ್ ಎಂಬ ಹೆಮ್ಮಾರಿಯದ್ದು! ಕಡಿಯುವುದನ್ನು ಬಿಟ್ಟು ಬಡಿಯುವುದನ್ನು ಆಯ್ಕೆ ಮಾಡಿಕೊಂಡ ಹಾಗೆ! ಅದು ಈ ಸಂಸದೀಯ ಪ್ರಜಾತಂತ್ರದಲ್ಲಿ ದೇಶದ ಎಲ್ಲಾ ಜನರೂ ಎದುರಿಸುತ್ತಿರುವ ಪರಿಸ್ಥಿತಿಯೇ ಆದರೂ ಪಶ್ಚಿಮ ಬಂಗಾಳದ ಪರಿಸ್ಥಿತಿ ಸ್ವಲ್ಪ ಭಿನ್ನ.

ಬಂಗಾಳದಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ಕಮ್ಯುನಿಸ್ಟ್ ನೇತೃತ್ವದ ದುಡಿಯುವ ಜನರ ಚಳವಳಿ ಅತ್ಯಂತ ಪ್ರಭಾವಶಾಲಿಯಾಗಿತ್ತು, 1946ರಲ್ಲಿ ಕಮ್ಯುನಿಸ್ಟರ ನೇತೃತ್ವದಲ್ಲಿ ಗೇಣೀದಾರರು (ಬರ್ಗಾದಾರರು) ಬೆಳೆದ ಬೆಳೆಯಲ್ಲಿ ಮೂರನೇ ಒಂದು ಭಾಗದಷ್ಟು ಮಾತ್ರ ಗೇಣಿ ಕೊಡುತ್ತೇವೆಂದು ಭೂಮಾಲೀಕರ ವಿರುದ್ಧ ನಡೆಸಿದ ಚಳವಳಿ ತೇಭಾಗ (ಮೂರನೇ ಒಂದು ಭಾಗ) ಚಳವಳಿ ಎಂದೇ ಖ್ಯಾತವಾಗಿತ್ತಲ್ಲದೆ ಅವಿಭಜಿತ ಬಂಗಾಳದ 20ಕ್ಕೂ ಹೆಚ್ಚು ಜಿಲ್ಲೆಗಳನ್ನು ವ್ಯಾಪಿಸಿಕೊಂಡಿತ್ತು, ಕಮ್ಯುನಿಸ್ಟ್ ಪಕ್ಷಕ್ಕೆ ಕೇರಳ ಮತ್ತು ತ್ರಿಪುರಗಳಂತೆ ಬಂಗಾಳದಲ್ಲೂ ಗ್ರಾಮೀಣ ದುಡಿಯುವ ಜನತೆಯ ನಡುವೆ ಸುಭದ್ರ ನೆಲೆ ದೊರಕಿತು. ದೇಶದ ಇತರ ಭಾಗಗಳಂತೆ ನಗರದ ಕೈಗಾರಿಕಾ ಕಾರ್ಮಿಕರ ನಡುವೆಯೂ ಕಮ್ಯುನಿಸ್ಟ್ ಚಳವಳಿ ಸ್ವಾತಂತ್ರ್ಯ ಪೂರ್ವದಿಂದಲೂ ನೆಲೆಯನ್ನು ಪಡೆದುಕೊಂಡಿತ್ತು, ಅವಿಭಜಿತ ಕಮ್ಯುನಿಸ್ಟ್ ಪಕ್ಷ ಬಂಗಾಳದಲ್ಲೂ ಪ್ರಮುಖ ವಿರೋಧ ಪಕ್ಷವಾಗಿತ್ತು, ಆದರೆ 1964ರಲ್ಲಿ ಭಾರತ ಸಮಾಜದ ವೈರುಧ್ಯಗಳ ಕುರಿತು ಮತ್ತು ಕ್ರಾಂತಿಯ ಮಾರ್ಗದ ಕುರಿತು ಉದ್ಭವಿಸಿದ ಸೈದ್ಧಾಂತಿಕ ಭೇದಗಳಿಂದ ಕಮ್ಯುನಿಸ್ಟ್ ಪಕ್ಷ ಒಡೆದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸಿಸ್ಟ್)-ಸಿಪಿಎಂ-ರೂಪುಗೊಂಡಿತು. ಆದರೂ ಮೂಲ ಸಿಪಿಐಗಿಂತ ಈ ಹೊಸ ಸಿಪಿಎಂ ಪಕ್ಷವೇ ಬಂಗಾಳದಲ್ಲಿ ಪ್ರಬಲವಾಗಿ ಬೆಳೆಯಿತು. 1967, 69ರ ಚುನಾವಣೆಗಳಲ್ಲಿ ಆಳುವ ವರ್ಗದ ಪಕ್ಷದೊಡನೆ ಅಧಿಕಾರ ಹಂಚಿಕೊಳ್ಳುವಷ್ಟು ಪ್ರ"ಬಲ"ವಾಯಿತು.

ಆ ನಂತರದಲ್ಲಿ ಸಿಪಿಎಂ ಪಕ್ಷವೂ ಸಹ ಸಾರಾಂಶದಲ್ಲಿ ಮೂಲ ಸಿಪಿಐಗಿಂತ ಭಿನ್ನವಾದ ಯಾವುದೇ ಮಾರ್ಗಗಳನ್ನು ಅನುಸರಿಸದೇ ಇದ್ದದ್ದರಿಂದ ಅದರಲ್ಲಿದ್ದ ಕ್ರಾಂತಿಕಾರಿಗಳು ಹೊರಬಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸಿಸ್ಟ್-ಲೆನಿನಿಸ್ಟ್) ವನ್ನು ರಚಿಸಿಕೊಂಡರು. ಸಶಸ್ತ್ರ ಮಾರ್ಗದಿಂದ ಮಾತ್ರ ಈ ದೇಶದಲ್ಲಿ ಕ್ರಾಂತಿ ಸಾಧ್ಯ ಎಂದು ಪ್ರತಿಪಾದಿಸುತ್ತಿದ್ದ ಈ ಪಕ್ಷ 1972ರ ತನಕ ಯಾವುದೇ ಸಾಮೂಹಿಕ ಸಮರಶೀಲ ಚಳವಳಿ ಕಟ್ಟುವುದಕ್ಕಿಂತ ಹೆಚ್ಚಾಗಿ ಹಳ್ಳಿಗಳಲ್ಲಿದ್ದ ದೊಡ್ಡ ಭೂಮಾಲೀಕರನ್ನು ಕೊಂದುಹಾಕಿ ಜನರಲ್ಲಿ ಕ್ರಾಂತಿಕಾರಿ ಉತ್ಸಾಹವನ್ನು ತುಂಬುವುದೇ ಪ್ರಧಾನ ಕ್ರಾಂತಿಕಾರಿ ಕಾರ್ಯತಂತ್ರವನ್ನಾಗಿ ಮಾಡಿಕೊಂಡಿತ್ತು, ಸಹಜವಾಗಿಯೇ ಈ ಎಡ ಸಾಹಸವಾದಿ ಪ್ರಯತ್ನಗಳು ಪ್ರಾರಂಭದಲ್ಲಿ ರಣೋತ್ಸಾಹವನ್ನು ತುಂಬಿದರೂ, ಆಗ ಅಧಿಕಾರ "ಬಲ"ವನ್ನು ಪಡೆದಿದ್ದ ಸಿಪಿಎಂ ಪಕ್ಷದ ನೇತೃತ್ವದಲ್ಲೇ ನಡೆದ ಕ್ರಾಂತಿಕಾರಿಗಳ ದಮನ ಕಾರ್ಯಾಚರಣೆಯಲ್ಲಿ ಸಾವಿರಾರು ಯುವ ನಕ್ಸಲೈಟರು ಹತರಾದರು. ನಕ್ಸಲೈಟರೂ ಸಹ "ಪ್ರಜಾಯುದ್ಧದ" ಭಾಗವಾಗಿ ನೂರಾರು ಸಿಪಿಎಂ ಕಾರ್ಯಕರ್ತರನ್ನು ಕೊಂದರು.

ಸಂಸದೀಯ ಪ್ರಜಾತಂತ್ರದಲ್ಲಿ ಆಯ್ಕೆಯಾಗುವ ಕಮ್ಯುನಿಸ್ಟ್ ಪಕ್ಷವೊಂದು ಕ್ರಾಂತಿಯನ್ನು ಮುನ್ನಡೆಸಲು ಅಧಿಕಾರವನ್ನು ಬಳಸಿಕೊಳ್ಳದೆ ಅಧಿಕಾರದಲ್ಲಿರುವುದನ್ನೇ ಪ್ರಮುಖ ಅಸ್ತ್ರವನ್ನಾಗಿ ಮಾಡಿಕೊಂಡರೆ ಹೇಗೆ ಕಾನೂನು-ಭದ್ರತೆಯ ಹೆಸರಲ್ಲಿ ಅಂತಿಮವಾಗಿ ಜನರನ್ನೇ ಕೊಂದು ಭೂಮಾಲೀಕರ ಅಧಿಪತ್ಯದ ಕಾವಲು ಕಾಯಬೇಕಾಗುತ್ತದೆ ಎಂಬುದು ಈ ಅವಧಿಯಲ್ಲಿ ಸ್ಪಷ್ಟಗೊಂಡಿತು. ಅದೇರೀತಿ ದೇಶ ಮಟ್ಟದಲ್ಲಿ ಒಂದು ಪ್ರಬಲ ಸಾಮೂಹಿಕ ರಾಜಕೀಯ ಜನ ಸಂಗ್ರಾಮದ ಬೆಂಬಲವಿಲ್ಲದಿದ್ದರೆ ಒಂದು ಕ್ರಾಂತಿಕಾರಿ ಹೋರಾಟ - ಅದೆಷ್ಟೇ ತ್ಯಾಗಶೀಲ ಮತ್ತು ಸಮರಶೀಲವಾಗಿದ್ದರೂ - ಹೇಗೆ ಪ್ರಭುತ್ವ ದಮನಕ್ಕೆ ತುತ್ತಾಗಿ ಅವಸಾನಗೊಳ್ಳುತ್ತದೆ ಎಂಬುದನ್ನು ಸಹ ಪಶ್ಚಿಮ ಬಂಗಾಳದ ಈ ಅವಧಿಯ ರಾಜಕಾರಣ ಸ್ಪಷ್ಟಗೊಳಿಸಿತ್ತು.

ಅಧಿಕಾರದಲ್ಲಿದ್ದ "ಬಲ ಕಾಮ್ರೇಡುಗಳಾಗಲೀ", ರಾಜಿರಹಿತ ಹೋರಾಟದ ಕಣದಲ್ಲಿದ್ದ ಎಡ ಕಾಮ್ರೇಡುಗಳಾಗಲೀ ಇದರಿಂದ ಏನೂ ಪಾಠ ಕಲಿಯದೇ ಇದ್ದಿದ್ದರಿಂದ ಇತಿಹಾಸ ಒಂದು ಸುತ್ತು ಸುತ್ತಿ ಹೊಸ ಆಯಾಮಗಳಲ್ಲಿ ಹಳೇ ಪ್ರಶ್ನೆಯನ್ನೇ ಮತ್ತೆ ಪಶ್ಚಿಮ ಬಂಗಾಳದ ಮುಂದೆ ಇರಿಸಿದೆ.

1977ರಲ್ಲಿ ಸ್ವತಂತ್ರವಾಗಿ ಅಧಿಕಾರಕ್ಕೆ ಬಂದ ಸಿಪಿಎಂ ಪಕ್ಷ "ಆಪರೇಷನ್ ಬರ್ಗಾ" ಎಂಬ ಬೃಹತ್ ಗೇಣಿದಾರರ ಪರವಾದ ಶಾಸನವನ್ನು ಜಾರಿಗೆ ತಂದಿತು. ಅದು ನಕ್ಸಲೈಟ್ ಚಳವಳಿ ಮುಂದಿಟ್ಟಷ್ಟು ಕ್ರಾಂತಿಕಾರಿ ಭೂ ಸುಧಾರಣಾ ಯೋಜನೆಯೇನೂ ಅಲ್ಲದಿದ್ದರೂ ಲಕ್ಷಾಂತರ ಗೇಣಿದಾರರಿಗೆ ಸ್ವತಂತ್ರವಾಗಿ ಮತ್ತು ಘನತೆಯಿಂದ ಬದುಕುವ ಅವಕಾಶವನ್ನು ಕಲ್ಪಿಸಿಕೊಟ್ಟಿತು. ಇದಲ್ಲದೆ ಎಡರಂಗ ಸರ್ಕಾರ 80ರ ದಶಕದಲ್ಲಿ ಜಾರಿಗೆ ತಂದ ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆ ಈವರೆಗೆ ಅಧಿಕಾರ ರಚನೆಯಲ್ಲಿ ಯಾವುದೇ ರೀತಿ ಪಾಲ್ಗೊಳ್ಳದ ಜನಸಮುದಾಯಕ್ಕೆ ಪ್ರಪ್ರಥಮ ಬಾರಿಗೆ ಅಧಿಕಾರವನ್ನು ಕೊಟ್ಟಿತು. ಇವೆಲ್ಲದರ ಆಧಾರದ ಮೇಲೆ ಸಿಪಿಎಂ ತನ್ನ ಪಕ್ಷದ ಜಾಲವನ್ನು ಹಳ್ಳಿಹಳ್ಳಿಯಲ್ಲಿ ಪ್ರಬಲವಾಗಿ ಬೆಳೆಸಿಕೊಳ್ಳಲು ಸಾಧ್ಯವಾಯಿತು.

ಕಾಂಗ್ರೆಸ್ 1947ರಿಂದ 1967ರವರೆಗೆ ಅವಿಚ್ಛಿನ್ನವಾಗಿ ಬಂಗಾಳದಲ್ಲಿ ರಾಜ್ಯಭಾರ ಮಾಡಿದ್ದರೂ 1967ರ ನಂತರ ಅದರೊಳಗೇ ಇದ್ದ ಗುಂಪುಗಾರಿಕೆಯ ಕಾರಣದಿಂದ ಬಲ ಹೀನಗೊಂಡರೆ ಹೊರಗೆ ಹೊಸ ಜನವರ್ಗಗಳನ್ನು ಸಿಪಿಎಂ ತನ್ನೆಡೆಗೆ ಬಲವಾಗಿ ಸೆಳೆದುಕೊಂಡಿತ್ತು, ಇದು ಬಂಗಾಳದ ರಾಜಕಾರಣದಲ್ಲಿ ಒಂದು ನಿರ್ವಾತವನ್ನು ಉಂಟುಮಾಡಿತ್ತು, ಇದಲ್ಲದೆ ಬಂಗಾಳದಲ್ಲಿ ಹಿಂದಿನಿಂದಲೂ ಪ್ರಗತಿಪರ ಪಾತ್ರ ನಿರ್ವಹಿಸಿಕೊಂಡು ಬಂದಿದ್ದ ಬಂಗಾಳಿ ರಾಷ್ಟ್ರೀಯವಾದಿ ಪ್ರಗತಿಪರ ಮಧ್ಯಮವರ್ಗದ ಬೆಂಬಲ ಸಹ ಎಡಪಕ್ಷಗಳು ಪಡೆದುಕೊಂಡವು. ಅದೇ ಸಮಯದಲ್ಲಿ 1967-77ರ ನಡುವೆ ಬಂಗಾಳಿ ಸಮಾಜದಲ್ಲಿ ಕ್ರಾಂತಿಕಾರಿ ನಕ್ಸಲೈಟ್ ಹೋರಾಟ ಮತ್ತದರ ದಮನದ ಕಾರಣದಿಂದ ಬಂಗಾಳಿ ಸಮಾಜದಲ್ಲಿ ಉಂಟಾಗಿದ್ದ ಕ್ಷೋಭೆಯಿಂದ ತತ್ತರಿಸಿದ್ದ ಬಂಗಾಳೀ ಜನತೆ ಸಿಪಿಎಂನಲ್ಲಿ



ಕ್ರಾಂತಿಯ ಆಶಯಗಳನ್ನು ಶಾಂತಿಯುತವಾಗಿ ಜಾರಿಗೆ ತರಬಲ್ಲ ಒಂದು ಸಾಧ್ಯತೆಯನ್ನು ಕಂಡಿತು. ಅಲ್ಲದೆ ದೇಶದ ಇತರ ಭಾಗಗಳಂತಲ್ಲದೆ ಬಂಗಾಳಿ ಸಮಾಜದಲ್ಲಿ ಮತ್ತು ರಾಜಕಾರಣದಲ್ಲಿ ಜಾತಿ ಧ್ರುವೀಕರಣಗಳು-ಸಮೀಕರಣಗಳು ಕೂಡಾ ಎಡ ರಾಜಕಾರಣಕ್ಕೆ ಸವಾಲಾಗುವಷ್ಟು ರೂಪುಗೊಳ್ಳಲಿಲ್ಲ, ಈ ಎಲ್ಲಾ ಕಾರಣಗಳು ಮೇಳೈಸಿ ಸಿಪಿಎಂ ಪಕ್ಷ ಸತತವಾಗಿ ಮುಂದಿನ ಎಲ್ಲಾ ಚುನಾವಣೆಗಳಲ್ಲೂ ಜಯಭೇರಿ ಬಾರಿಸಲು ಸಾಧ್ಯವಾಯಿತು.

ಆದರೆ ಈ ಪ್ರಕ್ರಿಯೆಯಲ್ಲಿ ಸಿಪಿಎಂ ಪಕ್ಷ ಒಂದು ದೊಡ್ಡ ಸೈದ್ಧಾಂತಿಕ ರಾಜಿಯನ್ನು ಮಾಡಿಕೊಂಡು ಬಿಟ್ಟಿತ್ತು, ಒಂದು ಅರೆ ಊಳಿಗಮಾನ್ಯ-ಅರೆವಸಾಹತು ದೇಶದಲ್ಲಿ ಸುದೀರ್ಘ ಪ್ರಜಾ ಯುದ್ಧದ ಮೂಲಕವೇ ಕ್ರಾಂತಿ ಸಾಧ್ಯ ಎಂಬ ನಕ್ಸಲರ ರಾಜಕೀಯವನ್ನೇ ಪ್ರಾರಂಭದಲ್ಲಿ ಸಿಪಿಎಂ ಕೂಡಾ ಪುನರುಚ್ಛರಿಸಿದರೂ ನಂತರದಲ್ಲಿ ಕ್ರಾಂತಿ ಎಂಬ ಪದವನ್ನೇ ತನ್ನ ನಿಘಂಟಿನಿಂದ ಕೈಬಿಟ್ಟಿತು. ಬರ್ಗಾ ಯೋಜನೆಯನ್ನು ಬಿಟ್ಟರೆ ಬಂಡವಾಳಶಾಹಿಗಳ ಸಾಮಾಜಿಕ ಮತ್ತು ಆರ್ಥಿಕ ಅಧಿಕಾರಕ್ಕೆ ಸವಾಲು ಹಾಕಬಲ್ಲ ಯಾವುದೇ ಶಾಸನವನ್ನಾಗಲೀ, ಹೋರಾಟವನ್ನಾಗಲೀ ಸಿಪಿಎಂ ಪಕ್ಷ ಬಂಗಾಳದಲ್ಲಿ ಮಾಡಲಿಲ್ಲ, ಸಂಸದೀಯ ಪ್ರಜಾತಂತ್ರದ ಚೌಕಟ್ಟಿನಲ್ಲಿ ಕೇವಲ ಒಂದು ರಾಜ್ಯದಲ್ಲಿ ಅದು ಮಾಡಲು ಸಾಧ್ಯವೂ ಇಲ್ಲ, ಅದು ಹೆಚ್ಚೆಂದರೆ ಒಂದು ಕ್ರಾಂತಿಕಾರಿ ಹೋರಾಟದ ಮುನ್ನಡೆಗೆ ಆಗೀಗ ಒಂದು ಸಾಧನವಾಗಿ ಬಳಕೆಯಾಗಬಹುದೇ ವಿನಃ ಅದೇ ತಂತ್ರ ಮತ್ತು ತತ್ವ ಎರಡು ಆಗಿಬಿಟ್ಟರೇ ಏನು ಪ್ರಮಾದವಾಗುತ್ತದೆ ಅನ್ನುವುದಕ್ಕೆ ಪಶ್ಚಿಮ ಬಂಗಾಳದಲ್ಲಿ ಸಿಪಿಎಂನ ಉತ್ಥಾನ ಮತ್ತು ಅವನತಿ ಒಂದು ದೊಡ್ಡ ಉದಾಹರಣೆ.


1977ರ ಆಪರೇಷನ್ ಬರ್ಗಾ ಲಕ್ಷಾಂತರ ಸಣ್ಣ ಮತ್ತು ಮಧ್ಯಮ ಸಣ್ಣ ಹಿಡುವಳಿದಾರರನ್ನು ಸೃಷ್ಟಿಸಿತು. ಆದರೆ ಒಂದು ಬಂಡವಾಳಶಾಹಿ ಆರ್ಥಿಕತೆಯ ನಡುವೆ ಸಣ್ಣ ಹಿಡುವಳಿಗಳು ತನ್ನಂತೆ ತಾನೇ ಉಳಿದು ಬೆಳೆಯಲು ಸಾಧ್ಯವಿಲ್ಲ, ಪ್ರಾರಂಭದಲ್ಲಿ ಗೇಣಿ ರದ್ಧತಿಯ ಮೂಲಕ ಭೂಮಿ ಹಕ್ಕು ಕೊಡಿಸಿದ ಎಡರಂಗ ಸರ್ಕಾರ ನಂತರದಲ್ಲಿ ಕೃಷಿಯನ್ನು ಸಮಾಜವಾದಿ ದಿಕ್ಕಿನಲ್ಲಿ ನಡೆಸಲಾಗಲೀ, ಅಥವಾ ಬಂಡವಾಳಶಾಹಿ ದಿಕ್ಕಿನಲ್ಲಿ ನಡೆಸಲಾಗಲೀ ಯಾವುದೇ ಕಾರ್ಯಕ್ರಮವನ್ನು ಹಾಕಿಕೊಳ್ಳಲಿಲ್ಲ, ಹೀಗೆ ಊಳಿಗಮಾನ್ಯ ಆರ್ಥಿಕತೆ ದುರ್ಬಲಗೊಂಡು ಉದ್ಭವವಾದ ಹೊಸ ಆರ್ಥಿಕ-ರಾಜಕೀಯ ಸನ್ನಿವೇಶ ರೈತಾಪಿಗೆ ಪೂರಕವಾಗಬೇಕಾದರೆ ಸಮಾಜವಾದಿ ರಾಜಕೀಯದ ನಾಯಕತ್ವ ಮತ್ತು ಆರ್ಥಿಕತೆಯನ್ನು ಬೇಡುತ್ತದೆ. ಆದರೆ ಸಿಪಿಎಂ ಮುಂದಿನ ದಿನಗಳಲ್ಲಿ ಆ ನಾಯಕತ್ವವನ್ನು ನೀಡಲಿಲ್ಲ, ಹೀಗಾಗಿ ಸಹಜವಾಗಿ ಸಣ್ಣ ಹಿಡುವಳಿಗಳು ಸರ್ಕಾರದ ಇತರ ಯಾವುದೇ ಮಾರುಕಟ್ಟೆ ಸಂಬಂಧೀ ಬೆಂಬಲವಿಲ್ಲದೆ ಇನ್ನಷ್ಟು ವಿಘಟಿತವಾಗುತ್ತಾ ಹೋದವು. ಆದರೆ ಅದೇ ಸಮಯದಲ್ಲಿ ಸಿಪಿಎಂ ಪಕ್ಷದ ಕೃಪಾಶ್ರಯದಲ್ಲಿ ಇತರೇ ಆದಾಯ ಮೂಲಗಳನ್ನು ಹೊಂದಿದ್ದ ಕಾರ್ಯಕರ್ತರ ಅಥವಾ ಬೆಂಬಲಿಗರ ವರ್ಗವೊಂದು ಗ್ರಾಮೀಣ ಪ್ರದೇಶದಲ್ಲಿ ಹೊಸ ಕುಲೀನ ವರ್ಗವಾಗಿ ಬೆಳೆದವು. ಗ್ರಾಮದ ಉಳಿದ ಜನ ಈ ವರ್ಗಗಳ ಕೃಪಾಶ್ರಯದಲ್ಲೇ ಬದುಕಬೇಕಾದ ಸಂದರ್ಭ ಸೃಷ್ಟಿಯಾಯಿತು. ಈ ವರ್ಗ ಅತ್ತ ಬಂಡವಾಳಶಾಹಿಯೂ ಅಲ್ಲದ ಇತ್ತ ಸಮಾಜವಾದಿಯೂ ಅಲ್ಲದ ಪ್ರಭುತ್ವ ಬೆಂಬಲಿತ ನವ ಊಳಿಗಮಾನ್ಯ ವರ್ಗವಾಗಿಬಿಟ್ಟದ್ದು ಬಂಗಾಳದ ರಾಜಕೀಯ ಮತ್ತು ಆರ್ಥಿಕ ಸ್ಥಗಿತತೆಗೂ ಕಾರಣವಾಯಿತು.

ಈ ಹೊಸ ವರ್ಗ ಹುಟ್ಟುಹಾಕಿದ ಸಂಸ್ಕೃತಿಯಿಂದಾಗಿ ಬಂಗಾಳದ ಸಾರ್ವಜನಿಕ ಬದುಕಿನ ಎಲ್ಲಾ ರಂಗಗಳೂ ಸಹ ಕ್ರಮೇಣವಾಗಿ ಸಿಪಿಎಂ ಪಕ್ಷದ ಕಪಿಮುಷ್ಟಿಯಲ್ಲಿ ಸಿಲುಕಿಕೊಂಡಿತು. ಕೊನೆಗೆ ಗ್ರಾಮ ಮಟ್ಟದ ಪಂಚಾಯತಿ ಅಥವಾ ಇತರ ಅಧಿಕಾರ ರಚನೆಗಳಿಗಿಂತ ಪಕ್ಷದ ಕಚೇರಿಯೇ ನಿಜವಾದ ವಿಧಾನ ಸೌಧವಾಗಿ ಪರಿಣಮಿಸಿತು. ಈ ನವ ಊಳಿಗಮಾನ್ಯ ವರ್ಗ ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಲು ಮತ್ತು ಬೆಳೆಸಿಕೊಳ್ಳಲು ಎಲ್ಲಾ ಬಗೆಯ ದಮನಕಾರಿ ತಂತ್ರಗಳನ್ನೂ ಪ್ರಯೋಗಿಸಲು ಪ್ರಾರಂಭಿಸಿತು. ಗ್ರಾಮೀಣ ಬಂಗಾಳದಲ್ಲಿ 80ರ ಕೊನೆಯ ಭಾಗದ ಹೊತ್ತಿಗಾಗಲೇ ಉಸಿರುಗಟ್ಟಿಸುವ ವಾತಾವರಣ ಸೃಷ್ಟಿಯಾಗತೊಡಗಿತ್ತು.

ನಿರಂಕುಶತ್ವ ಮತ್ತು ಅಧಿಕಾರ ಎರಡೂ ಒಟ್ಟಿಗೆ ಒಂದುಕಡೆ ಸೇರಿದಾಗ ಯಾವುದೇ ಬಗೆಯ ಪರ್ಯಾಯ ರಾಜಕಾರಣ ಹುಟ್ಟಿಕೊಳ್ಳುವುದು ಬಹಳ ಕಷ್ಟ. ಪಶ್ಚಿಮ ಬಂಗಾಳದಲ್ಲಿ 80ರ ದಶಕದ ನಂತರ ಪದೇ ಪದೇ ಸಿಪಿಎಂ ಅನ್ನು ಅದಿಕಾರಕ್ಕೆ ತರುತ್ತಿದ್ದದ್ದು ಜನಪ್ರಿಯತೆಗಿಂತ ಹೆಚ್ಚಾಗಿ ಪರ್ಯಾಯವಿಲ್ಲದ ಅನಿವಾರ್ಯತೆಯೇ.

ಮತ್ತೊಂದೆಡೆ ಗ್ರಾಮೀಣ ಆರ್ಥಿಕತೆ ಕೃಷಿಯಲ್ಲಿ ಉದ್ಯೋಗವನ್ನೂ ಸೃಷ್ಟಿಸದಷ್ಟು ಅಶಕ್ತವಾಗಿ ನಿರುದ್ಯೋಗ ಹೆಚ್ಚಿತು. ಆದರೆ ನಗರದಲ್ಲಿ ಈ ರೈತಾಪಿ ನಿರುದ್ಯೋಗವನ್ನು ಸೆಳೆಯುವಷ್ಟು ಔದ್ಯೋಗಿಕ ಆರ್ಥಿಕತೆ ಬೆಳೆದಿರಲಿಲ್ಲ, ಸಾಮಾನ್ಯ ಜನರು ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿ ಅದರ ಆಧಾರದಲ್ಲಿ ಗೃಹ ಮಾರುಕಟ್ಟೆಯನ್ನು ಬೆಳೆಸಬೇಕು. ಈ

ಶಿವಸುಂದರ್



ಚಾರ್ವಾಕ

ಗೃಹ ಮಾರುಕಟ್ಟೆಯ ಅಗತ್ಯಗಳನ್ನು ಪೂರೈಸುವ ಪ್ರಕ್ರಿಯೆಯಲ್ಲಿಯೇ ಕೈಗಾರಿಕೆಗಳು ಬೆಳೆಯಬೇಕು ಎಂಬುದೇ ದೇಶದಲ್ಲಿ ಜಾರಿ ಇರುವ ಮಾರುಕಟ್ಟೆ ಆರ್ಥಿಕತೆಗೆ ಪರ್ಯಾಯವಾಗಿ ಸಿಪಿಎಂ ಮುಂದಿಡುವ ಪರ್ಯಾಯ ಜನಪರ ಆರ್ಥಿಕತೆ. ಆದರೆ 80ರ ಕೊನೆಯ ವೇಳೆಯಿಂದಲೂ ಬಂಗಾಳ ಅನುಸರಿಸುತ್ತಾ ಬಂದದ್ದು ಸೋಮನಾಥ್ ಚಟರ್ಜಿ ಸಮಿತಿಯ ಶಿಫಾರಸ್ಸುಗಳನ್ನೇ. ಅಂದರೆ ಜನರ ಅಗತ್ಯಗಳಿಗಿಂತ ಹೆಚ್ಚಾಗಿ ರಫ್ತು ಆಧಾರಿತ ಉದ್ಯಮಗಳನ್ನು ಸೃಷ್ಟಿಸುವ ಅತ್ಯಂತ ಲಾಭಕೋರ ವಿದೇಶಿ ಬಂಡವಾಳ ಹೂಡಿಕೆಯ ಮಾರ್ಗವನ್ನೇ! ಹೀಗಾಗಿ ನಗರದಲ್ಲೂ ಸಹ ಜನತೆಗೆ ಪೂರಕವಾದ ಆರ್ಥಿಕ ಕ್ರಮಗಳನ್ನು ತೆಗೆದುಕೊಳ್ಳುವ ಬದಲಿಗೆ ಈ ವಿದೇಶಿ ಬಂಡವಾಳಕ್ಕೆ ಪೂರಕವಾದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವುದೇ ಸಿಪಿಎಂ ನೇತೃತ್ವದ ಸರ್ಕಾರದ ಆಡಳಿತದ ಪ್ರಥಮ ಆದ್ಯತೆಯಾಯಿತು. ಹೀಗಾಗಿ ಜನಸ್ನೇಹೀ ಟ್ರಾಮ್‌ಗಳನ್ನು ತೆಗೆದುಹಾಕಲಾಯಿತು. ಕೋಲ್ಕತ್ತಾದ ಸುಂದರೀಕರಣದ ಹೆಸರಿನಲ್ಲಿ ರಸ್ತೆ ಬದಿ ವ್ಯಾಪಾರಿಗಳನ್ನು ಎತ್ತಂಗಡಿ ಮಾಡಿಸಲಾಯಿತು. ಹಲವಾರು ಸರ್ಕಾರಿ ಕಾರ್ಖಾನೆಗಳು ಮುಚ್ಚಿಕೊಂಡು ಸಾವಿರಾರು ಜನರು ಬೀದಿಗೆ ಬಿದ್ದರು. ಖಾಸಗಿ ಬಂಡವಾಳದ ಮೇಲಿದ್ದ ನಿಯಂತ್ರಣವನ್ನೂ ಸಡಿಲಗೊಳಿಸಿದ್ದರಿಂದ ದೊಡ್ಡ ದೊಡ್ಡ ಖಾಸಗಿ ಕಾರ್ಖಾನೆಗಳೂ ದಿಢೀರನೆ ರಿಯಲ್ ಎಸ್ಟೇಟ್ ದಂಧೆಗೆ ಇಳಿದು ಕಾರ್ಮಿಕರನ್ನು ಬೀದಿ ಪಾಲು ಮಾಡಿತು.

ಹೀಗೆ ಒಂದು ಹಂತದ ನಂತರ ವಿಶೇಷವಾಗಿ 1991ರ ನಂತರ ಸಿಪಿಎಂ ನೇತೃತ್ವದ ಸರ್ಕಾರ ಜನವಿರೋಧಿ ನೀತಿಗಳ ವಿರುದ್ಧ ಜನರ ಪ್ರತಿಭಟನೆಗಳೂ ಪ್ರಾರಂಭವಾದವು. ಆದರೆ ಅವನ್ನೆಲ್ಲಾ ಸಿಪಿಎಂ ಸರ್ಕಾರ ಮತ್ತು ಪಕ್ಷಗಳೆರಡು ಕ್ರೂರವಾಗಿ ದಮನ ಮಾಡಿದವು. ಅದರಲ್ಲೂ ಪೊಲೀಸರಿಗಿಂತ ಹೆಚ್ಚಾಗಿ ಸಿಪಿಎಂ ಪಕ್ಷದ ಕಾರ್ಯಕರ್ತರು ರಾಜಕೀಯ ವಿರೋಧಿಗಳ ವಿರುದ್ಧ ನಡೆಸುತ್ತಿದ್ದ ದಮನ ಅಸಹನೀಯ ಮಟ್ಟವನ್ನು ತಲುಪಿತು.

ಈ ಸಂದರ್ಭದಲ್ಲೇ ಅಲ್ಲಿ ಮಾವೋವಾದಿಗಳ ಚಳವಳಿ ನಿಧಾನವಾಗಿ ಬೇರು ಬಿಡಲು ಪ್ರಾರಂಭಿಸಿತು. ಸರ್ಕಾರದ ಮತ್ತು ಪಕ್ಷದ ಹಿಂಸಾತ್ಮಕ ಗೂಂಡಾಗಿರಿಯನ್ನು ಹಿಂಸಾತ್ಮಕವಾಗಿಯೇ ಎದುರಿಸಿದ ಮಾವೋವಾದಿಗಳು ಮಿಡ್ನಾಪುರ್ ಇನ್ನಿತ್ಯಾದಿ ಕಡೆಗಳಲ್ಲಿ ಸಿಪಿಎಂ ಗೂಂಡಾಗಿರಿಯನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿದರು. ಇದು ಆವರೆಗೆ ಪರ್ಯಾಯವಿಲ್ಲದೆ ತತ್ತರಿಸುತ್ತಿದ್ದ ಜನರಿಗೆ ಒಂದು ಆಶಾಕಿರಣವನ್ನು ಹುಟ್ಟಿಹಾಕಿತು. ನಂತರ ಸಿಂಗೂರ್ ಮತ್ತು ನಂದಿಗ್ರಾಮಗಳಲ್ಲಿ ವಿದೇಶಿ ಮತ್ತು ಸ್ವದೇಶಿ ಕಾರ್ಪೊರೇಟ್ ಬಂಡವಾಳದ ಪರವಾಗಿ ಸಿಪಿಎಂ ಸರ್ಕಾರ ಜನರ ಮೇಲೆ ಗೋಲಿಬಾರ್ ಮಾಡಿತು. ತನ್ನ ಪಕ್ಷದ ಕಾರ್ಯಕರ್ತರ ಮೂಲಕ ಕೊಲೆ ಮತ್ತು ಅತ್ಯಾಚಾರಗಳನ್ನು ನಡೆಸಿತು. ಹೀಗಾಗಿ ಸಿಪಿಎಂ ಬಗ್ಗೆ ಬಂಗಾಳದಲ್ಲಿ ಸಾಮಾನ್ಯ ಜನರು ಮಾತ್ರವಲ್ಲದೆ ಮಧ್ಯಮವರ್ಗವೂ ಬೇಸರಿಸಿಕೊಳ್ಳಲು ಪ್ರಾರಂಭಿಸಿತು. ಇದನ್ನು ತೀರಾ ಇತ್ತೀಚಿನವರೆಗೆ ಬಂಗಾಳದ ರಾಜ್ಯಪಾಲರಾಗಿದ್ದ ಗೋಪಾಲ್ ಗಾಂಧಿಯವರೇ ಸ್ಪಷ್ಟವಾಗಿ ಬಯಲುಗೊಳಿಸಿದ್ದಾರೆ.

ಅದರಲ್ಲೂ ಲಾಲ್‌ಘಡದಲ್ಲಿ ಆದಿವಾಸಿಗಳು ಎತ್ತಂಗಡಿಯನ್ನು ವಿರೋಧಿಸಿ ನಡೆಸುತ್ತಿದ್ದ ಶಾಂತಿಯುತ ಹೋರಾಟದ ಮೇಲೆ ಪೊಲೀಸ್ ದಮನವನ್ನು ಪ್ರಾರಂಭಿಸಿದ ಸಿಪಿಎಂ ಪಕ್ಷ ತನ್ನ ಅತಿರೇಕವನ್ನು ಯಾವ ರೀತಿಯಿಂದಲೂ ಸಮರ್ಥಿಸಿಕೊಳ್ಳಲು ಸಾಧ್ಯವೇ ಇರಲಿಲ್ಲ, ಯಾವ ಪಕ್ಷ ಮೂವತ್ತು ವರ್ಷಗಳ ಹಿಂದೆ ತನಗೆ ಭೂಮಿ ಕೊಡಿಸಿತ್ತೋ ಈಗ ಅದೇ ಪಕ್ಷ ತನ್ನಿಂದ ಭೂಮಿ ಕಸಿದುಕೊಂಡು ವಿದೇಶೀ ಕಂಪನಿ ಗಳಿಗೆ ಪರಭಾರೆ ಮಾಡುತ್ತಿರುವುದರ ವಿರುದ್ಧ ಬಂಗಾಳದ ಜನತೆ ಬೀದಿಗಿಳಿದು ನಿರಂತರ ಹೋರಾಟ ನಡೆಸಲು ಪ್ರಾರಂಭಿಸಿದರು. ಇದರಲ್ಲಿ ಹಲವು ಹೋರಾಟಗಳು - ಅದರಲ್ಲೂ ಲಾಲ್ ಘಡ್ ಹೋರಾಟ - ಬಹುಕಾಲದವರೆಗೆ ಯಾವುದೇ ಮಾವೋವಾದಿಗಳ ಬೆಂಬಲವಿಲ್ಲದ ಶಾಂತಿಯುತ ಅಸಹಕಾರ ಚಳವಳಿಯಾಗಿಯೇ ಇದ್ದವು. ಆದರೂ ಅದರ ಮೇಲೆ ಸಿಪಿಎಂ ಸರ್ಕಾರದ ಪೊಲೀಸು ಮತ್ತು ಅರೆ ಮಿಲಿಟರಿ ಪಡೆಗಳು ಕೊಲೆ, ಸುಲಿಗೆ, ಅತ್ಯಾಚಾರ, ಸುಳ್ಳು ಎನ್‌ಕೌಂಟರ್ ಇನ್ನಿತ್ಯಾದಿ ಹೇಳಲಾಗದಂಥ ದೌರ್ಜನ್ಯಗಳನ್ನು ನಡೆಸಿದವು. ನಂತರದಲ್ಲಿ ಮಾವೋವಾದಿಗಳು ಆ ಹೋರಾಟಕ್ಕೆ ಪ್ರವೇಶ ಮಾಡಿದರು. ಅವರ ಎಡ ಸಾಹಸವಾದಿ ಕಾರ್ಯತಂತ್ರಗಳು ಪ್ರಾರಂಭದಲ್ಲಿ ಹೋರಾಟಕ್ಕೆ ಪೂರಕವಾಗಿದ್ದರೂ ನಂತರದಲ್ಲಿ ಪ್ರಭುತ್ವ ದಮನಕ್ಕೆ ಒಂದು

▶▶ 7

ನಮ್ಮ ಸೌಹಾರ್ದ ಪರಂಪರೆಯ ವಿವಿಧ ಮುಖಗಳು


'ಪಂಚ ಪ್ಯಾರಿ'ಗಳು




• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ನಮ್ಮ ದೇಶ ಒಂದು ರೀತಿಯಲ್ಲಿ ನಿಜವಾಗಲೂ ...ದ್ಭುತ. ಯಾಕೆಂದರೆ ಬೇರೆ ಇನ್ಯಾವ ದೇಶದಲ್ಲೂ ಇಲ್ಲಿ ...ಸಿರುವಷ್ಟು ಧರ್ಮಗಳು, ಮತಗಳು, ಪಂಥಗಳು, ...ಚಾರಗಳು ಎಲ್ಲೂ ಹುಟ್ಟಿಲ್ಲ, ಹೊರಗಿನಿಂದ ಬಂದ ...ರ್ಮಗಳನ್ನು ಇಲ್ಲಿ ಸ್ವೀಕರಿಸಿದಂತೆ ಬೇರೆ ಎಲ್ಲೂ ಸ್ವೀಕರಿಸಿಲ್ಲ, ...ಲ್ಲಿರುವಷ್ಟು ಭಾಷೆಗಳಾಗಲಿ, ಸಂಸ್ಕೃತಿಗಳಾಗಲಿ, ...ವಿಧ್ಯತೆಗಳಾಗಲಿ, ರಾಷ್ಟ್ರಗಳಾಗಲಿ ಇನ್ನೆಲ್ಲೂ ಸಿಗುವುದಿಲ್ಲ. ...ಇಷ್ಟೆಲ್ಲರ ನಡುವೆಯೂ ಇಲ್ಲಿನ ವಿವಿಧ ...ಮುದಾಯಗಳು, ಧರ್ಮಗಳು ಸಾವಿರಾರು ವರ್ಷಗಳಿಂದ ...ಹಾರ್ದಯುತವಾಗಿಯೇ ಬದುಕಿ ಬಾಳಿವೆ. ಪರಸ್ಪರ ...ಂಚಿಕೊಂಡಿವೆ, ಬೆಳೆದಿವೆ. ಇದಕ್ಕೆ ಒಂದು ...ದಾಹರಣೆಯನ್ನು ಕೊಡಬಹುದು.

17ನೇ ಶತಮಾನದಲ್ಲಿ ಈಗಿನ ಪಂಜಾಬ್ ...ಜ್ಯದಲ್ಲಿರುವ ಆನಂದ್‌ಪುರ್ ಸಾಹಿಬ್ ಎಂಬ ನಗರದಲ್ಲಿ ...ಸಾಕಿ ಹಬ್ಬದ ದಿನದಂದು ಗುರು ಗೋಬಿಂದ್ ಸಿಂಗ್ ...ವರು ಸಿಖ್ಖರ ಖಲ್ಸವನ್ನು ಪ್ರಾರಂಭಿಸುವ ಮುನ್ನ ತನಗೆ ...ಮ್ಮ ಜೀವವನ್ನೇ ಕೊಡಲು ತಯಾರಿರುವ ಐವರು ...ಸ್ವಂಸೇವಕರು ಮುಂದೆ ಬರಬೇಕೆಂದರು. ಆಗ ಮುಂದೆ ...ದ ಐವರು ಗುರುಗಳಿಂದ 'ಅಮೃತ'ವನ್ನು ಪಡೆದ ... ಖಲ್ಸಾದ 'ಪಂಚ'ರಾದರು. ಆ ಐವರಲ್ಲಿ ಭಾಯ್ ...ಹಿಬ್ ಸಿಂಗ್ ಎಂಬುವವರೂ ಒಬ್ಬರು.

ಈ ಸಾಹಿಬ್ ಸಿಂಗ್ ನಮ್ಮ ಬೀದರ್‌ನವರು. ...ಕ ಸಮುದಾಯಕ್ಕೆ ಸೇರಿದ್ದ ಗುರು ನಾರಾಯಣ ...ತ್ತು ಅನಕಮ್ಮ ಎಂಬ ದಂಪತಿಗಳಿಗೆ 1662 ರಲ್ಲಿ ...ಸಿದ್ದ ಭಾಯ್ ಸಾಹಿಬ್ ಸಿಂಗ್‌ನ ಮೂಲ ಹೆಸರು ...ಬ್ ಚಾಂದ್. 16ನೇ ಶತಮಾನದ ಆರಂಭದಲ್ಲಿ ...ರು ಗೋಬಿಂದ್ ಸಿಂಗ್ ಅವರು ಬೀದರ್‌ಗೆ ಭೇಟಿ ...ನೀಡಿದ್ದರು ಮತ್ತು ಅಲ್ಲಿ ಅವರ ಗೌರವಾರ್ಥ ಒಂದು ...ಟ್ಟ ಗುಡಿಯನ್ನು ಕಟ್ಟಲಾಗಿತ್ತು. ಗುರು ಗೋಬಿಂದ್ ...ವರಿಂದ ಪ್ರಭಾವಿತನಾದ ಸಾಹಿಬ್ ಚಾಂದ್ ...ಜಾಬಿಗೆ ಹೋಗಿ ...ಗಳ ಜೊತೆ ...ಕೊಂಡ, ಪ್ರಥಮ ...ತರಲ್ಲಿ ...ರಾದರು. ...ಅದ್ಭುತ ...ಕಾರರಾಗಿದ್ದ ...ಹಿಬ್ ಸಿಂಗ್ ... ಗುರುಗಳ ...ತೆಗೂಡಿ ...ಘಲ್ಲರ ...ದೊಂದಿಗೆ ...ರಾಡಿದ್ದರು. ಚಮಕೌರ್ ಎಂಬಲ್ಲಿ 1705ರಲ್ಲಿ ...ದ ಯುದ್ಧದಲ್ಲಿ ಸಾಹಿಬ್ ಸಿಂಗ್ ಹುತಾತ್ಮರಾದರು. ...ಸಿಖ್ ಗೆಳೆಯರಿಗೆ "ನಿಮ್ಮ ಧರ್ಮದ ಪ್ರಥಮ ...ರಲ್ಲಿ ನಮ್ಮ ರಾಜ್ಯದವರೂ ಇದ್ದಾರೆ ಗೊತ್ತಾ?" ...ಎಂದು ಕೇಳಿದಾಗ ಅವರೆಲ್ಲರಿಗೆ ಅಚ್ಚರಿಯಾಗುತ್ತದೆ. ...ಕೆಂದರೆ ಹೇಗೆ ಬಹಳಷ್ಟು ಕನ್ನಡಿಗರಿಗೆ ಗುರು ಗೋಬಿಂದ್ ಸಿಂಗ್‌ರ 'ಪಂಚ ಪ್ಯಾರಿ'ಗಳಲ್ಲಿ ಕರ್ನಾಟಕದವರೂ ಒಬ್ಬರಿದ್ದರು ಎಂಬುದು ಗೊತ್ತಿಲ್ಲವೋ ಹಾಗೆ ಹೆಚ್ಚು ಸಿಖ್ಖರಿಗೂ ಗೊತ್ತಿಲ್ಲ.


ಮಿಯಾ ಮರ್ದಾನ

ಎಲ್ಲಿಯ ಪಂಜಾಬಿನಲ್ಲಿ ಜನಿಸಿದ ಸಿಖ್ ಧರ್ಮ, ಎಲ್ಲಿಯ ಬೀದರ್‌ನ ಸಾಹಿಬ್ ಸಿಂಗ್ ಎಂದು ನೋಡಿದರೆ ಅಚ್ಚರಿಯಾಗುತ್ತದೆ.

ಅದೆಲ್ಲ ಇರಲಿ, ನಮ್ಮ ದೇಶದ ಸಹಬಾಳ್ವೆ ಪರಂಪರೆ ಬಗ್ಗೆ ಗೆಳೆಯರೊಬ್ಬರು ಕಳುಹಿಸಿದ ಈಮೇಲ್ ಭಾಯ್ ಸಾಹಿಬ್ ಸಿಂಗ್‌ರ ನೆನಪನ್ನು ತಂದಿತು: ಅದನ್ನು ನಿಮ್ಮೊಂದಿಗೆ ಹಂಚಿಕೊಂಡಿದ್ದೇನೆ.

ಗೆಳೆಯರು ಕಳುಹಿಸಿದ ಈಮೇಲ್ ನಿಜವಾಗಲೂ ಅಚ್ಚರಿ ಹುಟ್ಟಿಸುತ್ತದೆ. ಅದರಲ್ಲಿರುವ ಬಹಳಷ್ಟು ವಿಷಯಗಳು ನನಗೆ ಗೊತ್ತಿರಲೇ ಇಲ್ಲ. ಅದು ನಿಮ್ಮನ್ನೂ ಚಕಿತಗೊಳಿಸುತ್ತದೆ ಎಂದು ಇಲ್ಲಿ ಕೊಡುತ್ತೇನೆ:


ದಾರಾಶಿಕೊ


* ಮೊಘಲ್ ದೊರೆ ಶಹಜಹಾನನ ಹಿರಿಯ ಮಗ ರಾಜಕುಮಾರ ದಾರಾ ಶಿಕೊ ಕನಿಷ್ಠ ಐವತ್ತು ಉಪನಿಷತ್‌ಗಳನ್ನು ಸಂಸ್ಕೃತದಿಂದ ಪರ್ಶಿಯಾ ಭಾಷೆಗೆ ಅನುವಾದಿಸಿದ್ದ. ಅದಕ್ಕೆ ಪ್ರೇರಣೆ ನೀಡಿದ್ದು ಒಂದು ದಿನ ಆತನ ಕನಸಿನಲ್ಲಿ ಶ್ರೀರಾಮ ಪ್ರತ್ಯಕ್ಷನಾಗಿ ಉಪನಿಷತ್ತುಗಳನ್ನು ಅನುವಾದಿಸು ಎಂದು ದಾರಾನಿಗೆ ಸೂಚಿಸಿದ್ದು. ದಾರಾ ಶಿಕೊ ಅನುವಾದಿಸಿದ್ದ ಉಪನಿಷತ್ತುಗಳೇ ಪಾಶ್ಚಿಮಾತ್ಯ ದೇಶಗಳನ್ನು ತಲುಪಿ ಭಾರತದ ವೈದಿಕ ಸಂಸ್ಕೃತಿಯನ್ನು ಅಲ್ಲಿನ ಜನರಿಗೆ ಪರಿಚಯಿಸಿದ್ದು.

ದಾರಾ ಶಿಕೊ ಎಂಥ ಅದ್ಭುತ ಸಂಸ್ಕೃತ ಪಂಡಿತನಾಗಿದ್ದರೆಂದರೆ ಆತನನ್ನು ಕಾಶಿಯ ಪಂಡಿತರೂ ಮೆಚ್ಚಿದ್ದರು. ಮಾತ್ರವಲ್ಲ ಕೋಮು ಸೌಹಾರ್ದವನ್ನು ದಾರಾ ಬಯಸುತ್ತಿದ್ದರಿಂದ ಆತ ಸಿಖ್ ಸಮುದಾಯದವರಿಗೂ ಹತ್ತಿರದವನಾಗಿದ್ದ. ಆ ಕಾರಣಕ್ಕೇ ಅಮೃತಸರದಲ್ಲಿ ಸಿಖರ ಪುಣ್ಯಕ್ಷೇತ್ರವಾದ ಸ್ವರ್ಣ ದೇವಾಲಯಕ್ಕೆ ಅಡಿಗಲ್ಲನ್ನು ಹಾಕುವ ಸಂದರ್ಭದಲ್ಲಿ ಆತನನ್ನು ವಿಶೇಷ ಅತಿಥಿಯಾಗಿ ಆಹ್ವಾನಿಸಿದ್ದರು.

ಇಂತಹ ದಾರಾನನ್ನು ಆತನ ಒಡಹುಟ್ಟಿದವನೇ ಆದ ಔರಂಗಜೇಬ ಕೊಲ್ಲಿಸಿದ. ಮಾತ್ರವಲ್ಲ ಜನ ಆತನನ್ನು ಮರೆತುಬಿಡಬೇಕೆಂದು ಆತನ ಶವವನ್ನು ಒಂದು ಸಮಾಧಿಯೂ ಇಲ್ಲದಂತಹ ಅಜ್ಞಾತ ಸ್ಥಳದಲ್ಲಿ ಹೂತುಹಾಕಿಸಿದ.

* 'ರಾಮಚರಿತ್ರಮಾನಸ'ವನ್ನು ಜನರ ಭಾಷೆಯಲ್ಲಿ ಬರೆದದ್ದು ತುಳಸಿದಾಸರು. ಆದರೆ ಸಂಸ್ಕೃತದಲ್ಲಿದ್ದ ರಾಮಾಯಣವನ್ನು ಜನರ ಭಾಷೆಯಲ್ಲಿ ಬರೆಯ ಕೂಡದೆಂದು ಆಗಿನ ಕಾಲದ ಪುರೋಹಿತಶಾಹಿಗಳು ತುಳಸಿದಾಸರ ಮೇಲೆ ಅಪಾರ ಒತ್ತಡ ತಂದರು. ಆಗ ತುಳಸಿದಾಸರಿಗೆ ರಕ್ಷಣೆ ನೀಡಿದ್ದು ಮೊಘಲ್ಲರ ರಾಜ್ಯಪಾಲರಾಗಿದ್ದ ಮತ್ತು ತುಳಸಿದಾಸರ ನಿಕಟ ಸ್ನೇಹಿತರಾಗಿದ್ದ ಅಬ್ದುಲ್ ರಹೀಮ್ ಖನ್ನಾನ್ ಎಂಬುವವರು.
* ಪಂಜಾಬಿನ ಖ್ಯಾತ ಸೂಫಿ ಕವಿಯಾಗಿದ್ದ ಬಾಬಾ ಬುಲ್ಲೆ ಶಾ ಅವರ ಗುರುಗಳಾಗಿದ್ದವರು. ಮಾಧವಲಾಲ್ ಹುಸೇನ್ ಎಂಬುವವರು. ಹಿಂದೂ ಮತ್ತು ಮುಸ್ಲಿಮ್ ಹೆಸರುಗಳನ್ನು ಇವರು ಇಟ್ಟುಕೊಂಡಿದ್ದರೂ ಅವರು ಹಿಂದೂ ಧರ್ಮದವರಾಗಿರಲಿಲ್ಲ, ಮುಸಲ್ಮಾನ ಧರ್ಮದವರೂ ಆಗಿರಲಿಲ್ಲ. ಮಾಧವಲಾಲ್ ಹುಸೇನ್ ಅವರು ಹಿಂದೊಮ್ಮೆ ಹೇಳಿದ್ದ ಒಂದು ಸಾಲು ಇವತ್ತಿಗೂ ಅನ್ವಯಿಸುತ್ತದೆ. ಅದೇನೆಂದರೆ: "ಮಂದಿರವನ್ನು ಒಡೆದುಹಾಕು, ಮಸೀದಿಗಳನ್ನು ತೊಡೆದುಹಾಕು, ಬೇರೆ ಏನನ್ನು ಬೇಕಾದರೂ ಕಿತ್ತು ಹಾಕು. ಆದರೆ ಮನುಷ್ಯನ ಹೃದಯಕ್ಕೆ ಮಾತ್ರ ಘಾಸಿ ಮಾಡಬೇಡ. ಏಕೆಂದರೆ ಅಲ್ಲಿ ದೇವರು ನೆಲೆಸಿದ್ದಾನೆ!"
* ಗುಜರಾತಿನ ಅಹಮದಾಬಾದಿನಲ್ಲಿರುತ್ತಿದ್ದ 'ಸುಹಾಗನ್ ಸೂಫಿ' ಎಂಬ ಪಂಗಡದವರು ಹಿಂದೂ ವಧುಗಳಂತೆ ಕೆಂಪು ಕುಂಕುಮ ಮತ್ತು ಬಳೆಗಳನ್ನು ಧರಿಸುತ್ತಿದ್ದರು. ಯಾಕೆಂದರೆ ಅವರು ತಮ್ಮನ್ನು 'ದೇವರ/ಅಲ್ಲಾಹು' ವಧುಗಳೆಂದು ಕರೆದುಕೊಳ್ಳುತ್ತಿದ್ದರು. ಇವತ್ತಿಗೂ ಸುಹಾಗನ್ ಸೂಫಿಗಳ ಸಮಾಧಿಗಳಿರುವ ದರ್ಗಾಗಳಲ್ಲಿ ಕೆಂಪು ಕುಂಕುಮ ಮತ್ತು ಬಳೆಗಳನ್ನು ಭಕ್ತಾದಿಗಳು ಅರ್ಪಿಸುತ್ತಾರೆ.
* 'ಜೈ ಹಿಂದ್' ಎಂಬ ಘೋಷಣೆಯನ್ನು ಮೊದಲು ಕೂಗಿದ್ದ ಸುಭಾಶ್ ಚಂದ್ರ ಬೋಸ್ ಅವರ ಐಎನ್‌ಎ ಸೈನ್ಯದಲ್ಲಿದ್ದ ಕ್ಯಾಪ್ಟನ್ ಅಬಿದ್ ಹುಸನ್ ಎಂಬ ಮುಸ್ಲಿಮ್.
* ಮರಾಠ ಯೋಧ ಶಿವಾಜಿಯ ಸೈನ್ಯದಲ್ಲಿ ಹಿಂದೂ ಮತ್ತು ಮುಸಲ್ಮಾನ ಜನರಲ್‌ಗಳಿದ್ದರು. ಮತ್ತು ಶಿವಾಜಿ ಎಲ್ಲ ಧರ್ಮದವರನ್ನೂ ಸಮಾನವಾಗಿ ಕಾಣುತ್ತಿದ್ದ. ಅದಕ್ಕೇ ಆತ ತನ್ನ ಹಿಂಬಾಲಕರಿಗೆ ಮಹಿಳೆಯರ, ಮಕ್ಕಳ ಮತ್ತು ಮುಸಲ್ಮಾನರ ಪವಿತ್ರ ಗ್ರಂಥವಾದ ಕುರಾನ್ ಮೇಲೆ ಎಂದೂ ದಾಳಿ ಮಾಡಬೇಡಿ ಎನ್ನುತ್ತಿದ್ದ.
* 1857ರ ಪ್ರಥಮ ಸ್ವಾತಂತ್ರ ಸಂಗ್ರಾಮದಲ್ಲಿ ಝಾನ್ಸಿ ರಾಣಿ ಲಕ್ಷ್ಮಿಬಾಯ್ ಅವರನ್ನು ರಕ್ಷಿಸಿದ್ದು ಅವರ ಸೈನ್ಯದಲ್ಲಿ ಜನರಲ್‌ಗಳಾಗಿದ್ದ ಗುಲಾಮ್ ಗೌಸ್ ಖಾನ್ ಮತ್ತು ಖುದಾದ್ ಖಾನ್ ಎಂಬ ಇಬ್ಬರು ಮುಸಲ್ಮಾನರು. ಅವರಿಬ್ಬರೂ ಸಾಯುವ ಕೊನೆ ಕ್ಷಣದವರೆಗೆ ಆಕೆಯನ್ನು ಕಾಪಾಡಿದರಲ್ಲದೆ ಅವರು ಹೇಳಿದ ಕೊನೆ ಮಾತು "ನಮ್ಮ ರಾಣಿಗಾಗಿ ನಾವು ನಮ್ಮ ಪ್ರಾಣವನ್ನೇ ತೆರುತ್ತೇವೆ. ಫಿರಂಗಿಗಳನ್ನು ಕೊಚ್ಚಿಹಾಕಿರಿ."
* ಸಿಖ್ಖರ ಗುರು ಗೋಬಿಂದ್ ಸಿಂಗ್ ಅವರ ಆಪ್ತ ಮಿತ್ರರಾಗಿದ್ದವರು ಬಾಬಾ ಬದ್ರುದ್ದೀನ್ ಎಂಬ ಸೂಫಿ. ಔರಂಗಜೇಬ್ ಮತ್ತು ಗುರು ಗೋಬಿಂದ್ ಸಿಂಗ್ ಮಧ್ಯೆ ಯುದ್ಧ ಪ್ರಾರಂಭವಾದಾಗ ಸ್ವತಃ ಬಾಬಾ ಬದ್ರುದ್ದೀನ್ ಅವರು ಗೋಬಿಂದ್ ಸಿಂಗ್‌ಗೆ ಹೆಗಲು ಕೊಟ್ಟರಲ್ಲದೆ, ತನ್ನ ಎಲ್ಲ ಪುತ್ರರನ್ನು, ಸಹೋದರರನ್ನು, ತಮ್ಮ 700 ಭಕ್ತರನ್ನು ಯುದ್ಧಕ್ಕೆ ಕಳುಹಿಸಿದರು. ಯಾಕೆಂದರೆ ಔರಂಗಜೇಬನ ವಿರುದ್ಧ ಹೋರಾಡುವುದೆಂದರೆ ಅದು ಇಸ್ಲಾಂ ತೋರಿಸಿಕೊಟ್ಟ ಮಾರ್ಗದಲ್ಲಿ ನಡೆಯುವುದು ಮತ್ತು ನ್ಯಾಯಕ್ಕಾಗಿ ಹೋರಾಡುವುದು ಎಂದೇ ಬದ್ರುದ್ದೀನ್ ನಂಬಿದ್ದರು. ಆದರೆ ಆ ಯುದ್ಧದಲ್ಲಿ ಬದ್ರುದ್ದೀನ್ ತನ್ನ ಎಲ್ಲರನ್ನು ಮತ್ತು ತಮ್ಮ ಪ್ರಾಣವನ್ನೂ ಕಳೆದುಕೊಂಡರು. ಆದರೆ ಇವತ್ತಿಗೂ ಅಂಬಾಲ ಹತ್ತಿರವಿರುವ ಕಂಗೆ ಶಾಹ್ ಎಂಬ ಅವರ ದರ್ಗಾದಲ್ಲಿ ಗುರು ಗೋಬಿಂದ್ ಸಿಂಗ್ ಅವರು ಬದ್ರುದ್ದೀನ್ ಅವರಿಗೆ ಪ್ರೀತಿಯಿಂದ ಕೊಟ್ಟಿದ್ದ, ಸಿಖ್ ಧರ್ಮದಲ್ಲಿ ಮುಖ್ಯವಾಗಿರುವ, ಬಾಚಣಿಗೆ ಮತ್ತು ಖಡ್ಗ ಇವೆ.
* ಅವಧ್ ಸಾಮ್ರಾಜ್ಯದ ನವಾಬರು ಹೋಲಿ ಹಬ್ಬವನ್ನು 13 ದಿನಗಳ ಕಾಲ ಆಚರಿಸುತ್ತಿದ್ದರು. ವಾಜಿದ್ ಅಲಿ ಶಾ ಅವರ ಆಸ್ಥಾನದಲ್ಲಿ ಕೃಷ್ಣನಿಗಾಗಿ ರಾಸಲೀಲೆ ಹಾಡುಗಳನ್ನು ಹಾಡಿಸುತ್ತಿದ್ದರು. ಹಿಂದೂ ಪುರಾಣಗಳನ್ನು ಆಧರಿಸಿ ಉರ್ದುವಿನಲ್ಲಿ ರಚಿಸಲಾಗಿರುವ 'ಇಂದ್ರ ಸಭಾ' ಎಂಬ ನಾಟಕವನ್ನು ಬರೆದದ್ದು ಆಘಾ ಹಸನ್ ಅಮಾನತ್ ಎಂಬ ಮುಸ್ಲಿಮ್ ಬರಹಗಾರ. ಅದನ್ನು ಬರೆಸಿದ್ದು ದೊರೆ ವಾಜಿದ್ ಅಲಿ ಶಾ.
* ಸಿಖರ ಸ್ವರ್ಣ ಮಂದಿರದ ಅಡಿಗಲ್ಲನ್ನು ಹಾಕಿದ್ದು ಹಜ್ರತ್ ಮಿಯಾ ಮೀರ್ ಎಂಬ ಮುಸ್ಲಿಮ್ ಸೂಫಿ. ಈ ಸೂಫಿ ಗುರು ಮೊಘಲ್ ರಾಜಕುಮಾರ ದಾರಾ ಶಿಕೊನ ಗುರುವೂ ಆಗಿದ್ದರು.
* ಗುರು ನಾನಕ್‌ರ ಜೀವನಪರ್ಯಂತ ಅವರೊಂದಿಗೆ ಇದ್ದದ್ದು ಮಿಯಾ ಮರ್ದಾನ ಎಂಬ ಮುಸಲ್ಮಾನ್ ಸಂಗೀತಗಾರ. ಸಿಖರ ಗುರ್‌ಬಾನಿಯನ್ನು ಪ್ರಥಮ ಬಾರಿ ಹಾಡಿದವನೂ ಈತನೆ. ಗುರುನಾನಕ್ ಅವರೊಂದಿಗೆ ಹರದ್ವಾರದಿಂದ ಮೆಕ್ಕಾವರೆಗೂ ಮಿಯಾ ಮರ್ದಾನ ಪ್ರಯಾಣಿಸಿದ್ದ. 1947ರವರೆಗೂ ಮಿಯಾ ಮರ್ದಾನನ ವಂಶಸ್ಥರೇ ಸ್ವರ್ಣಮಂದಿರಲ್ಲಿ 500 ವರ್ಷಗಳ ಕಾಲ ಸಂಗೀತಗಾರರಾಗಿದ್ದರು.
* 800 ವರ್ಷಗಳಿಂದ ಭಾರತದ ಸೂಫಿಗಳು ವಸಂತ ಪಂಚಮಿ ದಿನವನ್ನು ಸರಸ್ವತಿ ವಂದನಾ ಗೀತೆಗಳನ್ನು ಹಾಡುವ ಮೂಲಕ ಆಚರಿಸುತ್ತಿದ್ದರು. ಖ್ಯಾತ ಉರ್ದು ಕವಿ ಅಮಿರ್ ಖುಸ್ರೋ ತನ್ನ ಗುರುಗೆಂದು ನೂರಾರು ಹೋಲಿ ಹಾಡಿಗಳನ್ನು ರಚಿಸಿದ್ದರು.
* ಮುಸಲ್ಮಾನರಲ್ಲೂ ಹಲವಾರು ಜನ ಕೃಷ್ಣ ಭಕ್ತರಿದ್ದರು. ಅವರಲ್ಲಿ ರಾಸ್ ಖಾನ್ ಎಂಬಾತ ಬೃಂದಾವನದಲ್ಲಿ ಓರ್ವ ಹಿಂದೂವಿನ ಪುಟ್ಟ ಮಗನನ್ನು ಕಂಡು, ಆ ಬಾಲಕನೇ ಕೃಷ್ಣ ಎಂದು ನಂಬಿ ತನ್ನ ಸರ್ವಸ್ವವನ್ನೂ ತ್ಯಾಗ ಮಾಡಿದ. ಅಮಿರ್ ಖುಸ್ರೋ, ರಹೀಂ, ಹಜರತ್ ಸರ್ಮಾದ್, ದಾದು, ಬಾಬಾ ಫರೀದ್ ಮುಂತಾದ ಹಲವಾರು ಮುಸಲ್ಮಾನರು ನೂರಾರು ಕೃಷ್ಣ ಭಜನೆಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಹಲವಾರು ಭಜನೆಗಳನ್ನು ಗುರು ಗ್ರಂಥ್ ಸಾಹಿಬ್‌ನಲ್ಲಿ ಅಳವಡಿಸಿಕೊಳ್ಳಲಾಗಿದೆ.
* ಮಾಲ್ವ ರಾಜ್ಯದ ರಾಜ ಬಾಜ್ ಬಹದ್ದೂರ್ ಓರ್ವ ಖಿಲ್ಜಿಯ ಪುತ್ರನಾಗಿದ್ದರೆ, ಆತನ ರಾಣಿ ರೂಪಮತಿ ರಜಪೂತನ ಮಗಳಾಗಿದ್ದಳು. ಮೊಘಲರು ಬಾಜ್ ಬಹದ್ದೂರ್‌ನನ್ನು ಯುದ್ಧದಲ್ಲಿ ಸೋಲಿಸಿ ಅವನನ್ನು ಬಂಧಿಸಿದಾಗ ಆತನಿಂದ ಬೇರ್ಪಟ್ಟು ಇರಲಾಗದೆ ರೂಪಮತಿ ವಿಷವನ್ನು ಸೇವಿಸಿ ಆತ್ಮಹತ್ಯೆ ಮಾಡಿಕೊಂಡಳು... •

ರಂಜನೆ | ಬೋಧನೆ | ಪ್ರತಿಭಟನೆ ಲಂಕೇಶ್




ಬಂ ಭಂಡಾಟ ಬಂಡಾಯ ಮತ್ತು ಬೇಸರ!!

ಸಾರೆಕೊಪ್ಪ ಬಂಗಾರಪ್ಪ!

ಕರ್ನಾಟಕ ರಾಜಕಾರಣ ಕಂಡ ಚಿರ ಭಿನ್ನಮತೀಯ; ರಂಗು-ರಂಗಿನ ರಗಳೆ ರಾಜಕಾರಣಿ. ರಾಜಕೀಯವಾಗಷ್ಟೇ ಅಲ್ಲ, ಕೌಟುಂಬಿಕವಾಗಿಯೂ ಭಂಡ ಬಂಡಾಯಗಾರ. ಅಲ್ಲಿಂದಿಲ್ಲಿಗೂ ಹುಂಬತನದಿಂದ ಹಾರಾಡಿದ್ದು ಇವತ್ತು 'ಬಂ'ರನ್ನು ಬೇಸರ-ಬೇಗುದಿಗೆ ತಳ್ಳಿಬಿಟ್ಟಿದೆ; ಜೀವನದ ಸಂಧ್ಯಾ ಕಾಲದಲ್ಲಿ ಹಿಂದಿನ ಸ್ವಯಂ ಕೃತಾಪರಾಧಗಳೆಲ್ಲ ಒಟ್ಟಾಗಿ 'ಬಂ'ರನ್ನು ನಡುಬೀದಿಯಲ್ಲಿ ತಂದು ನಿಲ್ಲಿಸಿ ನಿಟ್ಟುಸಿರು ಬಿಡುವಂತೆ ಮಾಡಿದೆ!

ಒಂದು ಕಾಲದಲ್ಲಿ ಹಿಂದುಳಿದವರ ಕಣ್ಮಣಿಯಾಗಿ ಅವತರಿಸಿದ್ದ 'ಬಂ' ಜನರ ಅಭಿಮಾನವನ್ನು ಸರಿಯಾಗಿ ಅರ್ಥೈಸಿಕೊಳ್ಳಲಾಗದೆ ಅಡ್ಡದಾರಿ ಹಿಡಿದುಬಿಟ್ಟರು. ಜನ 'ಬಂ'ರ ಬೂಟಾಟಿಕೆಗೆ ತಲೆದೂಗಿದಂತೆ ಆತ ಧನಾತ್ಮಕವಾಗಿ-ವಸ್ತುನಿಷ್ಠವಾಗಿ ಯೋಚಿಸುವುದನ್ನು ಬಿಟ್ಟು ಭ್ರಮಾಧೀನರಾಗಿ ಹೋದರು. ತಾನು ಮಾಡಿದ ಎಡವಟ್ಟುಗಳೆಲ್ಲವೂ ಸರಿಯೆಂದು ಭಾವಿಸಿ ಭಸ್ಮಾಸುರನಂತಾಗಿ ಹೋದರು. ಪಕ್ಷಗಳನ್ನು ಕಟ್ಟುವ-ಕೆಡವುವ ಕರಾಮತ್ತು ಮಾಡಿದಂತೆ ತನ್ನ ಕುಟುಂಬದಲ್ಲಿ ಭಿನ್ನಾಭಿಪ್ರಾಯ ತಲೆದೋರಿದಾಗ ಪುತ್ರ ಕುಮಾರ್ ಬಂಗಾರಪ್ಪನನ್ನು ನಿಯಂತ್ರಿಸಲಾಗದೆ ಹಠದಿಂದ ಹಾರೆ-ಪಿಕಾಸಿ-ಗುದ್ದಲಿ ಹಿಡಿದು ನಿಂತುಬಿಟ್ಟರು.

ಇವತ್ತು ಈ 'ಬಂ' ಮತ್ತು ಕುಮಾರಸ್ವಾಮಿ ಒಟ್ಟೊಟ್ಟಿಗೇ ನಿಂತು ಫ್ಯಾಸಿಸ್ಟ್ ಬಿಜೆಪಿ-ಚೆಡ್ಡಿ ಪಡೆಯ ವಿರುದ್ಧ ಅದೆಷ್ಟೇ ದೊಡ್ಡ ಗಂಟಲಲ್ಲಿ ಮಾತಾಡಿದರೂ, ಈ ಅಧಿಕಾರದಾಹಿಂಗಳೇ ಕರ್ನಾಟಕದ ರಾಜಕಾರಣವನ್ನು ಕುಲಗೆಡಿಸಿದ ಮೂಲ ಹುಳುಗಳೆಂಬುದು ಐತಿಹಾಸಿಕ ಸತ್ಯ! ಇವತ್ತು ಬಿಜೆಪಿಯೇನಾದರೂ ಬ್ರಹ್ಮರಾಕ್ಷಸನಂತೆ ಬೆಳೆದಿದ್ದರೆ, ಅದಕ್ಕೆ ಇದೇ ಬಂಗಾರಿ-ಕುಮಾರಿಗಳೇ ಕಾರಣ!! ಅಂದು 'ಬಂ' ಸಮಾಜವಾದಿ ತತ್ವಾದರ್ಶಕ್ಕೆಲ್ಲ ಎಳ್ಳುನೀರು ಬಿಟ್ಟು ಕೋಮುವಾದಿ ಬಿಜೆಪಿ ಸೇರಿದ್ದರಿಂದಲೇ ಆ ಪಕ್ಷ ಅಸೆಂಬ್ಲಿ ಎಲೆಕ್ಷನ್‌ನಲ್ಲಿ 70ರ ಗಡಿ ದಾಟುವಂತಾಗಿತ್ತು. 'ಬಂ'ರನ್ನು ಬ್ಲೈಂಡಾಗಿ ಹಿಂಬಾಲಿಸುತ್ತಿದ್ದ ಹಿಂದುಳಿದವರ ಮತದಲ್ಲಿ ನಿರ್ಣಾಯಕ ಪಾಲು ಕೆಲವು ಜಿಲ್ಲೆಯಲ್ಲಿ ಚೆಡ್ಡಿಚೋರರ ಪಕ್ಷಕ್ಕೆ ಅನಾಯಾಸವಾಗಿ ದಕ್ಕಿಬಿಟ್ಟಿತ್ತು!



ಹಾಗೆಯೇ ಕುಮಾರಸ್ವಾಮಿ ಅವಸರಗೆಟ್ಟು ಬಿಜೆಪಿ ಜತೆ ಸೇರಿ 'ಕೋ-ಜಾ' ಸರ್ಕಾರ ಮಾಡಿದ್ದು ಆನಂತರ ಅಧಿಕಾರ ಹಸ್ತಾಂತರದ ಹೊತ್ತಲ್ಲಿ ಹುಚ್ಚಾಟ ಮಾಡಿದ್ದು ಕೋಮುವಾದಿಗಳು ಮತದಾರರಿಗೆ ಮಂಕುಬೂದಿ ಎರಚಲು ಭರ್ಜರಿ ಅವಕಾಶ ಕೊಟ್ಟಂತಾಗಿತ್ತು. ಬಿಜೆಪಿ ಬಿಟ್ಟು ಕಾಂಗ್ರೆಸ್ ಅಥವಾ ಜೆಡಿಎಸ್ ಸೇರಲು ಸ್ಕೆಚ್ ಹಾಕುತ್ತಿದ್ದ ಅವಕಾಶವಾದಿ ಯಡ್ಡಿಗೆ ಬಿಜೆಪಿಯಲ್ಲಿ ದೊಡ್ಡ ಬ್ರೇಕ್ ಕೊಡಿಸಿದ್ದೇ ದೇವೇಗೌಡ-ಕುಮಾರಸ್ವಾಮಿ ಎಂಬ ಮಣ್ಣಿನ ಮಗ-ಮೊಮ್ಮಗನ ಮಸಲತ್ತು! ಅಪ್ಪ-ಮಗನ ಕಳ್ಳಾಟದಿಂದ ಅನವಶ್ಯಕವಾಗಿ ಯಡ್ಡಿ ಪರ ಸಿಂಪಥಿ ಸೃಷ್ಟಿಯಾಗುವಂತಾಯ್ತು. ಕುಮಾರಿಯ ಕುರ್ಚಿ ದಾಹವೇ ರಾಜ್ಯದಲ್ಲಿ ಈಗಾಗುತ್ತಿರುವ ರಾಜಕೀಯ ಅನಾಹುತಕ್ಕೆಲ್ಲ ಮೂಲಕಾರಣ. ಈಗ ಅದೇ ಕುಮಾರಿ ಕಂಡಕಂಡಲ್ಲಿ "ನಾನು ಮತ್ತು ಬಂಗಾರಪ್ಪನವರೇ ಬಿಜೆಪಿ ಅಧಿಕಾರಕ್ಕೆ ಬರಲು ಕಾರಣ ಅಂತಾ ಹಳಿಯಲಾಗುತ್ತಿದೆ... ನಾವಿಬ್ಬರೇ ಒಟ್ಟಾಗಿ ನಿಂತು ಆ ಪಾರ್ಟಿ ನಿರ್ನಾಮ ಮಾಡ್ತೇವೆ...." ಅಂತಿದ್ದಾರೆ. ಆದರೆ ಊರು ಕೊಳ್ಳೆ ಹೊಡೆದು ಹೋದ ಮೇಲೆ ದಿಡ್ಡಿ ಬಾಗಿಲು ಹಾಕುತ್ತೇನೆ ಅಂತೆಂದ ಮೂರ್ಖನಂತೆ ಈ ಬಂಗಾರಿ-ಕುಮಾರಿ ಕಾಣಿಸುತ್ತಿದ್ದಾರಷ್ಟೇ.

'ಬಂ' ರಾಜಕೀಯ ಜೀವನದಂತೆ ಸಾಂಸಾರಿಕ ಬದುಕಿನಲ್ಲೂ ವಿಫಲ ಬಂಡಾಯಗಾರನೇ! ರಾಜಕಾರಣದಲ್ಲಿ ಮಾಡಿದ ತಿಕ್ಕಲು ಪ್ರಯೋಗ ಪರಾಕ್ರಮಗಳನ್ನೇ ಈ 'ಬಂ' ಕುಟುಂಬದಲ್ಲೂ ಮಾಡಿ ನಡುಬೀದಿಯಲ್ಲಿ ಅಳುವಂಥ ಪರಿಸ್ಥಿತಿ ತಂದುಕೊಂಡಿದ್ದಾರೆ. 'ಬಂ' ಮತ್ತವರೇ ರಾಜಕಾರಣಿಯಾಗಿ ರೂಪಿಸಿದ ಮೊದಲ ಮಗ ಕುಮಾರ ಬಂಗಾರಪ್ಪನ ನಡುವಿನ ರಾಜಕೀಯ-ಸಾಂಸಾರಿಕ ಸಂಘರ್ಷ ವೀಗ ತಾರಕ ತಲುಪಿಬಿಟ್ಟಿದೆ. ತಂದೆ-ಮಗ, ಅತ್ತೆ-ಸೊಸೆ ನಡುವಿನ ಖಾಸಗಿ ಕಲಹ ಸಾರ್ವಜನಿಕ ಪ್ರಹಸನವಾಗಿ ಮಾರ್ಪಟ್ಟಿದೆ. ತನ್ನ ಹಣ-ಪ್ರಭಾವವನ್ನೆಲ್ಲ ಧಾರೆಯೆರೆದು ಮೊದ್ಮಣಿಯಂತಿದ್ದ ಪುತ್ರ ಕುಮಾರ್ ಬಂಗಾರಪ್ಪನನ್ನು ಸಿನಿಮಾ ನಟ-ಶಾಸಕ-ಮಂತ್ರಿಯಾಗಿ ಬೆಳೆಸಿದ 'ಬಂ' ಅದೇ ವೇಗದಲ್ಲಿ ಆತನನ್ನು ಪರಮ ಶತ್ರುವಾಗಿಸಿಕೊಂಡು ಎದುರಾಕಿಕೊಂಡಿರುವುದು ವಿಪರ್ಯಾಸ! ಇದು 'ಬಂ'ರ 'ಹುಟ್ಟು ಗುಣ'ದ ಮಹಿಮೆ!!

ಕುಮಾರ್ ಬಂಗಾರಪ್ಪನನ್ನು ಕಾಂಗ್ರೆಸ್ ಪಾರ್ಟಿಯಲ್ಲಿ ಎದುರಿಸಲಾಗದೆ 'ಬಂ' ಜೆಡಿಎಸ್ ಸೇರಿರುವುದು ಹಳೆ ಕತೆ. ಹೇಗಾದರೂ ಮಾಡಿ ತವರುನೆಲ ಸೊರಬದಲ್ಲೇ ಮೊದಲ ಮಗ 'ಕುಬಂ'ನ ಹುಟ್ಟಡಗಿಸಿ ಅಲ್ಲಿ ಎರಡನೇ ಮಗ ಮಧುನ ಪಟ್ಟಾಭಿಷೇಕ ಮಾಡುವ ಹಠಕ್ಕೆ 'ಬಂ'

> ● ಇದು 'ಬಂ' ತನಗೆ ತಾನೇ ತಂದುಕೊಂಡಿರುವ ಗಂಡಾಂತರ-ಕಷ್ಟ-ನಷ್ಟ-ನೋವು. ರಾಜಕೀಯ ರಂಗದ ದುರಂತ ನಾಯಕ 'ಬಂ' ಕೌಟುಂಬಿಕವಾಗಿಯೂ ವಿಫಲ ಯಜಮಾನ! ತಾಳ್ಮೆ-ಹೊಂದಾಣಿಕೆಗಳಿದ್ದರೆ ಇವತ್ತು 'ಬಂ'ಗೆ ಈ ಕೇಡು ಬರುತ್ತಲೇ ಇರಲಿಲ್ಲ. ಜೀವನದ ಸಂಧ್ಯಾ ಕಾಲದಲ್ಲಿ ಹಿಂದಿನ ಸ್ವಯಂ ಕೃತಾಪರಾಧಗಳೆಲ್ಲ ಒಟ್ಟಾಗಿ 'ಬಂ'ರನ್ನು ನಡುಬೀದಿಯಲ್ಲಿ ತಂದು ನಿಲ್ಲಿಸಿ ನಿಟ್ಟುಸಿರು ಬಿಡುವಂತೆ ಮಾಡಿದೆ!

ಬದ್ದಿದ್ದಾರೆ. ಮಂತ್ರಿ-ಶಾಸಕನಾಗಿ ಒಂದಿಷ್ಟು ಬೆಳೆದಿರುವ 'ಕುಬಂ'ಗೆ ಅಪ್ಪನ ಎಡಬಿಡಂಗಿ ರಾಜಕಾರಣದಿಂದ ಬೇಸತ್ತ ಜನರೇ ಬಲವಾಗಿದ್ದಾರೆ. ಹೀಗಾಗಿ ಜರಾಸಂಧನಂತೆ ಉದ್ದುದ್ದ ಕೂದಲು ಬಿಟ್ಟು ಮೀಸೆ ತಿರುವುತ್ತ ಸೊರಬ-ಶಿವಮೊಗ್ಗದಲ್ಲಿ ಅಲೆಯುತ್ತಿರುವ 'ಕುಬಂ' ಅಪ್ಪನ 'ಆಟ'ಕ್ಕೆ ಗೂಟ ಜಡಿಯುತ್ತಿದ್ದಾನೆ. ಮಗನಾಗಿ ಅಪ್ಪ-ಅಮ್ಮ-ತಮ್ಮನಿಗೆ ವಿಧೇಯನಂತೆ ಪೋಸು ಕೊಡುತ್ತಲೇ ರಾಜಕೀಯವಾಗಿ ಅಪ್ಪ-ತಮ್ಮನ ವಿರುದ್ಧ ಪ್ರಚ್ಛನ್ನ ಸಮರವನ್ನೇ ಈ 'ಕುಬಂ' ನಡೆಸಿದ್ದಾನೆ.

ರಾಜಕೀಯ-ಕೌಟುಂಬಿಕವಾಗಿ ತುಂಬ ದೂರ ನಡೆದು ದಣಿದಿರುವ ವೃದ್ಧ 'ಬಂ' ಎರಡನೇ ಮಗನ ಪರ ಕ್ಷೇತ್ರ ಹದಗೊಳಿಸಲು ಅದ್ಯಾವ ತಂತ್ರ ನಡೆಸಿದರೂ ಹೊಮ್ಮನಸ್ಸಿನ ತರುಣ 'ಕುಬಂ' ಅದನ್ನು ಕೌಂಟರ್ ಮಾಡುತ್ತಲೇ ಸಾಗಿದ್ದಾರೆ. ಅಪ್ಪನಂತೆಯೇ ಸೊರಬದ ಜನರ ಮುಂದೆ-ತರತರದ ಗಿಮಿಕ್ ಮಾಡುತ್ತಿದ್ದಾನೆ. ಅಪ್ಪ-ಅಮ್ಮನಿಂದ ದೂರಾಗಿ ಅದ್ಯಾವುದೋ ಕಾಲವಾಗಿರುವ 'ಕುಬಂ' ಮೊನ್ನೆ ನಡೆದ ಜಿಪಂ ಚುನಾವಣೆ ದಿನ ತವರೂರು ಕುಬಟೂರಿನ ಮತಗಟ್ಟೆ ಬಳಿ ಅಮ್ಮ ಶಕುಂತಲಾರನ್ನು ಕಂಡವನೇ ಕಕ್ಕುಲತೆಯಿಂದ ಓಡೋಡಿ ಹೋಗಿ ತಬ್ಬಿಕೊಂಡು ಪ್ರೆಸ್ಸಿನವರಿಗೆ-ಟಿವಿಯವರಿಗೆಲ್ಲ ಪೋಸು ಕೊಟ್ಟಿದ್ದ. ತನಗೆ ಅಪ್ಪ-ಅಮ್ಮರ ಬಗ್ಗೆ ಪ್ರೀತಿಯಿದೆ, ಆದರೆ ಅಪ್ಪನ ಮೊಂಡುತನದಿಂದ ತಮ್ಮ ಸಂಸಾರಕ್ಕೆ ಸಂಕಟ ಬಂದಿದೆ ಎಂಬ ಸಂದೇಶ ಕ್ಷೇತ್ರದ ಜನರಿಗೆ ರವಾನಿಸುವ ಹಿಕಮತ್ತು ಇದಾಗಿತ್ತು. ಆದರೆ ನೋವಿನ ಸಂಗತಿಯೆಂದರೆ, ಪತಿದೇವರ ಈಗೋ ಮತ್ತು ಪುತ್ರ ವಾತ್ಸಲ್ಯದ ನಡುವೆ ಆ ತಾಯಿ ಸಿಕ್ಕಿ ಹಾಕಿಕೊಂಡು ಅನುಭವಿಸಿದ ಮೂಕವೇದನೆ ಹೇಳತೀರದು!

ಮಗನೇ ದ್ರೋಹಿ-ತಾಯ್ತಂದೆಯರಿಗೆ ಗೌರವಿಸದ ಪಾಪಿ ಎಂದು 'ಕುಬಂ'ಹೊರಜಗತ್ತಿಗೆ ಬಿಂಬಿಸಲು ಹವಣಿಸಿದಂತೆಲ್ಲ 'ಕುಬಂ' ಅಪ್ಪನೇ ವಾತ್ಸಲ್ಯ-ಹೊಂದಾಣಿಕೆ-ಕ್ಷಮಾ ಗುಣಗಳಿಲ್ಲದ ಜಗಳಗಂಟನೆಂದು ಜನರಿಗೆ ತೋರಿಸಲು ತಿಪ್ಪರಲಾಗ ಹಾಕುತ್ತಿದ್ದಾನೆ. ಒಂದಂತೂ ಖರೆ.

ಸೊರಬ-ಶಿವಮೊಗ್ಗದ ರಾಜಕಾರಣದಲ್ಲಿ ಹಳೆ ಹುಲಿಯಂಥ ಅಪ್ಪನಿಗೇ ತಿರುಗಿ ನಿಲ್ಲುವಂಥ ತಾಕತ್ತು ಕುರಿಮರಿಯಂಥ 'ಕುಬಂ' ಬೆಳೆಸಿಕೊಂಡಿದ್ದಾರೆ. ಇದು ಎರಡನೇ ಮಗ ಮಧುವನ್ನು ಸೊರಬದಿಂದ ಶಾಸಕನಾಗಿಸಬೇಕೆಂಬ 'ಬಂ'ರ ಕೊನೆ ಆಸೆಗೆ ಕಲ್ಲು ಹಾಕುತ್ತಿದೆ. ಈ ಅಪ್ಪ-ಮಗನ ಕಿತ್ತಾಟದಲ್ಲಿ ಯಾವ ನೆಲೆ-ಬೆಲೆಯೂ ಇಲ್ಲದ ಅಬ್ಬೇಪಾರಿಯಂಥ ಹರತಾಳು ಹಾಲಪ್ಪನ ಬೇಳೆ ಸೊರಬದಲ್ಲಿ ತಂತಾನೆ ಬೇಯುತ್ತಿದೆ. 'ಬಂ'ರ ಹೆಂಡತಿಯ ಖಾಸಾ ಸಹೋದರಿಯ ಮಗನಾದ ಈ ಹರಿದುಹೋದ ತಾಳವನ್ನು ರಾಜಕೀಯಕ್ಕೆ ತಂದಿದ್ದೇ 'ಬಂ'! ಮೈದಿನಿಯ ಮಗ ಬಿಡಿ, ಸ್ವಂತ ಮಗನೇ 'ಬಂ' ಜತೆ ನಿಲ್ಲದಂತಾಗಿರುವುದು ಆತನ ಅಸಲೀ ಸ್ವಭಾವದ ಮಹಿಮೆ.

'ಕುಬಂ'ನನ್ನು ಸೊರಬದ ರಣರಂಗದಲ್ಲೇ ಮಣಿಸಿ ಮಧುವನ್ನು ವಿಧಾನಸೌಧಕ್ಕೆ ಕಳಿಸಲು 'ಬಂ' ಮತ್ತೆ ಕ್ಷೇತ್ರ ಕಾರ್ಯ ಮಾಡುತ್ತಿದ್ದಾರೆ. ಈ ಬಾರಿ ಜೆಡಿಎಸ್‌ನಿಂದ ಮಧುವನ್ನು ಕಣಕ್ಕಿಳಿಸಲು 'ಬಂ' ಸರ್ವಸನ್ನದ್ಧರಾಗಿ 'ಒಂಥರಾ ಪ್ರಚಾರ' ಶುರುಹಚ್ಚಿಕೊಂಡಿದ್ದಾರೆ. ಕಳೆದ ವಾರ ಸೊರಬದ ಹರೀಶಿ ಬಳಿಯ ನೆಲ್ಲೂರು ಎಂಬಲ್ಲಿ 'ಬಂ' ಕಾರ್ಯಕರ್ತರ ಸಭೆ ಕರೆದಿದ್ದರು. ಅಲ್ಲಾತ ಮಾಡಿದ್ದು 'ಕುಬಂ'ರ ಗುಣಗಾನ ಮಾತ್ರ. ಮಗನಾಗಿ 'ಕುಬಂ'ನ ಪ್ರೀತಿಸುತ್ತೇನೆ, ಆದರೆ ರಾಜಕೀಯವಾಗಿ ಆತನ ಮುಗಿಸಿ ಮಧುಗೆ ಕಿರೀಟ ಕೊಡಿಸುವುದೇ ತನ್ನ ಗುರಿ ಎಂದು ಭಾಷಣ ಶುರು ಹಚ್ಚಿಕೊಂಡಿದ್ದ 'ಬಂ'ರ ಪ್ರತಿ ಮಾತು ಕರುಣಾಜನಕವಾಗಿತ್ತು! "ನನ್ನ ಸತತ ಸ್ವಾಭಿಮಾನಿ ರಾಜಕಾರಣದಲ್ಲಿ ತಾಲ್ಲೂಕಿನ ಜನರಾಗಲಿ, ಮುಖಂಡರಾಗಲಿ ನನಗೆ ಮೋಸ ಮಾಡಲಿಲ್ಲ... ದ್ರೋಹ ಮಾಡಿದ್ದು ಮಗನಾಗಿ ಹುಟ್ಟಿರುವ 'ಕುಬಂ'. ಅವನ ದಂಬಾಚಾರದಿಂದ ಬೇಸತ್ತು ಹೋಗಿದ್ದೇನೆ....." ಎಂದು ಅವನ ಮನೆಯೊಳಗಿನ ಹುಳುಕನ್ನೆಲ್ಲ ಒಂದೊಂದಾಗಿ ಜನರ ಮುಂದಿಡುತ್ತ ಹೋದರು.


'ಬಂ' ಸೇಡು-ಜಿದ್ದಿನಿಂದ ಅದೆಷ್ಟು ಹತಾಶರಾಗಿ ಹೋಗಿದ್ದಾರೆಂದರೆ ವೈಯಕ್ತಿಕ ಬದುಕಿನ ಸಮಸ್ಯೆ- ಸಂಘರ್ಷ ಬೀದಿಯಲ್ಲಿ ನಿಂತು ಹೇಳಿ ಕಂಬನಿಗರೆದರೆ ತಾನೇ ಹಗುರಾಗುತ್ತೇನೆಂಬ ಕಲ್ಪನೆಯೂ ಆತನಿಗೆ ಈ ವಯಸ್ಸಿನಲ್ಲಿ ಹೊಳೆಯುತ್ತಿಲ್ಲ..."ಕುಮಾರ ಬಂಗಾರಪ್ಪ ಸಭೆ ಸಮಾರಂಭಗಳಲ್ಲಿ ತಾಯ್ತಂದೆಯರಿಗೆ ನಮಸ್ಕರಿಸುತ್ತೇನೆ, ಗೌರವಿಸ್ತೇನೆ ಎಂದ್ಹೇಳುತ್ತಾನೆ... ಇದು ಜನರನ್ನು ದಾರಿ ತಪ್ಪಿಸಿ ನನ್ನ ಪರವಿರುವ ನಿಮ್ಮ ಓಟು ಕಸಿಯುವ ಕುತಂತ್ರ... ಆದರೆ ಆತ ಮಾಡುವುದೇ ಬೇರೆ.. ಇಂಥ ಮಗ ಯಾವ ತಂದೆಗೂ ಬೇಡ... ಅವ ರಾಜಕಾರಣಕ್ಕೆ ನಾನೇ ಕರೆದು ತಂದು ಎಮ್ಮೆಲ್ಲೆ -ಮಂತ್ರಿ ಮಾಡಿದೆ... ಅವ ಮಾಡಿದ್ದೇನು...? ತಂದೆ-ತಾಯಿಯನ್ನು ಮನೆಯಿಂದ ಹೊರಗೆ ದೂಡಿದ. ಆತನ ಹೆಂಡತಿ ಮೊಮ್ಮಕ್ಕಳನ್ನೂ ನಮ್ಮ ಬಳಿ ಬಿಡಲಿಲ್ಲ.... ಸ್ವಾಭಿಮಾನಿಯಾಗಿದ್ದ ನಾನು-ನನ್ನ ಹೆಂಡತಿ ಮಗ ಮಧುವಿನ ಸಂಗಡ ಹೊರಬಂದೆವು. ..." ಎಂದು ಗದ್ಗದಿತರಾದರು ಧಾಡಸಿ 'ಬಂ'.

ಇಷ್ಟಕ್ಕೆ ಆತನ ದುಃಖ-ದುಮ್ಮಾನ ನಿಲ್ಲಲಿಲ್ಲ. "ಇಷ್ಟೆಲ್ಲ ಆದರೂ ನಾನು ಮಾತ್ರ 'ಕುಬಂ'ನ ಕ್ಷಮಿಸುತ್ತಲೇ ಹೋದೆ... ಪ್ರೀತಿ-ವಾತ್ಸಲ್ಯದಿಂದ ಕಂಡೆ... ವರ್ಷಕ್ಕೊಮ್ಮೆ ನನ್ನ ಹುಟ್ಟು ಹಬ್ಬಕ್ಕೆ ಬರುತ್ತಿದ್ದವ ಈಗೀಗ ಅದಕ್ಕೂ ಬರುತ್ತಿಲ್ಲ.... ಇವನಿಗೇನೋ ಅನ್ಯಾಯ ಮಾಡಿ ಬೀದಿಗೆಸೆಯಬೇಕೆಂಬ ಹಠ ನನಗಿಲ್ಲ... ಅಣ್ಣ-ತಮ್ಮರಿಬ್ಬರನ್ನೂ ಒಗ್ಗೂಡಿಸಿ ಸಮಾನ ಅವಕಾಶ ಕೊಡುವುದು ನನ್ನ ತೀರ್ಮಾನವಾಗಿತ್ತು... ಕಳೆದ ಜನವರಿ 24ರಂದು 'ಕುಬಂ'ಗೆ ಫೋನಾಯಿಸಿ ಹೊಂದಾಣಿಕೆಗೆ ಕರೆದೆ... ಆದರೆ ಆದಕ್ಕವನು ಉತ್ತರಿಸದೆ ಫೋನ್‌ಲೈನ್ ಕಟ್ ಮಾಡಿದ.... ಮಗನಾಗೇ ತಂದೆ ಬಳಿ ಬರಬೇಕಿತ್ತು.... ಆದರೆ ನಾನೇ ಅಪ್ಪನೆಂಬ ಅಹಂಕಾರ ಬಿಟ್ಟು ಕರೆದರೂ ಆತ ಮಗನೆಂಬ ಮಮತೆಯಿಂದ ಬರಲಿಲ್ಲ... ಅವನ ಕರ್ತವ್ಯ ಮಾಡಲಿಲ್ಲ... ಒಟ್ಟಿನಲ್ಲಿ ನನ್ನನ್ನೇ ರಾಜಕೀಯವಾಗಿ ಮುಗಿಸುವ ಸಂಚು ಅವನದು..." ಎಂದು 'ಬಂ' ಗೊಳೋ ಎಂದು ಅತ್ತೇ ಬಿಟ್ಟರು...

"ತಪ್ಪು-ಒಪ್ಪು ಸೊರಬದ ಮಹಾಜನತೆಯ ಮುಂದಿಟ್ಟಿದ್ದೇನೆ. ಹಠ-ಛಲ-ಸ್ವಾಭಿಮಾನದ ರಾಜಕಾರಣ ಮಾಡಿದೋನು ನಾನು... ನಿಮಗೆ ಅಪ್ಪನ ಗುಣ ವಿಶೇಷಣ ಇರುವ ಮಧು ಬೇಕೋ? ಇಲ್ಲ ನನಗೆ ದ್ರೋಹ-ಮೋಸ-ಅನ್ಯಾಯ ಮಾಡಿ ಮುದಿಕಾಲದಲ್ಲಿ ನೋವು ನೀಡುತ್ತಿರುವ ಅವ(ಕುಬಂ) ಬೇಕೋ?... ನೀವೇ ನಿರ್ಧರಿಸಿ... ಮುಂದಿನ ಎಲೆಕ್ಷನ್‌ನಲ್ಲಿ ಮಧುನ ಗೆಲ್ಲಿಸಿ...." ಎಂದು 'ಬಂ' ಅಳುತ್ತ ಹೇಳಿದಾಗ ಯಾರಿಗೂ ಕೇರ್ ಮಾಡದ, ದಿಲ್ಲಿ ಧಣಿಗಳಿಗೆಲ್ಲ ಸಿಂಹಸ್ವಪ್ನವಾಗಿದ್ದ 'ಬಂ' ಇವರೇನಾ? ಎಂಬ ಅನುಮಾನ ಸೊರಬದ ಆತನ ಅಭಿಮಾನಿಗಳನ್ನು ಕಾಡಿರಲಿಕ್ಕೂ ಸಾಕು.

ಇದು 'ಬಂ' ತನಗೆ ತಾನೇ ತಂದುಕೊಂಡಿರುವ ಗಂಡಾಂತರ-ಕಷ್ಟ-ನಷ್ಟ-ನೋವು. ರಾಜಕೀಯ ರಂಗದ ದುರಂತ ನಾಯಕ 'ಬಂ' ಕೌಟುಂಬಿಕವಾಗಿಯೂ ವಿಫಲ ಯಜಮಾನ! ತಾಳ್ಮೆ-ಹೊಂದಾಣಿಕೆಗಳಿದ್ದರೆ ಇವತ್ತು 'ಬಂ'ಗೆ ಈ ಕೇಡು ಬರುತ್ತಲೇ ಇರಲಿಲ್ಲ. ಈ ಎರಡು ಗುಣಗಳಿದ್ದರೆ 'ಬಂ' ಇವತ್ತು ಎಸ್.ಎಂ.ಕೃಷ್ಣ ಮೊಯ್ಲಿಯಂಥವರಿಗಿಂಥ ಎತ್ತರದಲ್ಲಿರುತ್ತಿದ್ದರು. ಯಡ್ಡಿಯಂಥ ಭ್ರಷ್ಟ-ದುಷ್ಟ ಕೋಮುವಾದಿ ತಲೆಯೆತ್ತುವ ಹಾಗಾಗುತ್ತಿರಲಿಲ್ಲ! 'ಬಂ' ತನ್ನ ಕೌಟುಂಬಿಕ ಕಲಹ ಹಾದಿ-ಬೀದಿ ರಂಪ ಮಾಡಿಕೊಳ್ಳುವ ಅಗತ್ಯವಿತ್ತಾ?

•ನಹುಶ



ಗಳಗಳನೇ ಅತ್ತ 'ಬಂ'!!

ಹೆತ್ತ ಮಗನೇ ಸೆಡ್ಡು ಹೊಡೆದು ನಿಂತಿರುವುದು 'ಬಂ'ರನ್ನು ಸಾರ್ವಜನಿಕವಾಗಿ ಕಣ್ಣೀರಿಡುವಂತೆ ಮಾಡಿದೆ! 'ಕುಬಂ' ಕತೆ ಹೇಳಿ 'ಬಂ' ಈಗ ಕಂಡಕಂಡವರ ಮುಂದೆ ಅಳುತ್ತಿದ್ದಾರೆ. ಜೆಡಿಎಸ್ ದೊರೆ ದೇವೇಗೌಡರಿಗೆ ಆತನ ಮಕ್ಕಳು-ಸೊಸೆಯಂದಿರು ಕೊಡುವ ಗೌರವ-ಪ್ರೀತಿ ತನಗೆ ಸಿಗುತ್ತಿಲ್ಲವೆಂದು ಕಂಬನಿ ಮಿಡಿಯುತ್ತಿದ್ದಾರೆ. ದೇವೇಗೌಡರ ಕುಟುಂಬದಲ್ಲಿ ಅದೆಂಥ ಆಂತರಿಕ ಸಮಸ್ಯೆಗಳಿದ್ದರೂ ಹಿರಿಯರಾದ ಗೌಡರ ಮಾತಿಗೆ ಎಲ್ಲರೂ ಬದ್ಧರಾಗುತ್ತಾರೆ. ನನ್ನ ಮಗ 'ಕುಬಂ'ಗೆ ಏನಾಗಿದೆ? ರಾಷ್ಟ್ರಮಟ್ಟಕ್ಕೇರಿದ ನನ್ನನ್ನು ರಾಜಕೀಯವಾಗಿ ಮುಗಿಸಲೆಂದೇ ಇಂಥ ದುಷ್ಟ ಬುದ್ಧಿ ಮಗ ಹುಟ್ಟಿದ್ದಾನಾ? ಅಂತ್ಹೇಳಿ 'ಬಂ' ಅಳುತ್ತಿದ್ದಾರೆ!

'ಬಂ'-ದೇವೇಗೌಡರ ನಡುವೆ ಹಲವು ಸಾಮ್ಯತೆಗಳಿರಬಹುದು. ಆದರೆ ಗೌಡರ ಯಜಮಾನಿಕೆ, ಗತ್ತು ಮಕ್ಕಳು-ಸೊಸೆಯಂದಿರನ್ನು ನಿಯಂತ್ರಿಸುವ ತಾಕತ್ತು ಮಾತ್ರ 'ಬಂ'ಗೆ ಇಲ್ಲ. ಕುಮಾರಸ್ವಾಮಿ ಮತ್ತು ಸಿನಿನಟಿ ರಾಧಿಕಾ ಸಂಬಂಧವನ್ನು ದೇವೇಗೌಡ ರಹಸ್ಯವಾಗೇ ನಿಭಾಯಿಸಿದರು. ಮಗನ ಮಾನ ಹೋಗದಂತೆ ನೋಡಿಕೊಂಡರು. ಇಂಥದೇ ಸಮಸ್ಯೆ 'ಬಂ' ಫ್ಯಾಮಿಲಿಯಲ್ಲಿ ಬಂದರೆ ಏನಾಗುತ್ತಿತ್ತು? 'ಬಂ' ಆ ನಟಿಯಷ್ಟೇ ಅಲ್ಲ ಹೆತ್ತ ಮಗನ ಮಾನ ಹರಾಜಾಕಿಬಿಡುತ್ತಿದ್ದರೇನೋ? ಬಾಯ್ಬಾಯಿ ಬಡಕೊಂಡು ತನ್ನ ಮರ್ಯಾದೆಗೂ ಕುಂದು ತಂದುಕೊಳ್ಳುತ್ತಿದ್ದರೇನೋ? ಹಾಗಂತ 'ಬಂ' ಬಲ್ಲ ಆತನ ಹತ್ತಿರದವರೇ ವ್ಯಾಖ್ಯಾನಿಸಿ ನಗುತ್ತಿದ್ದಾರೆ.

ಕುಮಾರ್ ಮಡದಿ ಅನಿತಾ ಶಾಸಕಿಯಾದಾಗ ರೇವಣ್ಣನ ಹೆಂಡತಿ ಕ್ಯಾತೆ ತೆಗೆದು ತಾನು ಎಮ್ಮೆಲ್ಲೆ ಆಗುವುದಾಗಿ ರಂಪ ಮಾಡಿದ್ದರಂತೆ. ಹಾಗೆಯೇ ಕುಮಾರ್ ಸಿಎಂ ಆದಾಗ ರೇವಣ್ಣಾ ಪವರ್‌ಗಾಗಿ ಅಪ್ಪ-ತಮ್ಮ ಕುಮಾರ್‌ರನ್ನು ಕಾಡಿದ್ದರು. ಇದನ್ನೆಲ್ಲ ತುಂಬ ಸಮರ್ಥವಾಗಿ ದೇವೇಗೌಡರು ನಿಭಾಯಿಸಿ ಕುಟುಂಬ ಸಮಸ್ಯೆ ಬೀದಿಗೆ ಬರದಂತೆ ನೋಡಿಕೊಂಡಿದ್ದರು! ಈ 'ಕಲೆ' ಬಂಗಾರಿಗಿಲ್ಲ! ಇದೇ 'ಬಂ'-ಗೌಡರ ನಡುವಿನ ವ್ಯತ್ಯಾಸ ಅಲ್ಲವಾ?

ಬೆಂಗಳೂರಿನ ಅರ್ಧಡಜನ್ ಶಾಸಕರೇಕೆ ಯಡ್ಡಿ ಜೊತೆಗಿಲ್ಲ?

ಬೆಂಗಳೂರಿನ ಅರ್ಧಕ್ಕೂ ಅಧಿಕ ಬಿಜೆಪಿ ಶಾಸಕರೀಗ ಯಡ್ಡಿಯತ್ತ ಬೆನ್ನು ತಿರುಗಿಸಿದ್ದಾರೆ. ಮುಖ್ಯಮಂತ್ರಿಯ ಹರಕತ್ತು ಏನೇ ಇರಲಿ, ಆದರೆ ಯಡ್ಡಿ ವಿರುದ್ಧ ಮುನಿಸಿಗೆ ಬಿದ್ದ ಪ್ರತಿಯೊಬ್ಬ ಶಾಸಕನಿಗೂ ತನ್ನದೇ ಆದ ಹಿತಾಸಕ್ತಿ ಮತ್ತು ಕಾರಣಗಳಿವೆ. ಕೆಲವರದು ನಾಯಕ ನಿಯತ್ತಾದರೆ, ಕೆಲವರದು ಜಾತಿನಿಷ್ಠೆ, ಇನ್ನೂ ಕೆಲವರದು ಡೀಲು-ಪಾಲಿನ ವ್ಯಾವಹಾರಿಕ ವೈಷಮ್ಯ.


ನಂದೀಶ್ ರೆಡ್ಡಿ

ಅಶೋಕ್ ಎಷ್ಟೇ ಯಡ್ಡಿ ಪರವಿದ್ದರೂ ಸಮಯ ಬಂದಾಗ ಎಲ್ಲದಕ್ಕೂ ಸಿದ್ಧ ಮತ್ತು ಯಾವುದಕ್ಕೂ ಹೆದರಲಾರ. ಹೀಗಾಗಿ ಯಡ್ಡಿಗೆ ಯಾವತ್ತೂ ಅಶೋಕ್ ತನ್ನ ಪರ ವಹಿಸುತ್ತಾರೆಂಬ ವಿಶ್ವಾಸವಿಲ್ಲ. ಇದ್ದಷ್ಟು ದಿನ ಬಿದ್ದಷ್ಟು ಲಾಭ ಎಂಬಂತೆ ಯಡ್ಡಿ ಪಾಲಿಗೆ ಸದ್ಯ ಅಶೋಕ್ ಪಟಲ್ ಟ್ರೈನಿನ ಅಡ್ಜೆಸ್ಟೇಬಲ್ ಬೋಗಿಯಿದ್ದಂತೆ. ಆದರೆ ಸುರೇಶ್ ಕುಮಾರ್ ಹಾಗಲ್ಲ, ಅನಂತ್‌ಕುಮಾರ್ ಯಾವತ್ತಿದ್ದರೂ ತನಗೆ ಶತ್ರುವಾದ್ದರಿಂದ ವಿಧಿಯಿಲ್ಲದೇ ತಾನು ಯಡ್ಡಿಯನ್ನು ಆಶ್ರಯಿಸಲೇಬೇಕು.


ಇದೇ ಸ್ಥಿತಿಯಲ್ಲಿ ಹೊಯ್ದಾಡುತ್ತಿರುವ ಮತ್ತೊಬ್ಬ ಲೋಕಲ್ ಬಿಜೆಪಿ ಪಾಳೇಗಾರನೆಂದರೆ, ಅದು ರಾಜರಾಜೇಶ್ವರಿ ನಗರದ ಶಾಸಕ ಎಂ. ಶ್ರೀನಿವಾಸ್. ಸುರೇಶ್ ಕುಮಾರ್ ಹೇಗೆ ಅನಂತ್ ಕಡುವೈರಿಯೋ ಹಾಗೇ ಶ್ರೀನಿವಾಸ್ ಪಾಲಿಗೆ ಆರ್. ಅಶೋಕ್ ಆಜನ್ಮ ವೈರಿ. ಒಂದಾನೊಂದು ಕಾಲಕ್ಕೆ ತನ್ನೆದುರು ನಿಲ್ಲುವುದಕ್ಕೂ ತಿಣುಕಾಡುತ್ತಿದ್ದ ಅಶೋಕ್ ಈಗ ತನ್ನನ್ನೇ ಬದಿಗೊತ್ತಿ ಮಂತ್ರಿಯಾಗಿರುವುದು ಶ್ರೀನಿವಾಸ್‌ಗೆ ಸಹಿಸಲಾಗುತ್ತಿಲ್ಲ.



ಆದಕ್ಕೆ ತಕ್ಕಂತೆ ಶ್ರೀನಿವಾಸ್ ಕ್ಷೇತ್ರಕ್ಕೆಂದೇ ಯಡ್ಡಿ ಸರಿಸುಮಾರು ನಾನೂರು ಕೋಟಿಯಷ್ಟು ಫಂಡು ಕೊಟ್ಟು ಉಪಕರಿಸಿದರು. ಆದರೆ ಶ್ರೀನಿವಾಸ್‌ನ ತಮ್ಮ ಎಂ. ಕೃಷ್ಣಪ್ಪ ಬೆಂಗಳೂರು ದಕ್ಷಿಣದ ಶಾಸಕ. ಪಕ್ಕಾ ಅಶೋಕ್ ನಿಷ್ಠ. ಮೇಲುನೋಟಕ್ಕೆ ಮುಖ್ಯಮಂತ್ರಿ ಯಡ್ಡಿಗೆ ಜೈ ಎಂದರೂ ಯಾವ ಗಳಿಗೆಯಲ್ಲಿ ಉಲ್ಟಾ ಹೊಡೆಯುತ್ತಾನೋ ಹೇಳಲಾಗದು. ಅಂದಹಾಗೆ ಕೃಷ್ಣಪ್ಪನವರ ರಸಿಕ ಪ್ರತಾಪಗಳ ಕುರಿತ ಚಿತ್ರವಿಚಿತ್ರ ದೃಶ್ಯಾವಳಿಗಳ ಸೀಡಿ ಒಂದನ್ನು ಯಾರೋ ಬೆಳಗಾವಿಯ ಮಾನಿಮಾಂಗಿಣಿಯೊಬ್ಬಳು ಸೃಷ್ಟಿಸಿದ್ದಾಳೆಂದೂ, ಆ ಪೈಕಿ ಒಂದು ಸೀಡಿ ಮುಖ್ಯಮಂತ್ರಿ ಯಡ್ಡಿಯ ಕೈ ಸೇರಿರುವುದರಿಂದ ಎಷ್ಟೇ ಅಶೋಕ್ ನಿಷ್ಠೆಯಿದ್ದರೂ ಸದ್ಯ ಕೃಷ್ಣಪ್ಪ ಬಾಲ ಬಿಚ್ಚಲಾರ ಎಂಬುದೂ ಯಡ್ಡಿ ನಿಷ್ಠುರ ನಂಬಿಕೆ. ಆದರಲ್ಲಿ ನಿಜವೆಷ್ಟೋ ಜೊಳ್ಳೆಷ್ಟೋ ಸ್ವತಃ ಕೃಷ್ಣಪ್ಪನೇ ಬಲ್ಲ.

ಸತೀಶ್ ರೆಡ್ಡಿ

ಕೆ.ಆರ್. ಪುರಂ ಶಾಸಕ ನಂದೀಶ್ ರೆಡ್ಡಿ, ಯಲಹಂಕದ ಲೋಕಕಂಟಕ ಶಾಸಕ ವಿಶ್ವನಾಥ್ ರೆಡ್ಡಿ, ಬೊಮ್ಮನಹಳ್ಳಿಯ ಸತೀಶ್ ರೆಡ್ಡಿ ಎಂಬ ಮೂವರು ನೆಲಗಳ್ಳ ಶಾಸಕರ ರೆಡ್ಡಿ ಗ್ಯಾಂಗ್ ಸದ್ಯ ಯಡ್ಡಿ ಪಾಲಿಗೆ ಕಟ್ಟಾಳುಗಳಿದ್ದಂತೆ. ಯಶವಂತಪುರದ ಶೋಭಾ ಕರಂದ್ಲಾಜೆಯನ್ನು ಬಿಟ್ಟರೆ ಯಡ್ಡಿ ಪರ ಗ್ಯಾರಂಟಿ ಸಾತು ಕೊಡುವ ಮತ್ತೊಬ್ಬ ಶಾಸಕನೆಂದರೆ ಅದು ದಾಸರಹಳ್ಳಿ ಶಾಸಕ ಮುನಿರಾಜು. ಜನ್ಮತಃ ಈತ ಅಶೋಕ್ ಭಟ್ಟಂಗಿಯಾದರೂ ಸದ್ಯ ಯಡ್ಡಿಯ ಪಾಳಯದಲ್ಲಿ ಗುರುತಿಸಲ್ಪಡುತ್ತಿದ್ದಾನೆ. ಏಕೆಂದರೆ ಅರ್ಕಾವತಿ ಲೇಔಟಿಗೆಂದು ನೋಟಿಫೈಯಾದ ಅರ್ಧಕ್ಕರ್ಧ ಲ್ಯಾಂಡಿಗೆ ಮುನಿರಾಜು ಕೈಯಿಟ್ಟಿದ್ದಾನೆ. ದಾಸರಹಳ್ಳಿಗೆ ಮಂಜೂರಾದ ಮುನ್ನೂರು ಕೋಟಿಗೂ


ವಿಜಯಕುಮಾರ್

ಅಧಿಕ ಮೊತ್ತದ ದುಡ್ಡಲ್ಲಿ ಅರ್ಧಕರ್ಧ ಮುನಿರಾಜು ಜೇಬು ಸೇರಿದೆ. ಯಡ್ಡಿಯ ಜೊತೆ ಸಣ್ಣದೊಂದು ಮುನಿಸಾಟವಾದರೂ ಅದು ತನ್ನ ಕುಂಡಕ್ಕೇ ಬರುತ್ತದೆ ಎಂಬುದು ಖದೀಮ ಮುನಿರಾಜುಗೆ ಚೆನ್ನಾಗಿ ಗೊತ್ತು. ಇಂಥ ಯಾವುದೇ ಲ್ಯಾಂಡ್ ಡೀಲು, ದೋಖಾಗಳಿಗೆ ಹೋಗದೇ ಕೇವಲ ಪಕ್ಷದ ನೆಟ್‌ವರ್ಕ್ ಮೂಲಕವೇ ಗೆದ್ದು ಬಂದ ಜಯನಗರದ ಶಾಸಕ ವಿಜಯ್‌ಕುಮಾರ್‌ಗೆ ಇಂಥ ಯಾವುದೇ ಮುಲಾಜಿಲ್ಲ, ಶುರುವಿನಿಂದಲೂ ವಿಜಯ್‌ಕುಮಾರ್ ಅನಂತ್ ಅನುಯಾಯಿ. ಈ ಕಾರಣಕ್ಕೇ ಬ್ರಾಹ್ಮಣರ ಕೋಟಾದ ವಿಷಯ ಬಂದಾಗೆಲ್ಲ ಯಡ್ಡಿ ಸುರೇಶ್ ಕುಮಾರ್‌ರನ್ನೇ ಬೆಂಬಲಿಸುತ್ತಾ ಬಂದರು. ಅನಂತ್ ಅನುಯಾಯಿ ಎಂಬ ಒಂದೇ ಕಾರಣಕ್ಕೆ ತನ್ನನ್ನು ತುಳಿಯುತ್ತಲೇ ಬಂದ ಯಡ್ಡಿ ವಿರುದ್ಧ ಸದ್ಯ ವಿಜಯ್‌ಕುಮಾರ್ ಕಾರುತ್ತಿದ್ದಾರೆ. ಇದೇ ಸಾಲಿಗೆ ಸೇರುವ ಮತ್ತೊಬ್ಬ ಶಾಸಕ ಬಸವನಗುಡಿಯ ರವಿಸುಬ್ರಹ್ಮಣ್ಯ. ಕಳೆದ ಚುನಾವಣೆಯಲ್ಲಿ ತನಗೆ ಬಿಜೆಪಿ ಟಿಕೆಟ್ಟಿಗೇ ಆಪತ್ತು ತಂದಿದ್ದ ಯಡ್ಡಿಗಿಂತಲೂ ಬೆಂಬಲಿಸಿ ಗೆಲ್ಲಿಸಿ ಎಮ್ಮೆಲ್ಸಿ ಮಾಡಿದ ಅನಂತ್‌ಕುಮಾರ್‌ಗೇ ರವಿಸುಬ್ರಹ್ಮಣ್ಯ ಹೆಚ್ಚು ಆತ್ಮೀಯ.


ರವಿಸುಬ್ರಹ್ಮಣ್ಯ

ಬಹುಶಃ ಕಟ್ಟಾ ನಾಯ್ಡುಗಿಂತ ಯಡ್ಡಿ ವಿರುದ್ಧ ಕತ್ತಿ ಮಸೆಯುತ್ತಿರುವ ಮತ್ತೊಬ್ಬ ಬಿಜೆಪಿ ಶಾಸಕ ಇರಲಿಕ್ಕಿಲ್ಲ. ಲೋಕಾಯುಕ್ತದ ಬಲೆಗೆ ಬಿದ್ದು ಹೈರಾಣಾದ ತನ್ನನ್ನು ಅದೊಂದೇ ಕಾರಣಕ್ಕೆ ಸಂಪುಟದಿಂದ ಕೈಬಿಟ್ಟ ಯಡ್ಡಿ ವಿರುದ್ಧ ಕಟ್ಟಾ ಹಲ್ಲು ಕಡಿಯುತ್ತಿದ್ದಾನೆ. ಯಡ್ಡಿ ವಿರುದ್ಧ ಇರುವ ಎಲ್ಲಾ ಅವಕಾಶಗಳಿಗೂ ಕೈಯಿಟ್ಟು ಸಮಯ ಕಾಯುತ್ತಿರುವ ಕಟ್ಟಾ ಪಾಲಿಗೆ ಇಲ್ಲಿ ಜೊತೆಗಾರನಂತಿರುವುದು ಚಿಕ್ಕಪೇಟೆ ಶಾಸಕ ಹೇಮಚಂದ್ರ ಸಾಗರ್!

ಅನಂತ್‌ಕುಮಾರ್ ಪಕ್ಕಾ ಅನುಯಾಯಿ ಎಂಬ ಒಂದೇ ಕಾರಣಕ್ಕೆ ಹೇಮಚಂದ್ರ ಸಾಗರ್‌ರನ್ನು ಅಸಹ್ಯದಿಂದ ನೋಡಿಕೊಂಡೇ ಬಂದರು ಯಡ್ಡಿ. ಈಗ ಅನಂತ್ ಸ್ವತಃ ತೊಡೆತಟ್ಟಿರುವಾಗ ಹೇಗೆ ಸುಮ್ಮನಿದ್ದಾರು? ಸದ್ಯ ಯಡ್ಡಿ ವಿರೋಧಿ ಕಾರ್ಯಾಚರಣೆಯಲ್ಲಿ ಸಾಗರ್ ಮುಂಚೂಣಿಯಲ್ಲಿದ್ದಾರೆ. ಇವರ ಜೊತೆ ಸರ್ ಸಿ.ವಿ. ರಾಮನ್‌ನಗರದ ಶಾಸಕ ರಘು ಹೆಗಲು ಕೊಡುತ್ತಿದ್ದಾರೆ. ರಘು ಪದಚ್ಯುತ ಲಿಂಬಾವಳಿಯ ಭಾವನೆಂಟ. ಲಿಂಬಾವಳಿ ಮಂತ್ರಿಗಿರಿಯಿದ್ದಷ್ಟೂ ಕಾಲ ರಘು ಅಕ್ಷರಶಃ ಪಾಳೇಗಾರರಂತೆ ಮೆರೆದವರು. ಯಡವಟ್ಟು ಮಾಡಿಕೊಂಡಿದ್ದು ಲಿಂಬಾವಳಿ!

ಭ್ರಷ್ಟ ಐಎಎಸ್ ಅಧಿಕಾರಿಣಿ ನಾಗಲಾಂಬಿಕೆಯನ್ನು ವಿಪರೀತ ಮೆರೆದಾಡಿಸಿದ ತಪ್ಪಿಗೆ ಲಿಂಬಾವಳಿ ದಂಡ ಕಟ್ಟಬೇಕಾಯಿತೆಂಬುದು ಕ್ಲೀಷೆ ಎನ್ನಿಸಬಹುದು. ಆವತ್ತು ಲಿಂಬಾವಳಿಯನ್ನು ಕೆಳಗಿಳಿಸುವಂತೆ ಪಟ್ಟು ಹಿಡಿದಿದ್ದೇ ಅನಂತ್‌ಕುಮಾರ್. ತಾನೇ ಸಾಕಿ ಬೆಳೆಸಿದ ಲಿಂಬಾವಳಿ ತನ್ನ ಅಂಕೆ ಮೀರಿ ಬೆಳೆದದ್ದು ಅನಂತ್‌ಗೆ ಹೇಗೇ ತಾನೇ ಪಥ್ಯವಾದೀತು. ಅತ್ತ ಆರೆಸ್ಸೆಸ್ ಬೆಂಬಲವನ್ನೂ ಕಾಯ್ದುಕೊಳ್ಳದೆ ಇತ್ತ ಯಡ್ಡಿಯನ್ನೂ ಸರಿಮಾಡಿಕೊಳ್ಳದೇ ಎಡಬಿಡಂಗಿಯಾದ ಲಿಂಬಾವಳಿ ಕೊನೆಗೆ ಬಲಿಯಾದದ್ದು ಗುರು ಅನಂತ್‌ಕುಮಾರ್ ಬಿಟ್ಟ ಬಾಣಕ್ಕೇ.


ಇದನ್ನೇ ಲಿಂಬಾವಳಿಗೆ ಯಡ್ಡಿ ಮನದಟ್ಟು ಮಾಡಿದ್ದರೆ ಕನಿಷ್ಠ ಇಬ್ಬರು ಶಾಸಕರ ಬೆಂಬಲವಾದರೂ ದಕ್ಕುತ್ತಿತ್ತು. ಯಡ್ಡಿ ಮೈಮರೆತರು. ಲಿಂಬಾವಳಿಗೆ ಅದು ಗೊತ್ತಿದೆ ಎಂದೇ ಭಾವಿಸಿಕೊಂಡರು. ಆದರೆ ಅನಂತ್ ಹುಷಾರಾದರು. ತಾನೇ ಹೇಳಿಸಿ ಕಿತ್ತ ಮಂತ್ರಿಗಿರಿಯ ದೋಷವನ್ನು ಕೋತಿ ಬೆಣ್ಣೆ ತಿಂದು ಮೇಕೆಯ ಮೂತಿಗೆ ಮೆತ್ತಿದಂತೆ ಯಡ್ಡಿಯಿಂದಾಗಿಯೇ ಲಿಂಬಾವಳಿಯ ಮಂತ್ರಿಗಿರಿ ಹೋಯ್ತು ಎಂದು ನಂಬಿಸಿಬಿಟ್ಟರು. ಅಧಿಕಾರದ ಅಮಲಲ್ಲಿ ಕಣ್ಣು ಕಾಣಿಸದಂತಾಗಿದ್ದ ಲಿಂಬಾವಳಿಗೆ ತಲೆ ಓಡಬೇಕಲ್ಲ; ಅನಂತ್ ಹೇಳಿದ್ದನ್ನೇ ನಂಬಿಬಿಟ್ಟರು. ಯಡ್ಡಿ ವಿರುದ್ಧ ಕಾರ್ಯಾಚರಣೆಗೆ ಕೈಜೋಡಿಸಿಬಿಟ್ಟರು. ಭಾವನೆಂಬ ಒಂದೇ ಕಾರಣಕ್ಕೆ ಸಿ.ವಿ. ರಾಮನ್‌ನಗರದ ಶಾಸಕ ರಘು ಯಡ್ಡಿ ವಿರುದ್ಧ ಲಿಂಬಾವಳಿ ತುಳಿದ ದಾರಿಯನ್ನೇ ತುಳಿಯುತ್ತಿದ್ದಾರೆ.


ಶೋಭ ಕರಂದ್ಲಾಜೆ

ಈ ಎಲ್ಲಾ ಕಪಟ ನಾಟಕಗಳನ್ನು ಗೊತ್ತಿದ್ದೂ ಗೊತ್ತಿಲ್ಲದಂತೆ ನೋಡುತ್ತಿರುವುದು ಆರ್. ಅಶೋಕ್. ಒಂದೆಡೆ ಅನಂತ್‌ಕುಮಾರ್ ಅನ್ನದ ಋಣ ಮತ್ತೊಂದೆಡೆ ಯಡ್ಡಿ ಕರುಣಿಸಿದ ಅಧಿಕಾರದ ಋಣ. ಯಾವ ತಕ್ಕಡಿ ತೂಗಿದರೂ ಅಶೋಕ್ ಅಲ್ಲಿಗೆ ಹಾರುತ್ತಾರೆ. ಅದು ಅಶೋಕ್ ಹುಟ್ಟುಗುಣ. ಯಡ್ಡಿಯ ಜೊತೆಗಿದ್ದಂತೆಯೂ ಆಗಬೇಕು. ಜೊತೆಗಿದ್ದೂ ಅನಂತ್‌ರನ್ನು ಮೆಚ್ಚಿಸಬೇಕು. ಗಾಳಿ ಬಂದಾಗ ತೂರಿಕೊಂಡು ಲಾಭ ಮಾಡಿಕೊಳ್ಳಬೇಕು. ಇದು ಅಶೋಕ್ ಹುಟ್ಟುಗುಣ. ಯಾವತ್ತೂ ಯಾರಿಗೂ ಅಶೋಕ್ ನಿಷ್ಠನಲ್ಲ. ಇದನ್ನು ಅರಿಯದೇ ಮುಖ್ಯಮಂತ್ರಿ ಯಡ್ಡಿ ಹಳ್ಳಕ್ಕೆ ಬಿದ್ದಿದ್ದಾರೆ. ಅಶೋಕ್‌ಗೆ ತೊಟ್ಟಿಲು ತೂಗುವುದೂ ಗೊತ್ತು, ಮಗು ಚಿವುಟುವುದೂ ಗೊತ್ತು.

ಸದ್ಯ ನಂದೀಶ್ ರೆಡ್ಡಿ, ಸತೀಶ್ ರೆಡ್ಡಿ, ವಿಶ್ವನಾಥ್, ಶ್ರೀನಿವಾಸ್, ಶೋಭಾ ಮತ್ತು ಸುರೇಶ್‌ಕುಮಾರ್ ಬಿಟ್ಟರೆ ಯಡ್ಡಿ ಪಾಲಿಗೆ ನಂಬಬಹುದಾದ ಇನ್ನೊಬ್ಬನೇ ಒಬ್ಬ ಬೆಂಗಳೂರಿನ ಶಾಸಕನಿಲ್ಲ.

• ರಾ.ಸೋ.




ನಂಬಿದ ಸುರೇಶ್ ಕುಮಾರ್ ನಡುನೀರಲ್ಲಿ ಕೈಕೊಟ್ಟರು

ಕಾನೂನು ಮತ್ತು ಸಂಸದೀಯ ಸಚಿವ ಸುರೇಶ್ ಕುಮಾರ್ ಏಕೆ ಇಂಥಾ ಸ್ಥಿತಿಯಲ್ಲಿ ಯಡ್ಡಿಯ ಕೈ ಹಿಡಿಯಲಿಲ್ಲ? ಅಥವಾ ಯಡ್ಡಿ ಪರ ಮುಂಚೂಣಿಯಲ್ಲಿಲ್ಲ, ಏಕೆ ಆಚಾರ್ಯ ಒಬ್ಬರೇ ಮುಖ್ಯಮಂತ್ರಿ ಪರ ಸಮರ್ಥನೆಯ ಕ್ಷೀಣ ಧ್ವನಿಯಂತಾಗಿದ್ದಾರೆ?

ಸುರೇಶ್ ಕುಮಾರ್ ಹುಟ್ಟಾ ಅನಂತ್ ವಿರೋಧಿ ಎಂಬುದು ಎಷ್ಟು ನಿಜವೋ ಹಾಗೇ ಸಾಹಸಿಯಲ್ಲ ಎಂಬುದು ಅಷ್ಟೇ ನಿಜ. ಹಾಗೊಮ್ಮೆ ತಾನು ಇಳಿಯಲೇಬೇಕಾಗಿ ಬಂದರೆ ತನ್ನ ಪರ ಇಬ್ಬರು ವಾರಸುದಾರರ ಪೈಕಿ ಒಬ್ಬರು ವಿ.ಎಸ್. ಆಚಾರ್ಯರಾದರೆ ಮತ್ತೊಬ್ಬರು ಸುರೇಶ್ ಕುಮಾರ್ ಎಂದೇ ಕಿವಿಗೆ ಹೂವಿಡುತ್ತಾ ಬಂದವರು ಯಡ್ಡಿ. ನಗರಾಭಿವೃದ್ಧಿ ಖಾತೆಗೆ ಹೆಸರಿಗಷ್ಟೇ ಸುರೇಶ್ ಕುಮಾರ್ ಮಂತ್ರಿ ಅಸಲಿಗೆ ಎಲ್ಲಾ ಸೂತ್ರ ಯಡ್ಡಿ ಮಗ ವಿಜಯೇಂದ್ರನ ಕೈಯಲ್ಲಿದೆ. ಅದು ಯಡ್ಡಿ ಮತ್ತು ಸುರೇಶ್ ಮಧ್ಯದ ಅಂಡರ್‌ಸ್ಟ್ಯಾಂಡಿಂಗ್!

ಮೊನ್ನೆ ಅಂದರೆ ವಾರದ ಹಿಂದೆ ಜೆಡಿಎಸ್ ಅಧಿಪತಿ ಕುಮಾರಸ್ವಾಮಿ ಪ್ರೇರಣಾ ಟ್ರಸ್ಟ್ ದೇಣಿಗೆಯನ್ನು ಬಯಲಿಗೆಳೆದರಲ್ಲ; ಅದಕ್ಕೆ ಪ್ರತಿಯಾಗಿ ಕುಮಾರಸ್ವಾಮಿಯ ಒಂದಷ್ಟು ಖಾಸಗಿ ಹಗರಣಗಳನ್ನು ಬಯಲಿಗೆಳೆಯುವುದು ಸಿಎಂ ಯಡ್ಡಿ ಉದ್ದೇಶವಾಗಿತ್ತು. ಬಿಡಿಎ, ನಗರಾಭಿವೃದ್ಧಿ ಇಲಾಖೆಗಳ ಇಂಚಿಂಚನ್ನೂ ಬಿಡದೇ ಜಾಲಾಡಿ ಕುಮಾರಸ್ವಾಮಿಯ ಕರ್ಮಕಾಂಡಗಳನ್ನು ಯಡ್ಡಿ ಹೆಕ್ಕಿ ತೆಗೆದಿದ್ದರು. ಅದನ್ನು ಪತ್ರಿಕಾಗೋಷ್ಠಿಯಲ್ಲಿ ಹೊರಗೆಡವಲೆಂದೇ ಎಲ್ಲ ಮಾಧ್ಯಮಗಳಿಗೂ ಆಹ್ವಾನಪತ್ರಿಕೆ ಕಳಿಸಲಾಗಿತ್ತು, ಪತ್ರಕರ್ತರೇನೋ ಬಂದರು. ವಿ.ಎಸ್. ಆಚಾರ್ಯರ ಜೊತೆ ಸುರೇಶ್ ಕುಮಾರ್ ಕೂಡ ಗೋಷ್ಠಿಯ ವೇದಿಕೆಯಲ್ಲಿದ್ದರು. ಇದ್ದಕ್ಕಿದ್ದಂತೆ ಆಚಾರ್ಯ ನೆರೆದ ಪತ್ರಕರ್ತರನ್ನುದ್ದೇಶಿಸಿ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅಧಿಕಾರದಲ್ಲಿದ್ದಾಗ ನಡೆಸಿದ ಕರ್ಮಕಾಂಡವನ್ನು ಕುರಿತು ನನ್ನ ಸಹೋದ್ಯೋಗಿ ಸುರೇಶ್‌ಕುಮಾರ್ ವಿವರಣೆ ನೀಡುತ್ತಾರೆ ಎಂದು ಬಿಟ್ಟರು.


ವಿ.ಎಸ್.ಆಚಾರ್ಯ

ಆತನಕ ತಾನು ನೆಪಕ್ಕಷ್ಟೇ ಪತ್ರಿಕಾಗೋಷ್ಠಿಯಲ್ಲಿ ಮುಖ ತೋರಿಸುವುದೆಂದು ಲೆಕ್ಕಹಾಕಿದ ಸುರೇಶ್ ಕುಮಾರ್‌ಗೆ ಏಕಾಏಕಿ ಆಚಾರ್ಯ ತನ್ನ ಹೊರೆಯನ್ನು ತೆಗೆದು ತನ್ನ ಮೇಲೆ ಹಾಕಿದ್ದು ಶಾಕ್ ಕೊಟ್ಟಿದೆ. ಒಳಗೇ ಮಾಡ್ದ ಗುಳಿಗೆ ಸಿದ್ಧ ಎಂಬಂತೆ ನೇರಾನೇರ ಕುಮಾರಸ್ವಾಮಿಯನ್ನು ಎದುರು ಹಾಕಿಕೊಳ್ಳುವುದು ಸುರೇಶ್ ಕುಮಾರ್‌ಗೆ ಇಷ್ಟವಿರಲಿಲ್ಲ, ಕ್ಷಚಿತ್ತಾಗಿ ಆಚಾರ್ಯ ತನ್ನ ಹೊಣೆಯನ್ನು ತನಗೆ ಹೊರಿಸಿದ ಸುರೇಶ್‌ಕುಮಾರ್‌ಗೆ ಜೀರ್ಣವಾಗದ ಬಿರಿಯಾನಿ. ಕುಮಾರಸ್ವಾಮಿ ಮೇಲಿನ ಭೀತಿಗೆ ಪತ್ರಕರ್ತರೆದುರು 'ಅದೆಲ್ಲಾ ನನಗೊತ್ತಿಲ್ಲ, ಅವರೇ ಹೇಳ್ತಾರೆ ಕೇಳಿ...' ಎಂದು ಮತ್ತೆ ಆಚಾರ್ಯರ ಕಡೆಗೆ ಕೈ ತೋರಿಸಿದ್ದಾರೆ.

ಕುಮಾರಸ್ವಾಮಿಯ ಮೇಲೆ ಕಲ್ಲು ಹಾಕಿ ತನ್ನ ಮೈ ಗಲೀಜು ಮಾಡಿಕೊಳ್ಳುವುದು ಆಚಾರ್ಯರಿಗೂ ಇಷ್ಟವಿಲ್ಲ, ಯಾವತ್ತು ಸುರೇಶ್ ಕುಮಾರ್ ತೆಪ್ಪಗಾದರೋ ಆಚಾರ್ಯ ಕೂಡ 'ಮೇಲೆ ಇಲ್ಲ ಅವರೇ ಹೇಳ್ತಾರೆ...' ಎಂದು ನುಣುಚಿಕೊಂಡಿದ್ದಾರೆ. ತನ್ನ ಎಡಬಲಗೈಯಂತಿರುವ ಇಬ್ಬರು ಬ್ರಾಹ್ಮಣರನ್ನು ಬಿಟ್ಟು ಕುಮಾರಸ್ವಾಮಿಯ ಬಟ್ಟೆ ಬಿಚ್ಚಲು ಯತ್ನಿಸಿದ ಯಡ್ಡಿಗೆ ಶುರುವಿನಲ್ಲೇ ಅಪಶಕುನವಾಗಿದೆ. ಸುರೇಶ್ ಬಯಲಿಗೆಳೆಯಲೆಂದೇ ಆಚಾರ್ಯ, ಆಚಾರ್ಯ ಬಾಯಿ ಬಿಡಲೆಂದು ಸುರೇಶ್ ಕುಮಾರ್ ಒಬ್ಬರ ಮೇಲೊಬ್ಬರು ಹಾಕುತ್ತಾ ಕೊನೆಗೆ ಕರೆದ ಪತ್ರಿಕಾಗೋಷ್ಠಿಯೇ ರದ್ದಾಗಿದೆ.

ರಣಾರಂಗದಿಂದ ಓಡಿಬಂದಂತೆ ಬರಿಗೈಯಲ್ಲಿ ಇಬ್ಬರೂ ಯಡ್ಡಿ ಬಳಿ ಬಂದು ಪರಸ್ಪರ ಆರೋಪ ಮಾಡಿದ್ದಾರೆ. ಯಡ್ಡಿಯ ಪಿತ್ಥ ನೆತ್ತಿಗೇರಿ ಸುರೇಶ್ ಕುಮಾರ್ ಸ್ವಾಟೆ ತಿವಿದು, "ಅಲ್ಲಯ್ಯಾ ನಿನ್ನನ್ನೇನು ಮಂಗಳಾರತಿಗಾ ಕರೆಸಿದ್ದು, ಅಷ್ಟನ್ನೂ ಮಾಡಕ್ಕಾಗಿಲ್ಲ ಅಂದ್ರೆ ಇನ್ನ್ಯಾಕಯ್ಯಾ ನಿನ್ನನ್ನ ನಂಬಬೇಕು?" ಎಂದು ಯಡ್ಡಿ ಬೀಪಿ ರೈಸ್ ಮಾಡಿಕೊಂಡಿದ್ದಾರೆ. ಅಲ್ಲಿಗೆ ಸುರೇಶ್‌ಕುಮಾರ್ ಮುಖ ಕೆಟ್ಟಿದೆ. ಅತ್ತ ಅನಂತ್ ಬಣಕ್ಕೆ ಸಲ್ಲುವುದಿಲ್ಲ, ಇತ್ತ ಯಡ್ಡಿ ಜೊತೆ ಏಗಲು ಮೀಟರ್ ಇಲ್ಲ, ಮತ್ತೊಂದೆಡೆ ಯಾರನ್ನೂ ಎದುರು ಹಾಕಿಕೊಳ್ಳುವುದು ಸುರೇಶ್ ಜಾಯಮಾನವಲ್ಲ.

ಒಂದಷ್ಟು ದಿನ ತಲೆ ಮರೆಸಿಕೊಂಡಿದ್ದು ಭೂಗತರಂತೆ ಕಣ್ಮರೆಯಾಗಿದ್ದ ಸುರೇಶ್ ಕುಮಾರ್ ಪರಿಸ್ಥಿತಿ ತಿಳಿಯಾಗುತ್ತಿದ್ದಂತೆ ಮತ್ತೆ ಯಡ್ಡಿ ಪಾಳಯದಲ್ಲಿ ಕಾಣಿಸಿದ್ದಾರೆ. ಯಡ್ಡಿಯ ಜೊತೆಗಿದ್ದೂ ಯುದ್ಧಕ್ಕೆ ಬರಲಾರ. ರಿಸ್ಕು ಬೇಡ ಟಾಸ್ಕು ಬೇಡ. ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬುದು ಸುರೇಶ್ ಪಾಲಿಗೆ ಉಲ್ಟಾ ಲೆಕ್ಕಕ್ಕುಂಟು ಆದರೆ ಆಟಕ್ಕಿಲ್ಲ.

ನೋ ಕಾಮೆಂಟ್ಸ್

"ಇಡೀ ವಿಶ್ವದಲ್ಲಿ ಭಾರತವೇ ಅತಿ ದೊಡ್ಡ ಶಸ್ತ್ರಾಸ್ತ್ರ ಆಮದು ಮಾಡಿಕೊಳ್ಳುವ ದೇಶವಾಗಿದೆ. ಪ್ರಪಂಚದಲ್ಲಿ ಒಟ್ಟಾರೆ ಮಾರಾಟವಾಗುವ ಶಸ್ತ್ರಾಸ್ತ್ರಗಳಲ್ಲಿ ಶೇ.9ರಷ್ಟನ್ನು ಭಾರತವೇ ಖರೀದಿಸುತ್ತದೆ. ಚೀನಾ ಶೇ.6ರಷ್ಟು ಖರೀದಿಸುತ್ತದೆ. ಈ ವರ್ಷ ಭಾರತವು ತನ್ನ ರಕ್ಷಣಾ ಬಜೆಟ್ಟನ್ನು 1,50,000 ಕೋಟಿಗೆ ಏರಿಸಿಕೊಂಡಿದ್ದು ಅದರಲ್ಲಿ ಶೇ.70 ಭಾಗ ಶಸ್ತ್ರಾಸ್ತ್ರ ಆಮದಿಗೇ ವೆಚ್ಚವಾಗಲಿದೆ. ಈಗ ಶಸ್ತ್ರಾಸ್ತ್ರಗಳ ಖರೀದಿಗೆ ಭಾರತ ಮಾಡಿರುವ ಬೇಡಿಕೆಗಳನ್ನು ಲೆಕ್ಕ ಹಿಡಿದರೆ ಮುಂದಿನ ಐದು ವರ್ಷಗಳವರೆಗೂ ಸಹ ಭಾರತವೇ ನಂ.1 ಶಸ್ತ್ರಾಸ್ತ್ರ ಕೊಳ್ಳುವ ರಾಷ್ಟ್ರವಾಗಿ ಉಳಿಯಲಿದೆ."

- "ಜೇನ್ ಡಿಫೆನ್ಸ್ ವೀಕ್ಲಿ" ಪತ್ರಿಕೆಯ ವರದಿ

"ರಂಗಭೂಮಿ ಸಮತಲ ಮಟ್ಟದಲ್ಲಿ ವಿಸ್ತರಣೆ ಆಗುವ ಕ್ಷೇತ್ರ. ಸಿನಿಮಾ ಲಂಬವಾಗಿ ಬೆಳೆಯುವ ಕ್ಷೇತ್ರ. ಒಂದೆರಡು ಹಿಟ್ ಚಿತ್ರಗಳನ್ನು ನೀಡಿದರೆ ಆಯಿತು. ನೀವು ಆಕಾಶದೆತ್ತರಕ್ಕೆ ಬೆಳೆದು ನಿಂತಿರುತ್ತೀರಿ. ಆದರೆ ರಂಗಭೂಮಿ ಮತ್ತು ಚಿತ್ರರಂಗ ಎರಡಕ್ಕೂ ವಿಭಿನ್ನ ಆಯಾಮಗಳಿವೆ. ಆ ಆಯಾಮಗಳ ಗ್ರಹಿಕೆ ಮುಖ್ಯವಾಗುತ್ತದೆ."

- ರಂಗಾಯಣ ರಘು

"ತಂತ್ರಜ್ಞಾನ ಮುಂದುವರೆದಿರುವ ಈ ಕಾಲದಲ್ಲೂ ಪ್ರಪಂಚದ 90 ಕೋಟಿ ಜನ ಸುರಕ್ಷಿತ ಮೂಲಗಳಿಂದ ಕುಡಿಯುವ ನೀರನ್ನು ಪಡೆದುಕೊಳ್ಳುತ್ತಿಲ್ಲ. ಹಾಗೆಯೇ 260 ಕೋಟಿಗೂ ಹೆಚ್ಚು ಜನಕ್ಕೆ ಈಗಲೂ ಆರೋಗ್ಯಕರ ಶೌಚಾಲಯದ ಸೌಲಭ್ಯವಿಲ್ಲ. ಈ ಕಾರಣಗಳಿಂದ ಪ್ರತಿವರ್ಷ 16 ಲಕ್ಷ ಜನ ಕೇವಲ ಮಲೇರಿಯಾದಿಂದಲೇ ಸಾಯುತ್ತಿದ್ದಾರೆ. ಉತ್ತಮ ಕುಡಿಯುವ ನೀರಿನ ಸೌಲಭ್ಯ ನೀಡಿದರೆ ಇದರಲ್ಲಿ 4 ಲಕ್ಷಕ್ಕೂ ಹೆಚ್ಚು ಜನರನ್ನು ಸಾವಿನಿಂದ ಬಚಾವು ಮಾಡಬಹುದು. ಆರೋಗ್ಯಕರ ಶೌಚಾಲಯವನ್ನು ನೀಡಿದರೆ 8 ಕೋಟಿ ಜನರನ್ನು ಸಾವಿನಿಂದ ಬಚಾವು ಮಾಡಬಹುದು."

- ವಿಶ್ವಸಂಸ್ಥೆ ವರದಿ

ನಂಬಿದ್ರೆನಂಬಿ ಬಿಟ್ರೆಬಿಡಿ


"ದೆಹಲಿಯಲ್ಲಿನ ಸಿಪಿಎಮ್ ಕಚೇರಿಯಲ್ಲಿ ಅದರ ಕಾರ್ಯದರ್ಶಿ ಪ್ರಕಾಶ್ ಕಾರಟ್ ಜೊತೆ ನಡೆದ ಸಂದರ್ಶನದಲ್ಲಿ ಕಾರಟ್‌ರವರು ಅಮೆರಿಕದ ಜೊತೆ ಭಾರತದ ಆರ್ಥಿಕ ಬಾಂಧವ್ಯ ಉತ್ತಮಗೊಳ್ಳುವುದನ್ನು ಸಿಪಿಎಂ ಆಶಿಸುತ್ತದೆಂದು ಹೇಳಿದರು ಮತ್ತು ವಿದೇಶಿ ನೇರ ಬಂಡವಾಳ ಹೂಡಿಕೆಗೂ ತಾವು ವಿರುದ್ಧವಿಲ್ಲವೆಂದು, ಅದು ತಂತ್ರಜ್ಞಾನವನ್ನು ಮತ್ತು ಉದ್ಯೋಗವನ್ನು ತರುವುದಾದರೆ ಅವನ್ನು ಆಹ್ವಾನಿಸುತ್ತೇವೆಂದೂ ಭರವಸೆ ನೀಡಿದರು.

- ವಿಕಿಲೀಕ್ಸ್‌ನಲ್ಲಿ ಬಹಿರಂಗಗೊಂಡ ವಿಷಯ

"ರಾಜ್ಯದಲ್ಲಿ ಎಲ್ಲೂ ಲೋಡ್‌ಶೆಡ್ಡಿಂಗ್ ಆಗುತ್ತಾ ಇಲ್ಲ. ತಾಂತ್ರಿಕ ಸಮಸ್ಯೆಯಿಂದ ವಿದ್ಯುತ್ ಪೂರೈಕೆಯಲ್ಲಿ ತೊಂದರೆ ಇರಬಹುದು. ಅಷ್ಟೇ ಹೊರತು ನಾವು ಇಲಾಖೆಯಿಂದ ಲೋಡ್ ಶೆಡ್ಡಿಂಗ್ ಮಾಡಿಲ್ಲ, ಮಾಡುತ್ತಲೂ ಇಲ್ಲ. ವಿದ್ಯಾರ್ಥಿಗಳಿಗೆ ತೊಂದರೆ ಆಗದಂತೆ ಸಂಜೆ 6ರಿಂದ ಬೆಳಿಗ್ಗೆ 6ರ ವರೆಗೆ ಸಿಂಗಲ್ ಫೇಸ್ ಕರೆಂಟ್ ಕೊಡುತ್ತಿದ್ದೇವೆ."

- ಶೋಭಾ ಕರಂದ್ಲಾಜೆ

ಸರ್ಕಾರದೊಂದಿಗಿನ ಸಂಬಂಧ ಕೇವಲ ನೈತಿಕತೆಯ ಪ್ರಶ್ನೆಯೇ?



"ಕೋಮುವಾದಿ ಸರ್ಕಾರ ಅಧಿಕಾರದಲ್ಲಿದ್ದಾಗ ಯಾವ ಕಾರಣಕ್ಕೂ ಅವರೊಂದಿಗೆ ಅನುಸಂಧಾನ ಮಾಡಿಕೊಳ್ಳಬಾರದು. ಉಳಿದ ಸರ್ಕಾರದೊಂದಿಗೆ ನಮ್ಮ ಸಂಬಂಧ ಯಾವ ರೀತಿಯದ್ದಾಗಿರಬೇಕು ಎಂಬುದರ ಬಗ್ಗೆ ಬಂಡಾಯ ಸಾಹಿತ್ಯ ಸಂಘಟನೆಯಲ್ಲಿ ಉದ್ದಕ್ಕೂ ಚರ್ಚೆಯಾಗಿರೋ ವಿಷಯ. ಚುನಾಯಿತ ಸರ್ಕಾರಗಳು ಕೋಮುವಾದಿಯಾಗಿಲ್ಲದಿದ್ದರೆ ಅಂಥ ಸರ್ಕಾರಗಳೊಂದಿಗೆ ಪ್ರಗತಿಪರರು ಸಮೀಪ ಮತ್ತು ದೂರದ ಸಂಬಂಧ ಹೊಂದಿರಬೇಕು. ಈ ಸರ್ಕಾರಗಳೊಂದಿಗೆ ಯಾವ ಸಂಬಂಧವೂ ಇಟ್ಟುಕೊಳ್ಳಬಾರದು ಅಂತ ಮಾತಾಡುವ ನೈತಿಕ ಹಕ್ಕಿದ್ದರೆ ಅದು ನಕ್ಸಲೀಯರಿಗೆ ಮಾತ್ರ. ಏಕೆಂದರೆ ಅವರು ಈ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಒಪ್ಪುವುದಿಲ್ಲ."

- ಬರಗೂರು ರಾಮಚಂದ್ರಪ್ಪ


ಮೀಡಿಯಾ ಮಾತು



ಕನ್ನಡದ ಮೀಡಿಯಾ ಮನೆಗಳಲ್ಲಿ ಒಳಬರುವ ಹಾಗೂ ಹೊರಹೋಗುವ ವಿದ್ಯಮಾನ ಮುಂದುವರೆದೇ ಇದೆ. ಮಳೆ ನಿಂತರೂ ಮರದ ಹನಿ ನಿಲ್ಲಲ್ಲ ಎನ್ನುವಂತೆ ಚಿಕ್ಕವರು, ದೊಡ್ಡವರ ಸ್ಥಾನ ತ್ಯಾಗ ಪಲ್ಲಟ ಸಾಗುತ್ತಲೇ ಇದೆ.


ಇವರ ಪೈಕಿ ಕನ್ನಡ ಪ್ರಭದಿಂದ ಉಮಾಪತಿ ಹೊರಬಂದಿರುವುದು ದೊಡ್ಡ ಸುದ್ದಿಯಾಗಿದೆ. ದೆಹಲಿ ಪ್ರತಿನಿಧಿಯಾಗಿ ಅನೇಕ ವರ್ಷದಿಂದ ಕೆಲಸ ಮಾಡುತ್ತಿದ್ದ ಉಮಾಪತಿ ಹೀಗೆ ಸಡನ್ನಾಗಿ ಕೆಲಸ ಬಿಡಲು ಕಾರಣವೇನಿರಬಹುದು?

ವಿಶ್ವೇಶ್ವರ ಭಟ್ ಕನ್ನಡ ಪ್ರಭಕ್ಕೆ ಸಂಪಾದಕರಾಗಿ ಬಂದದ್ದಾ? ಅಥವಾ ಕನ್ನಡ ಪ್ರಭ ಇನ್ನು ಮುಂದೆ ಸೆಕ್ಯುಲರ್ ಆಗಿ ಉಳಿಯಲಾರದೆಂಬ ಅಪನಂಬಿಕೆಯಾ?


ಸಂಕೇಶ್ವರ


ಉಮಾಪತಿ ತಮ್ಮ ರಾಜೀನಾಮೆಗೆ ಸ್ಪಷ್ಟ ನೇರ ಕಾರಣ ನೀಡಿಲ್ಲ. ಬದಲಾಗಿ ತಮ್ಮ ಕರಿಯರ್‌ನ ಆರಂಭದ ದಿನಗಳು, ಪ್ರಭದ ಸಹೋದ್ಯೋಗಿ ಮಿತ್ರರನ್ನೆಲ್ಲಾ ನೆನೆದು ಧನ್ಯವಾದ ಹೇಳುವ ಪಾತ್ರವೊಂದನ್ನು ತಮ್ಮ ಫೇಸ್‌ಬುಕ್‌ನಲ್ಲಿ ಬರೆದುಕೊಂಡಿದ್ದಾರೆ. ಈ ನಡುವೆ ಕನ್ನಡ ಪ್ರಭದ ಕೆಲ ವರದಿಗಾರರಷ್ಟೇ ಅಲ್ಲದೆ ಜಾಹೀರಾತು ವಿಭಾಗದಲ್ಲಿದ್ದ ಅಹೋಬಲಪತಿ ಮುಂತಾದ ಜಾತ್ಯತೀತರೂ, ಗಟ್ಟಿ ಕೆಲಸಗಾರರೂ ಕೆಲಸ ಬಿಟ್ಟಿದ್ದಾರೆ. ಕೋಮುವಾದ ಇವರಿಗೆಲ್ಲಾ ಅಪಥ್ಯ.

ಪ್ರಭದಿಂದ ಹೊರಬಂದ ಉಮಾಪತಿಯವರನ್ನು ತಕ್ಷಣ ವಿಜಯ ಕರ್ನಾಟಕ ಕರೆದುಕೊಂಡಿದೆ. ಮುಂದಿನ ಆರು ತಿಂಗಳು ಉಮಾಪತಿ ದೆಹಲಿಯಲ್ಲೇ ಇದ್ದು ವಿಕಗಾಗಿ ಕೆಲಸ ಮಾಡುತ್ತಾರೆ. ನಂತರ ಬೆಂಗಳೂರಿಗೆ ನೀವು ಬರಬೇಕಾಗುತ್ತದೆ, ಹೆಚ್ಚಿನ ಜವಾಬ್ದಾರಿ ಇದೆ ಎಂದು ಟೈಮ್ಸ್‌ನ ಸುನಿಲ್ ರಾಜಶೇಖರ್ ಹಾಗೂ ಈ ರಾಘವನ್ ಹೇಳಿದ್ದಾರೆ. ಉಮಾಪತಿ ಏನು ಮಾಡಲಿದ್ದಾರೋ ಕಾದು ನೋಡಬೇಕಿದೆ.


ರವಿ ಹೆಗಡೆ

ಅತ್ತ ಉದಯವಾಣಿಯಿಂದ ಒಂದೆರಡು ಅಪಸ್ವರ ಕೇಳಿಬರುತ್ತಿವೆ. ಹೊಸ ಸಂಪಾದಕ ರವಿ ಹೆಗಡೆ ತಮ್ಮ ಕೆಲ ಸಿಬ್ಬಂದಿಯೊಂದಿಗೆ ಏಕವಚನದಲ್ಲಿ ಮಾತನಾಡುತ್ತಿರುವುದು ಹಲವು ಹಿರಿಯ ವರದಿಗಾರರಿಗೆ ಬೇಸರ ತರಿಸಿದೆ. ಅವರಲ್ಲಿ ಕೆಲವರು ಕೆಲಸ ಬಿಟ್ಟು ಹೋದರೂ ಅಚ್ಚರಿಯಿಲ್ಲ ಎನ್ನುವ ಸುದ್ದಿ ಇದೆ.

ಈ ನಡುವೆ ವಿಜಯ ಸಂಕೇಶ್ವರ್ ಮತ್ತೆ ಹೊಸ ದಿನಪತ್ರಿಕೆ ಮಾಡುವ ಸಾಹಸಕ್ಕೆ ಕೈ ಹಾಕುತ್ತಿದ್ದಾರೆ. ಈಗಾಗಲೇ ರಾಜ್ಯದ ಎಂಟು ಸ್ಥಳಗಳಲ್ಲಿ ಅವರು ಪತ್ರಿಕಾ ಕಚೇರಿಗಾಗಿ ಕಟ್ಟಡ ರೆಡಿ ಮಾಡುತ್ತಿದ್ದಾರೆ. ಹೊಸ ಟೈಟಲ್ ಈಗಾಗಲೇ ಬಂದಿರಲಿಕ್ಕೂ ಸಾಕು. ಬಹುತೇಕ ಮುಂದಿನ ನವೆಂಬರ್ ವೇಳೆಗೆ ಅವರ ಡೈಲಿ ಲಾಂಚ್ ಆಗುತ್ತದೆ. ಅದಕ್ಕಾಗಿ ಸಂಪಾದಕರ ಹುಡುಕಾಟವೂ ನಡೆದಿದೆ.


ಉಮಾಪತಿ

ಈ ನಡುವೆ ಸಮಯ ಟೀವಿ ಮಾಲೀಕತ್ವದ ಬಗ್ಗೆ ಅನೇಕ ಊಹಾಪೋಹಗಳು ಕೇಳಿಬರುತ್ತಿವೆ. ಮಾಲೀಕ ಸಚಿನ್ ನಾರಾಯಣ್ ಲಿಕ್ಕರ್ ವ್ಯಾಪಾರದ ಫ್ಯಾಮಿಲಿಯ ಹುಡುಗನಾದರೆ ಈತನ ಮಾವ ಕಾಂಗ್ರೆಸ್ ಲೀಡರ್ ಗಂಡಸಿ ಶಿವರಾಂ. ಸಚಿನ್‌ನ ಸೋದರಿಗೆ ಈಗ ತಾನೆ ಬಿಜೆಪಿಯ ರಾಮಚಂದ್ರಗೌಡರ ಮಗನೊಂದಿಗೆ ಎಂಗೇಜ್‌ಮೆಂಟ್ ಆಗಿದೆ. ಜೊತೆಗೆ ಸಚಿವ ಮುರುಗೇಶ್ ನಿರಾಣಿ ಪಾಲುದಾರಿಕೆಯೂ ಸಮಯ ಟಿವಿಯಲ್ಲಿರುವುದು ಈಗ ಬಹಿರಂಗ ಸತ್ಯ. ಈ ಕಾಂಬಿನೇಷನ್ ಏನೆಂಬುದು ಕೆಲವರಿಗೆ ಗೊತ್ತಾಗುತ್ತಿಲ್ಲ. ಈ ನಡುವೆ ರಾಜ್ ಟೀವಿಯವರು ಇನ್ನೆರಡು ಹೊಸ ಚಾನಲ್ ಚಾಲೂ ಮಾಡುತ್ತಾರೆಂಬ ಸುದ್ದಿ ಹಬ್ಬಿದೆ. ಟಿವಿ ಕೆಲಸದಾಕಾಂಕ್ಷಿಗಳು ಅತ್ತ ನುಗ್ಗುತ್ತಿದ್ದಾರೆ.

ಸದ್ಯಕ್ಕೆ ದೊಡ್ಡಮಟ್ಟದ ಮೀಡಿಯಾ ವಲಸೆಗಳು ಮುಗಿದಂತೆ ಕಾಣುತ್ತಿವೆ. ಮುಂದೆ ಯಾವುದಾದರೂ ಹೊಸ ಡೈಲಿಯೋ ಇಲ್ಲಾ ಚಾನಲ್ಲೋ ಚಾಲೂ ಆದರೆ ಅದು ಇನ್ನೊಂದು ಸುತ್ತಿನ ವಲಸೆಗೆ ಪುಷ್ ಕೊಡಬಹುದಷ್ಟೇ.


ಅಂದಹಾಗೆ ಉದಯವಾಣಿಯಿಂದ ಕೆಲವರು ವಿಜಯ ಕರ್ನಾಟಕದತ್ತ ಹೊರಡುವ ತಯಾರಿಯಲ್ಲಿದ್ದಾರೆಂಬ ವರ್ತಮಾನವಿದೆ. ಅವರು ಯಾರ್‍ಯಾರೆಂಬುದು ಇಲ್ಲಿ ಸದ್ಯಕ್ಕೆ ಅಪ್ರಸ್ತುತ.

...ರ್ದು ಅಕಾಡೆಮಿಯನ್ನು ಕರ್ನಾಟಕ ಸಂಸ್ಕೃತಿಯಿಂದ ಬೇರ್ಪಡಿಸುತ್ತಿರುವ ಕೋಮುವಾದಿ ಸರ್ಕಾರ

...ನೀರು, ಗಾಳಿ, ಸಂಸ್ಕೃತಿ ಎಲ್ಲಕ್ಕೂ ಕೋಮುವಾದಿ ...ಬೆರೆಸುತ್ತಿರುವ ಬಿಜೆಪಿ ಸರ್ಕಾರ ಈಗ ಕರ್ನಾಟಕದ ...ಷೆಗಳನ್ನೂ ಕರ್ನಾಟಕದ ಜನತೆಯ ಸಂಸ್ಕೃತಿಯಿಂದಲೂ ...ರ್ಪಡಿಸುವ ಕೋಮುವಾದಿ ಹುನ್ನಾರವನ್ನು ನಡೆಸುತ್ತಿದೆ. ...ತೆಯನ್ನು ಧರ್ಮದ ಹೆಸರಲ್ಲಿ ಒಡೆದು ಆಳುತ್ತಿರುವ ...ರ ಈಗ ಭಾಷೆಗಳನ್ನು ಧರ್ಮದ ಆಧಾರದಲ್ಲಿ ...ಮ ಆಳಲು ಹೊರಟಿದೆ. ಅದಕ್ಕೆ ಇತ್ತೀಚಿನ ಉದಾಹರಣೆ ...ರ್ದು ಮತ್ತು ಬ್ಯಾರಿ ಅಕಾಡೆಮಿಯನ್ನು ಕನ್ನಡ ಸಂಸ್ಕೃತಿ ...ಖೆಯಿಂದ ಬೇರ್ಪಡಿಸಿ ಅಲ್ಪಸಂಖ್ಯಾತರ ಇಲಾಖೆಗೆ ...ಸುವ ಕ್ರಮ.

...ಕರ್ನಾಟಕದ ಜನಭಾಷೆಗಳಲ್ಲಿ ಉರ್ದು ಸಹ ಒಂದು. ... ಯಾವುದೇ ಒಂದು ಧಾರ್ಮಿಕರ ಭಾಷೆಯಲ್ಲ. ...ವಾಸದಲ್ಲಿ ಹಿಂದೂಗಳು ಮತ್ತು ಮುಸ್ಲಿಮರು ಬೆರೆತು ...ಹಾರ್ದಯುತವಾಗಿ ಬಾಳಿದ ಫಲವಾಗಿ ಜನ್ಮ ತಾಳಿದ ... ಉರ್ದು. ಹೀಗಾಗಿ 1977ರಲ್ಲಿ ದೇವರಾಜು ಅರಸ್ ...ು ಕನ್ನಡ ಸಂಸ್ಕೃತಿ ಇಲಾಖೆಯ ಅಡಿಯಲ್ಲಿ 'ಕರ್ನಾಟಕ ...ರ್ದು ಅಕಾಡೆಮಿ'ಯನ್ನು ಸ್ಥಾಪಿಸಿದರು. ಇದರ ಹಿಂದಿನ ...ಲ್ಪನೆ ಕರ್ನಾಟಕವನ್ನು ಒಂದು ಸಮೃದ್ಧ ಬಹುಸಂಸ್ಕೃತಿ ...ವನ್ನಾಗಿ ಉಳಿಸುವುದು ಮತ್ತು ಬೆಳೆಸುವುದೇ ಆಗಿತ್ತು.

ಆದರೆ ಕೋಮುವಾದಿ ಬಿಜೆಪಿ ಸರ್ಕಾರ ...ಾರಕ್ಕೆ ಬಂದಮೇಲೆ ಇಲ್ಲಿಯೂ ಹುಳಿ ಹಿಂಡುವ ... ಪ್ರಾರಂಭಿಸಿದೆ. 2008ರ ಸೆಪ್ಟೆಂಬರ್‌ನಲ್ಲಿ ಬಿಜೆಪಿ ...ರವೇ ಖ್ಯಾತ ಉರ್ದು ಸಾಹಿತಿ ಮಾಜಿ ಪೊಲೀಸ್ ...ಾರಿ ಖಲೀಲುರ್‌ರಹಮಾನ್ ಅಧ್ಯಕ್ಷತೆಯಲ್ಲಿ 15 ಮಂದಿ ...ರ ನೇಮಕಾತಿಯೂ ಆಗಿ ಒಂದು ಪರಿಪೂರ್ಣ



ಉರ್ದು ಅಕಾಡೆಮಿ ಕಾರ್ಯ ನಿರ್ವಹಿಸುತ್ತಿತ್ತು. ಆದರೆ ದಿಢೀರನೆ ನವಂಬರ್ ತಿಂಗಳಲ್ಲಿ ಸರ್ಕಾರ ಏಕಾಏಕಿ ಯಾವ ಕಾರಣವನ್ನೂ ನೀಡದೆ, ಯಾವ ಕಾನೂನನ್ನೂ ಪಾಲಿಸದೆ ಇಡೀ ಉರ್ದು ಅಕಾಡೆಮಿಯನ್ನು ಬರಖಾಸ್ತು ಮಾಡಿಬಿಟ್ಟಿತು. ಬರಖಾಸ್ತು ಮಾಡಿದ ಎರಡು ತಿಂಗಳ ನಂತರ ಸಂಸ್ಕೃತಿ ಸಚಿವರಾದ ಗೋವಿಂದ ಕಾರಜೋಳರವರು ಅಧ್ಯಕ್ಷರು ಶಿಷ್ಟಾಚಾರ ಪಾಲಿಸಿಲ್ಲ ಮತ್ತು ಸಿಬ್ಬಂದಿಗೆ ಕಿರುಕುಳ ನೀಡುತ್ತಿದ್ದರು ಎಂಬ ಪಿಳ್ಳೆ ನೆವ ಕೊಟ್ಟಿದ್ದಾರೆ. ಆದರೆ ಈ ಎರಡು ಆರೋಪಗಳೂ ಅಧ್ಯಕ್ಷರನ್ನಾಗಲೀ ಅಥವಾ ಇಡೀ ಅಕಾಡೆಮಿಯನ್ನಾಗಲೀ ವಜಾ ಮಾಡುವಷ್ಟು ಬಲವಾದ ಕಾರಣಗಳಲ್ಲ. ಅಷ್ಟು ಮಾತ್ರವಲ್ಲದೆ ವಜಾ ಮಾಡುವಾಗ ಯಾವುದೇ ಕಾನೂನು ಮತ್ತು ರೂಲ್ಸುಗಳನ್ನೂ ಪಾಲಿಸಿಲ್ಲ.

ಅಷ್ಟೇ ಆಗಿದ್ದರೆ ಅದೊಂದು ಆಡಳಿತಾತ್ಮಕ ವಿಷಯವಾಗಿ ಮಾತ್ರ ಉಳಿಯುತ್ತಿತ್ತು. ಆದರೆ ಕಳೆದ ಫೆಬ್ರವರಿಯಲ್ಲಿ ಸರ್ಕಾರ ಉರ್ದು ಸಾಹಿತ್ಯ ಅಕಾಡೆಮಿ ಮತ್ತು ಬ್ಯಾರಿ ಸಾಹಿತ್ಯ ಅಕಾಡೆಮಿಯನ್ನು ಕನ್ನಡ ಸಂಸ್ಕೃತಿ ಇಲಾಖೆಯಿಂದ ಕಿತ್ತು ಅಲ್ಪಸಂಖ್ಯಾತ ಇಲಾಖೆಗೆ ಸೇರಿಸುವ ತೀರ್ಮಾನವನ್ನು ಕೈಗೊಂಡಿದೆ. ಇದು ಪಕ್ಕಾ ಕೋಮುವಾದಿ ನಿಲುವಾಗಿದೆ. ಇದು ಕರ್ನಾಟಕದ ಬಹುಸಂಸ್ಕೃತಿಯನ್ನು ಧರ್ಮಾಧಾರಿತವಾಗಿ ವಿಂಗಡಿಸಿ, ಪ್ರತ್ಯೇಕಿಸುವ ಹುನ್ನಾರವಾಗಿದೆ. ಇದರಿಂದ ಒಂದು ಕಡೆ ಕನ್ನಡ ಭಾಷಿಕರೆಂದರೆ ಕೇವಲ ಹಿಂದೂಗಳು ಎಂದಾಗುವುದಲ್ಲದೇ, ಉರ್ದು ಭಾಷೆ ಕೇವಲ ಮುಸ್ಲಿಮರದ್ದು ಎಂದಾಗಿಬಿಡುವ ಅಪಾಯವಿದೆ. ಇದು ಇತಿಹಾಸಕ್ಕೂ, ವರ್ತಮಾನಕ್ಕೂ, ಮತ್ತು ಭವಿಷ್ಯಕ್ಕೂ ಮಾಡುವ ಅಪಚಾರವಾಗಿದೆ. ಈ ಮೂಲಕ ಉರ್ದು ಸಾಹಿತ್ಯದ ಮೂಲ ಕರ್ನಾಟಕದಲ್ಲಿರುವುದನ್ನೂ ಮತ್ತು ಅದರ ಜಾತ್ಯತೀತ ಗುಣವನ್ನೂ ಬಿಜೆಪಿ ಸರ್ಕಾರ ತಿರಸ್ಕರಿಸುತ್ತಿದೆ. ಬ್ಯಾರಿ ಭಾಷೆ ಕರ್ನಾಟಕದಲ್ಲಿ ಹುಟ್ಟಿದ ಕನ್ನಡದ ಸಹಯೋಗಿ ಭಾಷೆಗಳಲ್ಲಿ ಒಂದು. ಇದು ಮುಸ್ಲಿಮರು ಮಾತ್ರವಲ್ಲ, ಬೋವಿಗಳು, ತಿಯಾಗಳು, ಬೆಳ್ಳ...ರು ಮುಂತಾದ ಹಿಂದೂಗಳ ಮನೆಮಾತೂ ಸಹ ಆಗಿದೆ. ಅದೇರೀತಿ ಕರ್ನಾಟಕದಲ್ಲಿ ಉರ್ದು ಮಾತೃಭಾಷೆಯಾಗಿರುವ 1 ಕೋಟಿಗೂ ಹೆಚ್ಚಿನ ಜನರಿದ್ದಾರೆ. ಇದು ಕನ್ನಡದ ನಂತರದಲ್ಲಿ ಎರಡನೇ ಸ್ಥಾನದಲ್ಲಿದೆ. ಕರ್ನಾಟಕದ ಪ್ರಸಿದ್ಧ ಉರ್ದು ಸಾಹಿತಿಗಳ ಪಟ್ಟಿಯಲ್ಲಿ ಶಾಂತರಸ, ದೇವೇಂದ್ರ ಕುಮಾರ ಹಕಾರಿ, ಪಂಚಾಕ್ಷರಿ ಹಿರೇಮಠ, ಮುದ್ದಣ್ಣ ಮರುರ, ಶಾಮೀಲ್ ಕಲಾದ್ಗಿ ಮುಂತಾದವರಿದ್ದಾರೆ. ಉರ್ದು ಅಕಾಡೆಮಿಯು ಸಹ ಕನ್ನಡ ಮತ್ತು ಉರ್ದು ಸಾಹಿತ್ಯದ ನಡುವಿನ ಕೊಡುಕೊಳ್ಳುಗಳನ್ನು ಆಗು ಮಾಡಲು ಮತ್ತು ಅಖಿಲ ಭಾರತ ಮಟ್ಟದಲ್ಲಿ ಉರ್ದು ಸಾಹಿತ್ಯದ ಸೆಕ್ಯುಲಾರ್ ಸ್ವರೂಪವನ್ನು ಉಳಿಸಿಕೊಳ್ಳಲು ಸತತವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಒಂದು ಯಶಸ್ವೀ ಅಕಾಡೆಮಿಯಾಗಿ ಕೆಲಸ ಮಾಡುತ್ತಿತ್ತು.

ಇಂಥಾ ಸಂದರ್ಭದಲ್ಲಿ ಬಿಜೆಪಿ ಸರ್ಕಾರ ತನ್ನ ಕೋಮುವಾದಿ ನೀತಿಯನ್ನು ಇಲ್ಲೂ ಹರಿಬಿಟ್ಟು ಉರ್ದು ಮತ್ತು ಬ್ಯಾರಿ ಅಕಾಡೆಮಿಯನ್ನು ಕನ್ನಡ ಸಂಸ್ಕೃತಿ ಇಲಾಖೆಯಿಂದ ಕಿತ್ತು ಅಲ್ಪಸಂಖ್ಯಾತ ಇಲಾಖೆಗೆ ಸೇರಿಸುವುದನ್ನು ಕನ್ನಡಿಗರೆಲ್ಲಾ ವಿರೋಧಿಸಬೇಕಿದೆ. ಈ ಕೂಡಲೇ ಈ ಕ್ರಮವನ್ನು ಕೈಬಿಟ್ಟು ಉರ್ದು ಅಕಾಡೆಮಿಗೆ ಅಧ್ಯಕ್ಷ ಮತ್ತು ಸದಸ್ಯರನ್ನು ನೇಮಕ ಮಾಡುವಂತೆ ಹೋರಾಡುವುದು ಎಲ್ಲ ಸೆಕ್ಯುಲಾರ್ ಕನ್ನಡಿಗರ ಕರ್ತವ್ಯವೂ ಆಗಿದೆ.

ಈ ನಿಟ್ಟಿನಲ್ಲಿ ಇದೇ ಮಾರ್ಚ್ 28ರಂದು ಬೆಳಿಗ್ಗೆ 10ಕ್ಕೆ ಸೋಮವಾರ ಬೆಂಗಳೂರಿನ ಟೌನ್‌ಹಾಲ್ ಎದುರು ಕನ್ನಡದ ಎಲ್ಲಾ ಪ್ರಮುಖ ಬರಹಗಾರರು, ಸಾಹಿತಿಗಳು, ಕಲಾವಿದರು ಮತ್ತು ಹೋರಾಟಗಾರರು ಸರ್ಕಾರದ ಈ ಕೋಮುವಾದಿ ನೀತಿಯನ್ನು ಖಂಡಿಸಿ ಪ್ರತಿಭಟನಾ ಧರಣಿ ನಡೆಸಲಿದ್ದಾರೆ. ಈಗಾಗಲೇ ಹಿರಿಯರಾದ ರಾಷ್ಟ್ರಕವಿಗಳು ಆದ ಜಿ.ಎಸ್.ಶಿವರುದ್ರಪ್ಪನವರೂ ಸಹ ಈ ಹೋರಾಟಕ್ಕೆ ತಮ್ಮ ಬೆಂಬಲ ಸೂಚಿಸಿದ್ದಾರೆ. ಈಗಲಾದರೂ ಬಿಜೆಪಿ ಸರ್ಕಾರ ಎಚ್ಚೆತ್ತುಕೊಂಡು ಉರ್ದು ಮತ್ತು ಬ್ಯಾರಿ ಅಕಾಡೆಮಿಯನ್ನು ಸಂಸ್ಕೃತಿ ಇಲಾಖೆಯಲ್ಲೇ ಉಳಿಸಿಕೊಳ್ಳಲಿ. ಇಲ್ಲವಾದರೆ ಕರ್ನಾಟಕದ ಜನತೆಯ ತೀವ್ರ ಆಕ್ರೋಶವನ್ನು ಎದುರಿಸಬೇಕಾದೀತು. ●

...ಶ್ಚಿಮ ಬಂಗಾಳ ಚುನಾವಣೆ


...2

...ಾದ ನೆಪವನ್ನು ಒದಗಿಸಿಕೊಡುವಲ್ಲಿ ಮಾತ್ರ ...ಸ್ವಿಯಾಯಿತು. ಆದ್ದರಿಂದ ಈಗ ಲಾಲ್‌ಘಡ್ ...ಶದಲ್ಲಿ ಕಾಶ್ಮೀರ, ಈಶಾನ್ಯ ಭಾರತದಲ್ಲಿ ಅಥವಾ ...್‌ಘಡ್‌ದಲ್ಲಿ ನಡೆಸಲಾಗುತ್ತಿರು ವಷ್ಟೇ ದೌರ್ಜನ್ಯ, ...ಚಾರ, ಕೊಲೆ-ಸುಲಿಗೆಗಳನ್ನು ಸಿಪಿಎಂ ಸರ್ಕಾರ ಮತ್ತು ...ಕ್ಷದ "ಹರ್ಮದ್ ಸೇನಾ" ನಡೆಸುತ್ತಿದೆ. ಇದು ...್ ಘಡ್‌ದಲ್ಲಿನ ಸಾಲ್ವಾ ಜುಡುಂನಷ್ಟೇ ಕ್ರೂರಿ ಮತ್ತು ... ಒಂದೇ ವ್ಯತ್ಯಾಸವೆಂದರೆ ಇಲ್ಲಿ ಅವು ಕೆಂಬಾವುಟವನ್ನು ...ುಕೊಂಡಿರುತ್ತವೆ! ಸಿಪಿಎಂ ಪಕ್ಷದ ಈ ಗೂಂಡಾಗಿರಿ, ...ತ್ವ ಭಯೋತ್ಪಾದನೆಗಳು ಬಂಗಾಳದಲ್ಲಿ ಇದಕ್ಕಿಂತ ...ು ಪರ್ಯಾಯವಿಲ್ಲದಿದ್ದರೂ ಪರವಾಗಿಲ್ಲ, ಸಿಪಿಎಂ ... ಸರ್ಕಾರ ಮಾತ್ರ ಬೇಡವೆನ್ನುವ ವಾತಾವರಣವನ್ನು ...ಟ್ಟುಹಾಕಿದೆ.

...ದು ಪಶ್ಚಿಮ ಬಂಗಾಳದ ಜನರು ...ರಿಸುತ್ತಿರುವ ವಿಚಿತ್ರ ಸಂದರ್ಭ. ಒಂದು ...ಜವಾದಿ ಕ್ರಾಂತಿ ಯನ್ನು ಬೂರ್ಜ್ವಾ ...ಟ್ಟಿನಲ್ಲಿ ಮುಂದುವರೆಸ ಲಾಗದು. ಆ ಚೌಕಟ್ಟು ...ಭದಲ್ಲಿ ಸಮಾಜ ವಾದಿ ಕ್ರಾಂತಿಗೆ ...ವಾಗಿದ್ದಾಗ ಅದನ್ನು ಬಳಸಿಕೊಳ್ಳುವುದರಲ್ಲಿ ... ಆದರೆ ಅದೇ ಚೌಕಟ್ಟು ಕ್ರಾಂತಿಯ ...ುವರಿಕೆಗೆ ಅಡ್ಡಿ ಯಾದಾಗ ಕ್ರಾಂತಿಗೇ ...ು ನಿಷ್ಠೆ ಹೊಂದಿರು ವವರು ಆ ಚೌಕಟ್ಟನ್ನು ...ದು ಕ್ರಾಂತಿಯನ್ನು ಮುಂದುವರೆಸಬೇಕು. ...ಲ್ಲದೆ ಇರುವ ಚೌಕಟ್ಟಿನಲ್ಲೇ ನಡೆಸುವ ...ಸಿಯಿಂದ ಚೌಕಟ್ಟೇ ಚಿತ್ರವನ್ನು ...ಬಿಡುವಂತಾಗುತ್ತದೆ. ಪಶ್ಚಿಮ ಬಂಗಾಳದಲ್ಲಿ ...ುತ್ತಿರುವುದೂ ಅದೇ. ಬಂಡವಾಳಶಾಹಿ ...ಟ್ಟಿನಲ್ಲಿ ಸಮಾಜವಾದ ಸಾಧ್ಯ ...ರುವುದರಿಂದ ಮತ್ತು ಆ ಚೌಕಟ್ಟನ್ನು ಮುರಿಯಲು ... ಪಕ್ಷ ಸಿದ್ಧವಿಲ್ಲವಾದ್ದರಿಂದ ಸಮಾಜವಾದಿ ಚಿತ್ರವನ್ನು ...ವಾಳಶಾಹಿ ಚೌಕಟ್ಟೆ ನುಂಗಿಹಾಕಿಬಿಟ್ಟಿದೆ. "ನಾವು ...ಾಳದಲ್ಲಿ ... ಕಟ್ಟುತ್ತಿರುವುದು ...ಜವಾದವನ್ನಲ್ಲ-ಬಂಡವಾಳಶಾಹಿಯನ್ನು, ಇದರ ಬಗ್ಗೆ ...ಮಾನ ಬೇಡ" ಎಂದು ತುಂಬಾ ಹಿಂದೆ ಜ್ಯೋತಿ ...ವರೇ ಹೇಳಿದ್ದರು.

...ಪಿಎಂ ಮತ್ತು ಎಡರಂಗದ ಈ ಘನಘೋರ ದ್ರೋಹ ... ವೈಫಲ್ಯಕ್ಕೆ ಪರ್ಯಾಯವಾಗಿ ಬಂಗಾಳದ ಜನರ ... ಇರುವುದು ಮಮತಾ ಬ್ಯಾನರ್ಜಿಯ ಅತ್ಯಂತ ...ಂಥೀಯವಾದ ತೃಣಮೂಲ್ ಕಾಂಗ್ರೆಸ್ ಎಂಬ ...ಂದು ಬಂಡವಾಳಶಾಹಿ ಪಕ್ಷವೇ! ಈಗ ಕಾಂಗ್ರೆಸ್ ... ದೊಡ್ಡ ಬಂಡವಾಳಿಗರ ದಲ್ಲಾಳಿ ಪಕ್ಷದ ಜೊತೆ ...ಡುತ್ತಿರುವ ತೃಣಮೂಲ್ ಕಾಂಗ್ರೆಸ್ ಕೇವಲ ಕೆಲವು ...ಳ ಕೆಳಗೆ ಫ್ಯಾಸಿಸ್ಟ್ ಬಿಜೆಪಿ ಪಕ್ಷದ ಜೊತೆಗೂ ...ನಡೆಸಿತ್ತು. ಆದರೆ ನಗರದ ಬಡವರ ಪರವಾದ ...ಾಟಗಳಲ್ಲಿ ನಾಟಕೀಯವಾಗಿ ಭಾಗವಹಿಸಿ ಹೆಸರು ... ಮಮತಾ ಬ್ಯಾನರ್ಜಿಯ ಪಕ್ಷ ಗ್ರಾಮಗಳಲ್ಲಿ

ಸಹ ಸಿಪಿಎಂ ಕಾರ್ಯಕರ್ತರ ಸೈನಿಕ ದಾಳಿಯನ್ನು ಎದುರಿಸಲು ಮಾವೋವಾದಿಗಳ ಸಹಾಯವನ್ನೂ ಪಡೆದುಕೊಂಡಿತು. ಬಂಗಾಳದ ದುಡಿಯುವ ಜನತೆಯ ನಡುವೆ ಮಾವೋವಾದಿಗಳ ಹೋರಾಟಕ್ಕೆ ಅಪಾರ ಸಹಾನುಭೂತಿ ಇರುವುದನ್ನು ಅರ್ಥಮಾಡಿಕೊಂಡಿರುವ ಮಮತಾ ರಹಸ್ಯವಾಗಿಯೂ ಮತ್ತು ಬಹಿರಂಗವಾಗಿಯೂ ಮಾವೋವಾದಿಗಳಿಗೆ ಬೆಂಬಲ ನೀಡುತ್ತಿರುವುದು ಗುಟ್ಟೇನೂ ಅಲ್ಲ. ಮಾವೋವಾದಿಗಳ ಬೆಂಬಲದೊಂದಿಗೆ ಸಿಪಿಎಂ ಗೂಂಡಾಗಿರಿಯನ್ನು ಎದುರಿಸಲು ಯಶಸ್ವಿಯಾಗಿರುವ ತೃಣಮೂಲ್ ಕಾಂಗ್ರೆಸ್ ಈ ಬಾರಿ ಕಾಂಗ್ರೆಸ್‌ನೊಂದಿಗೆ ಮೈತ್ರಿಯನ್ನು ಮಾಡಿಕೊಂಡು ಕೇಂದ್ರ ಸರ್ಕಾರದ ಪ್ರತ್ಯಕ್ಷ ಬೆಂಬಲವನ್ನು ಪಡೆದುಕೊಳ್ಳಲಿದೆ. ಇದೆಲ್ಲದರಿಂದಾಗಿ ಈ ಬಾರಿ ಮಮತಾ ಚುನಾವಣೆಯನ್ನು ಗೆಲ್ಲುವ ಸಾಧ್ಯತೆಗಳು ಇವೆ. ಆದರೆ ಅಧಿಕಾರ ಪಡೆದ ನಂತರ ಜನತೆಯ ಬಗ್ಗೆಯಾಗಲೀ, ಮಾವೋವಾದಿಗಳ ಬಗ್ಗೆಯಾಗಲೀ ಮಮತೆ ಮುಂದು



ವರೆಯಲು ಸಾಧ್ಯವೇ ಇಲ್ಲ. ಅಧಿಕಾರ ಪಡೆದ ಒಂದೆರಡು ವರ್ಷಗಳಲ್ಲೇ ಜನಪರತೆಯ ಮುಖವಾಡವನ್ನು ಕಿತ್ತೆಸೆದು ಸ್ವದೇಶಿ ಮತ್ತು ವಿದೇಶಿ ಊಳಿಗಕ್ಕೆ ನಿಲ್ಲುವ ಬಗ್ಗೆ ಮತ್ತು ತನ್ನ ಬೆಂಬಲಕ್ಕೆ ನಿಂತ ಮಾವೋವಾದಿಗಳನ್ನೇ ಕೊಲ್ಲಲು ಮುಂದಾಗುವ ಬಗ್ಗೆ ಯಾವುದೇ ಸಂಶಯವಿರುವ ಅಗತ್ಯವಿಲ್ಲ. ಹೀಗೆ ಪಶ್ಚಿಮ ಬಂಗಾಳದ ಜನರಿಗೆ ನರಭಕ್ಷಕ ಸಿಪಿಎಂ ಹುಲಿಯ ಬದಲು ಪರ್ಯಾಯ ಇರುವುದು ತೃಣಮೂಲ್ ಎಂಬ ಹೆಮ್ಮಾರಿಯದ್ದು!

ಇದರ ನಡುವೆ ಚುನಾವಣೆಯ ಮೇಲೆ ನೇರವಾದ ಪರಿಣಾಮ ಬೀಳಬಹುದಾದ ಮತ್ತೊಂದು ಶಕ್ತಿ ಮಾವೋವಾದಿಗಳದ್ದು. 1972ರಲ್ಲಿ ನಕ್ಸಲ್ ಚಳವಳಿ ದಮನವಾದ ನಂತರ ನಕ್ಸಲ್ ಸಿದ್ಧಾಂತದ ಹೆಸರಿನ ಹಲವಾರು ಸಣ್ಣಪುಟ್ಟ ಗುಂಪುಗಳು ಬಂಗಾಳದಲ್ಲಿ ಕೆಲಸ ಮಾಡುತ್ತಿದ್ದವಾದರೂ ಅವ್ಯಾವುದಕ್ಕೂ, ಸಾಮೂಹಿಕ ಬೆಂಬಲವಾಗಲೀ, ಜನ ಚಳವಳಿಯಾಗಲೀ ಇರಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಯಾವುದಕ್ಕೂ ಸಿಪಿಎಂನ ಗೂಂಡಾಗಿರಿ ಮತ್ತು ಸಶಸ್ತ್ರ ದಮನವನ್ನು ಎದುರಿಸುವ ತಾಕತ್ತು ಇರಲಿಲ್ಲ. ಆದರೆ ಪೀಪಲ್ಸ್ ವಾರ್, ಎಂಸಿಸಿ ಮತ್ತು ಪಾರ್ಟಿ ಯುನಿಟಿ ಎಂಬ ಮೂರು ಮಿಲಿಟೆಂಟ್ ನಕ್ಸಲ್ ಪಕ್ಷಗಳು 2004ರಲ್ಲಿ ಐಕ್ಯಗೊಂಡು ಸಿಪಿಐ (ಮಾವೋವಾದಿ) ಪಕ್ಷವನ್ನು ಕಟ್ಟಿಕೊಂಡ ನಂತರ ಬಂಗಾಳದಲ್ಲಿ ಮಾವೋವಾದಿಗಳ ಹೋರಾಟ ಗಟ್ಟಿಯಾಗಿ ನೆಲೆಯೂರಿತು. ಗ್ರಾಮಮಟ್ಟದಲ್ಲಿ ಮತ್ತು ನಗರಮಟ್ಟದಲ್ಲಿ ಬಹುಪಾಲು ಜನಶತ್ರುಗಳು ಸಿಪಿಎಂ ಪಕ್ಷದಲ್ಲೇ ಆಶ್ರಯ ಪಡೆದಿದ್ದರಿಂದ ಈ ವರ್ಗ ಸಂಘರ್ಷ ಸಿಪಿಎಂ ಮತ್ತು ಮಾವೋವಾದಿ ಪಕ್ಷಗಳ ನಡುವಿನ ಸಂಘರ್ಷವಾಗಿಯೂ ಕಾಣಲು ಪ್ರಾರಂಭಿಸಿದ್ದರಲ್ಲಿ ಆಶ್ಚರ್ಯವೇನಿಲ್ಲ. ಹೀಗಾಗಿ ಬಹಳ ಬೇಗ ಮಾವೋವಾದಿಗಳ ಜನಪ್ರಿಯತೆ ಬೆಳೆಯಿತು. ಆದರೆ ಸಂಘಟನೆಯಲ್ಲ!

ಇದನ್ನೇ ತೃಣಮೂಲ್ ಕಾಂಗ್ರೆಸ್ ಸಹ ತನ್ನ ಅನುಕೂಲಕ್ಕೆ ಬಳಸಿಕೊಂಡಿತು. ಯಾವುದೇ ಚಳವಳಿ ಬೆಳೆಯಬೇಕೆಂದರೆ ಸಿಪಿಎಂ ಪಕ್ಷ ಪ್ರಭುತ್ವ ಬೆಂಬಲಿತ ಸಶಸ್ತ್ರ ಗೂಂಡಾಗಿರಿ ನಿಲ್ಲುವುದು ಅತ್ಯಗತ್ಯವಾದ್ದರಿಂದ ಮಾವೋವಾದಿಗಳು ತೃಣಮೂಲ್‌ನಂಥ ಬಲಪಂಥೀಯ ಪ್ರತಿಗಾಮಿ ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡು ಸಿಪಿಎಂ ಸರ್ಕಾರವನ್ನು ಈ ಚುನಾವಣೆಯಲ್ಲಿ ಬೀಳಿಸುವುದನ್ನು ಆದ್ಯತೆಯನ್ನಾಗಿ ಮಾಡಿಕೊಂಡಿದ್ದಾರೆ. ಆದರೆ ಈ ಬಗೆಯಲ್ಲಿ ಮಾವೋವಾದಿ ಗಳು ನೆಚ್ಚಿಕೊಂಡ ಆಳುವವರ್ಗದ ಪಕ್ಷಗಳೇ ಬಹಳ ಬೇಗನೇ ಮಾವೋವಾದಿಗಳನ್ನು ಎಲ್ಲರಿಗಿಂತ ಹೆಚ್ಚಾಗಿ ದಮನ ಮಾಡಿ ನಾಮಾವಶೇಷ ಮಾಡಿದ್ದಾರೆ. ಇದಕ್ಕೆ 2004ರಲ್ಲಿ ಆಂಧ್ರದಲ್ಲಿ ವೈ.ಎಸ್.ರಾಜಶೇಖರ ರೆಡ್ಡಿ ನಡೆಸಿದ ದಮನಕಾಂಡ ಒಂದು ಉದಾಹರಣೆಯಷ್ಟೆ. ಹೀಗಾಗಿ ಸಿಪಿಎಂ ಸರ್ಕಾರ ಹೋಗಿ ತೃಣಮೂಲ್ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಪ್ರಾರಂಭದ ಎರಡು ವರ್ಷ ಲಾಲ್‌ಘಡ್‌ನಿಂದ ಅರೆಸೇನಾಪಡೆಗಳು ಹಿಂತಿರುಗಬಹುದು. ಮಾವೋವಾದಿಗಳ ಮುಖ ಸಂಘಟನೆಗಳಿಗೆ ಕೆಲವು ಬಹಿರಂಗ ಕಾರ್ಯಕ್ರಮ ಮಾಡಲು ಅವಕಾಶ ಸಿಗಬಹುದು. ಆದರೆ ಗ್ರಾಮ ಮತ್ತು ನಗರಗಳಲ್ಲಿ ವರ್ಗ ಶತ್ರುವಿನ ವಿರುದ್ಧ ನಿಜವಾದ ಸಂಘರ್ಷ ಪ್ರಾರಂಭವಾದ ತಕ್ಷಣ ತೃಣಮೂಲ್‌ನ ನಿಜವಾದ ವರ್ಗಸ್ವರೂಪ ಹೊರಬರುತ್ತದೆ. ದಮನ ಪ್ರಾರಂಭವಾಗುತ್ತದೆ.

ಆದರೆ ಒಂದು ಪ್ರಬಲ ಸಮೂಹ ಸಂಘಟನೆಯ ರಚನೆಯಿದ್ದರೆ ಈ ಅಲ್ಪ ಕದನ ವಿರಾಮದ ಅವಧಿಯನ್ನೂ ಸಹ ಜನತೆಯನ್ನು ಜಾಗೃತಗೊಳಿಸಲು ಮತ್ತು ಜನರನ್ನು ಸ್ವಪ್ರೇರಿತ ಹೋರಾಟಗಳಲ್ಲಿ ತೊಡಗಿಸಿಕೊಳ್ಳಲು ಬಳಸಿಕೊಳ್ಳಬಹುದು. ಜಗತ್ತಿನಾದ್ಯಂತ ಕ್ರಾಂತಿಕಾರಿ ಸಂಘಟನೆಗಳು ಆಳುವ ವರ್ಗದ ನಡುವಿನ ಒಡಕಿನ ಲಾಭವನ್ನು ಹೀಗೆ ಜನಪರವಾಗಿ ಬಳಸಿಕೊಂಡಿವೆ. ಆದರೆ ಭಾರತದ ಮಾವೋವಾದಿಗಳಿಗೆ ಆ ಬಗೆಯ ಸಂಘಟನಾ ರಚನೆಯೂ ಇಲ್ಲ. ಆ ಬಗೆಯಲ್ಲಿ ಜನರನ್ನು ಕಟ್ಟುವ ದೃಷ್ಟಿಯೂ ಇಲ್ಲ. ಹೀಗಾಗಿ ತೃಣಮೂಲ್ ಗೆದ್ದರೆ ಸಿಗುವ ಅವಕಾಶವನ್ನು ಬೃಹತ್ ಸಮಾರಂಭಗಳನ್ನು ಏರ್ಪಡಿಸಿಕೊಳ್ಳಲು ಬಳಸಿಕೊಳ್ಳಬಹುದೇ ವಿನಃ ಆ ಅವಕಾಶವನ್ನು ವರ್ಗಸಂಘರ್ಷಕ್ಕೆ ಪೂರಕವಾಗಿ ಬಳಸಿಕೊಳ್ಳುವ ರಚನೆಯೇ ಇಲ್ಲದಿರುವುದರಿಂದ ಬಹಳ ಬೇಗನೇ ಮಾವೋವಾದಿಗಳ ಗನ್ನು ಮತ್ತು ತೃಣಮೂಲದ ಗನ್ನು ಪೈಪೋಟಿಗೆ ಬೀಳಬಹುದು. ಆಗ ಸಿಪಿಎಂ ಮತ್ತು ತೃಣಮೂಲದ ನಡುವೆ ಈ ವಿಷಯದಲ್ಲಿ ಮೈತ್ರಿಯೂ ಏರ್ಪಡಬಹುದು.

ಅದೇನೇ ಇರಲಿ, ಒಟ್ಟಾರೆಯಾಗಿ ಪಶ್ಚಿಮ ಬಂಗಾಳದ ಎಡ ಕಾಮ್ರೇಡುಗಳು ತಮ್ಮ ಎಡಸಾಹಸವಾದದಿಂದಾಗಿಯೇ ಬಂಗಾಳದ ಚುನಾವಣೆಯ ಲಾಭವನ್ನು ಜನಪರವಾಗಿ ದುಡಿಸಿಕೊಳ್ಳುವ ಪರಿಸ್ಥಿತಿಯಲ್ಲಿ ಇಲ್ಲ. ಈ ಚುನಾವಣೆಯ ಲಾಭವನ್ನು ಮಾತ್ರ ಬಲಪಂಥೀಯ ತೃಣಮೂಲ್ ಪಕ್ಷವೇ ಪಡೆದುಕೊಳ್ಳುತ್ತಿದೆ. ಈಗಾಗಲೇ ಸಿಪಿಎಂ ಬಂಗಾಳದಲ್ಲಿ ಆಳುವ ವರ್ಗದ ಪರವಾಗಿ ರಾಜಕಾರಣ ನಡೆಸುತ್ತಿರುವ ಪಕ್ಷವೇ ಆಗಿಬಿಟ್ಟಿರುವುದರಿಂದ ಸಿಪಿಎಂ ಗೆದ್ದರೂ ತೃಣಮೂಲ್ ಗೆದ್ದರೂ ಜನತೆಯ ಮಟ್ಟಿಗೆ ದೊಡ್ಡ ವ್ಯತ್ಯಾಸವೇನೂ ಇರುವುದಿಲ್ಲ.

ಇನ್ನು ಬಂಗಾಳದ ಹೊರಗಡೆ ಸಿಪಿಎಂ ಪಕ್ಷ ಮಾವೋವಾದಿಗಳ ಹಿಂಸಾಚಾರದ ಬಗ್ಗೆ ಮತ್ತು ತೃಣಮೂಲ್ ಹಾಗೂ ಮಾವೋವಾದಿಗಳ ನಡುವಿನ ಮೈತ್ರಿಯ ಬಗ್ಗೆ ಬೃಹತ್ ಜನಾಂದೋಲನ ಪ್ರಾರಂಭಿಸಿದೆ. ಕರ್ನಾಟಕದಲ್ಲೂ ಆ ಪಕ್ಷ ನಡೆಸುತ್ತಿರುವ ಆಂದೋಲನದಲ್ಲಿ ಬಂಗಾಳದ ರಾಜಕಾರಣದ ಎರಡು ಮುಖಗಳ ಅರಿವಿಲ್ಲದ ಹಲವು ಬುದ್ಧಿಜೀವಿಗಳು ಭಾಗವಹಿಸುತ್ತಿದ್ದಾರೆ.

ಇದೊಂದು ವಿಪರ್ಯಾಸ. ಮಾವೋವಾದಿಗಳ ಹಿಂಸಾಚಾರಕ್ಕೆ ಬಲಿಯಾಗಿ ಹತ್ತಾರು ಸಿಪಿಎಂ ಕಾರ್ಯಕರ್ತರು ಬಲಿಯಾಗಿರುವುದು ನಿಜ. ಅದರಲ್ಲಿ ಕೆಲವು ಸಶಸ್ತ್ರ ಸಿಪಿಎಂ ಕಾರ್ಯಕರ್ತರ ಜೊತೆಗೆ ನಿಶಸ್ತ್ರರಾದ ಹಾಗೂ ಕೆಲವು ಅಮಾಯಕರಾದ ಕಾರ್ಯಕರ್ತರೂ ಇದ್ದಾರೆ. ಸಂಶಯವಿಲ್ಲ. ಈ ಕಾರಣದಿಂದಲೇ ಮಾವೋವಾದಿಗಳನ್ನು ಬಂಗಾಳದ ಹಾಗೂ ದೇಶದ ಹಲವು ಮಾನವ ಹಕ್ಕುಗಳ ಕಾರ್ಯಕರ್ತರು ಖಂಡಿಸಿದ್ದಾರೆ. ವಿರೋಧಿಸಿದ್ದಾರೆ.

ಆದರೆ ಸಿಪಿಎಂ ಪಕ್ಷ ಕಳೆದ ಐದು ವರ್ಷಗಳಲ್ಲಿ ಏನಿಲ್ಲವೆಂದರೂ 1000ಕ್ಕೂ ಹೆಚ್ಚು ರಾಜಕೀಯ ಹತ್ಯೆಗಳನ್ನು ನಡೆಸಿದೆ. ಇದರಲ್ಲಿ ಮಾವೋವಾದಿ ಶಸ್ತ್ರಧಾರಿ ಕಾರ್ಯಕರ್ತರಿದ್ದಾರೆ. ನಿಶಸ್ತ್ರ ಬೆಂಬಲಿಗರಿದ್ದಾರೆ. ಅಮಾಯಕ ಆದಿವಾಸಿಗಳಿದ್ದಾರೆ. ಮಾತ್ರವಲ್ಲ, ಎಡರಂಗದ ಸದಸ್ಯ ಸಂಘಟನೆಗಳ ಕಾರ್ಯಕರ್ತರೂ ಇದ್ದಾರೆ. ಒಟ್ಟಿನಲ್ಲಿ ತನ್ನ ಎಲ್ಲಾ ರಾಜಕೀಯ ವಿರೋಧಿಗಳನ್ನು ಸಿಪಿಎಂ ಪಕ್ಷ ಬಂಗಾಳದಲ್ಲಿ ನಿರ್ದಯವಾಗಿ ಹೊಸಕಿಹಾಕುತ್ತದೆ. ಹೀಗಾಗಿ ಸಿಪಿಎಂ ಪಕ್ಷದ ಮಾವೋವಾದಿ ಹಿಂಸೆಯ ವಿರೋಧೀ ಆಂದೋಲನ ಹಿಂಸೆಯ ಕುರಿತಾದ ಆಷಾಢಭೂತಿತನದ ನೆಲೆಯದ್ದೇ ಆಗಿದೆ ಅಥವಾ ಹಿಂಸೆಯ ಖಂಡನೆ ಮಂಡನೆಗಳಿಂದ ಈ ಸಮಸ್ಯೆ ಬಗೆಹರಿಯುವುದೂ ಇಲ್ಲ. ಜನತೆಯ ಹೆಸರ ಮೇಲೆ ನಡೆಯುವ ಈ ಹಿಂಸಾಚಾರದಲ್ಲಿ ಜನತೆ ಮೂಕಪ್ರೇಕ್ಷಕರು ಅಥವಾ ಮುಗ್ಧ ಬಲಿಪಶುಗಳು.

ಇದು ಯಾವುದೇ ಬಗೆಯ ಜನಪರ ರಾಜಕಾರಣದ ಘೋರ ವೈಫಲ್ಯದ ಪ್ರತೀಕ. ಜನಪರವಾಗಿ ಸಶಸ್ತ್ರ ಹೋರಾಟ ಮಾಡುತ್ತಿರುವವರೂ ಇದನ್ನು ಅರ್ಥಮಾಡಿಕೊಳ್ಳುತ್ತಿಲ್ಲ. ಅಹಿಂಸೆಯನ್ನು ಅಮೂರ್ತ ಮತ್ತು ಪರಮ ಮೌಲ್ಯವನ್ನಾಗಿ ಮಾಡಿಕೊಂಡವರು ಇದನ್ನು ಅರ್ಥಮಾಡಿಕೊಳ್ಳುತ್ತಿಲ್ಲ. ಎಲ್ಲಿಯತನಕ ಜನತೆ ರಾಜಕೀಯ ಪ್ರಜ್ಞೆಯಿಂದ ಸಜ್ಜಿತವಾಗಿ ಸಾಮೂಹಿಕ ಶಸ್ತ್ರ ಸಹಿತ ಅಥವಾ ಶಸ್ತ್ರರಹಿತ ಸಂಗ್ರಾಮಗಳಿಗೆ ಇಳಿಯುವುದಿಲ್ಲವೋ ಅಲ್ಲಿಯತನಕ ಪ್ರಜಾತಂತ್ರ, ನ್ಯಾಯ ಆಯ್ಕೆಯನ್ನು ಒದಗಿಸದಂಥ ಮಾರಣಾಂತಿಕ ಬಿಕ್ಕಟ್ಟನ್ನು ಎದುರಿಸುವುದು ತಪ್ಪುವುದಿಲ್ಲ. ●

ಕೆಎಲ್‌ಇ ಇಂಟರ್‌ನ್ಯಾಷನಲ್ ಸ್ಕೂಲ್

ಕೊಳ್ಳೆಯೇ ಕೋರೆಯ ಧರ್ಮವಯ್ಯಾ....!



ಎಲ್‌ಇ ಸೊಸೈಟಿ ಅರ್ಥಾತ್ ಕರ್ನಾಟಕ ಲಿಂಗಾಯತ ಎಜುಕೇಷನ್ ಸೊಸೈಟಿಯ ಪಟ್ಟಕ್ಕೇರಿದ ಪ್ರಭಾಕರ್ ಕೋರೆ ಅದರ ಸಿಲ್ವರ್ ಜ್ಯೂಬಿಲಿ ಆಚರಿಸಿಕೊಳ್ಳುತ್ತಿದ್ದಾರೆ!

ಮುಖ್ಯಮಂತ್ರಿ ಯಡ್ಡಿಯ ಬುಡಕ್ಕೆ ಈಶ್ವರಪ್ಪ ಬತ್ತಿ ಇಡದೇ ಹೋಗಿದ್ದರೆ ಇದೇ ಮಾರ್ಚ್ 22ಕ್ಕೆ ಬೆಂಗಳೂರಿನ ಚೌಡಯ್ಯ ಸ್ಮಾರಕ ಭವನದಲ್ಲಿ ಜ್ಞಾನ ದಾಸೋಹಿ ಡಾ. ಪ್ರಭಾಕರ್ ಕೋರೆಗೆ 'ನಃ ಭೂತೋ ನಃ ಭವಿಷ್ಯತಿ' ಅಭಿನಂದನಾ ಸಮಾರಂಭವೇ ನಡೆದಿರುತ್ತಿತ್ತು. ಬೆಳಗಾವಿಯಿಂದ ಶುರುವಾಗಿ ಬೆಂಗಳೂರಿನತನಕ ಅಗಣಿತ ಸ್ಕೂಲು, ಕಾಲೇಜು, ನರ್ಸಿಂಗು, ಫಾರ್ಮಸಿ, ಮೆಡಿಕಲ್ಲು, ಇಂಜಿನಿಯರಿಂಗು... ಇತ್ಯಾದಿ ತರಹೇವಾರಿ ಕೋರ್ಸುಗಳ ಡಿಗ್ರಿ ಫ್ಯಾಕ್ಟರಿಯನ್ನೇ ಇಟ್ಟಿರುವ ಕೋರೆ ಕೆಎಲ್‌ಇಯ ಸಿಂಹಾಸನವನ್ನೇರಿ 25 ವರ್ಷಗಳಾಯಿತೆಂದರೆ ಅದೊಂದು ಸಣ್ಣ ಸಾಧನೆಯಾ?



ಕೆಎಲ್‌ಇಯ ಲಾಂಛನ


ಕೇವಲ 25 ಸಂಸ್ಥೆಗಳಷ್ಟಿದ್ದ ಕೆಎಲ್‌ಇಯನ್ನು ಇವತ್ತು 211 ಸಂಸ್ಥೆಗಳಾಗುವತನಕ ಬೆಳೆಸಿ ಪೋಷಿಸಿದ ಪ್ರಭಾಕರ್ ಕೋರೆ ಕಾಲು ಶತಮಾನಗಳ ಕಾಲ ಕೆಎಲ್‌ಇಯನ್ನಾಳಿದ್ದಕ್ಕಾಗಿ ಸಣ್ಣದೊಂದು ಅಭಿನಂದನಾ ಸಮಾರಂಭವಾದರೂ ಬೇಡವೇ?

ಸಿದ್ಧಗಂಗೆಯ ಶಿವಕುಮಾರ ಸ್ವಾಮೀಜಿ, ಸುತ್ತೂರು ಸ್ವಾಮೀಜಿ, ಮುಖ್ಯಮಂತ್ರಿ ಯಡ್ಡಿ, ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್, ಮಂತ್ರಿ ಬಚ್ಚೇಗೌಡ, ಬೊಮ್ಮಾಯಿ ಮುಂತಾದವರನ್ನೆಲ್ಲ ಕಲೆಹಾಕಿ ಕೋರೆಗೆ ಬೆಳ್ಳಿಗದೆ ಕೊಟ್ಟು ಮೆರೆಸಲೆಂದೇ ಮಾರ್ಚ್ 22ರಂದು ಸೋಮಣ್ಣಾ ಹಮ್ಮಿಕೊಂಡಿದ್ದ ಕೋರೆ ಅಭಿನಂದನಾ ಜಾತ್ರೆ ಸದ್ಯ ಯಡ್ಡಿ ಬುಡಕ್ಕೆ ಈಶ್ವರಪ್ಪ ಇಟ್ಟ ಕೊಳ್ಳಿಯಿಂದಾಗಿ ರದ್ದಾಗಿದೆ. ಇನ್ನೊಂದು ವಾರದೊಳಗೆ ಇದಕ್ಕಿಂತ ವಿಜೃಂಭಣೆಯಿಂದ ಕೋರೆಯನ್ನು ಸನ್ಮಾನಿಸಲು ಮಂತ್ರಿ ಸೋಮಣ್ಣನೇ ನಿಂತು ಮಾಡುತ್ತಿರುವ ತಯಾರಿ, ಪಿತೂರಿ, ತಂತ್ರಗಳ ಮುಂದೆ ಟೈಕೂನ್ ಕೋರೆಯ ಮನೆ ನಾಯಿಗಳೇ ನಾಚಬೇಕು!

ಬಿಬಿಎಂಪಿಯ ಕೌನ್ಸಿಲರ್‌ಗಳಾದ ಉಮೇಶ್ ರೆಡ್ಡಿ, ರೌಡಿ ರಾಣಿ ಶಾಂತಕುಮಾರಿ, ವಸೂಲಿ ಗಂಗಬೈರಯ್ಯ, ರೂಪಾದೇವಿ, ಮೋಹನ್‌ಕುಮಾರ್, ಶಕುಂತಲ ದೊಡ್ಡಲಕ್ಕಪ್ಪ ಮಾರುತಿ ಮಂದಿರದ ವಾಗೀಶ, ನಾಯಂಡಹಳ್ಳಿಯ ರಾಜೇಶ್ವರಿ, ಪಟ್ಟೇಗಾರಪಾಳ್ಯದ ಪ್ರಕಾಶ್, ಕೇಡಿ ಕಂಟ್ರ್ಯಾಕ್ಟರ್ ವಿಶ್ವನಾಥ್‌ಗೌಡ, ರೌಡಿ ಕಾರ್ಪೋರೇಟರ್ ರವೀಂದ್ರ, ಮಾಜಿ ಉಪಮೇಯರ್ ಪುಟ್ರಾಜು... ಮುಂತಾದ ಭಟ್ಟಂಗಿಗಳೆಲ್ಲರ ಸಮಿತಿ ಹುಟ್ಟುಹಾಕಿ; ಅದಕ್ಕೆ ತಾನೇ ಅಧ್ಯಕ್ಷನಾಗಿ ಕ್ಯಾಪಿಟೇಶನ್ ಖದೀಮ ಕೋರೆಯನ್ನು ಜ್ಞಾನದಾಸೋಹಿ ಎಂದು ಆರೋಪಿಸಿ ಮೆರೆಸಲು ಹೊರಟ ವಿಜಯನಗರದ ವೀರಪುತ್ರ ಸೋಮಣ್ಣನಿಗೆ ಬಹುಶಃ ರಾಜಾಜಿನಗರದ ಮಕ್ಕಳ ಪೋಷಕರ ಸಂಕಟ ಗೊತ್ತಿರಲಿಕ್ಕಿಲ್ಲ,

ರಾಜಾಜಿನಗರದ ನವರಂಗ್ ಟಾಕೀಸ್ ಹಿಂಭಾಗದಲ್ಲೇ ಇರುವ ಕೆಎಲ್‌ಇ ಎಂಬ ತರಹೇವಾರಿ ಡಿಗ್ರಿ ಕೋರ್ಸುಗಳ ಸಾಮ್ರಾಜ್ಯದ ಎದುರು ಯಾರೇ ಮಕ್ಕಳ ಪೋಷಕರನ್ನು ಕೇಳಿದರೂ ಪ್ರತಿನಿತ್ಯ ಕೋರೆಗೆ ಶಾಪ ಹಾಕುತ್ತಿರುತ್ತಾರೆ. ಬೆಳಗಾವಿಯ ಮಟ್ಟಿಗೆ ಕೆಎಲ್‌ಇ ಹೇಗೋ ಹಾಗೇ ಬೆಂಗಳೂರಿನ ರಾಜಾಜಿನಗರದ ಮಟ್ಟಿಗೆ ಕೆಎಲ್‌ಇ ಹಾಸುಹೊಕ್ಕಾಗಿದೆ. ಇವತ್ತು ರಾಜಾಜಿನಗರದ ಶಾಸಕರಾಗಿರುವ ನೆ.ಲ.ನರೇಂದ್ರಬಾಬು, ಬಿಬಿಎಂಪಿಯ ಕೌನ್ಸಿಲರ್ ಕೇಶವಮೂರ್ತಿ, ಆರ್.ವಿ.ಹರೀಶ್, ಚಿತ್ರನಟಿ ಭವ್ಯ, ಪತ್ರಕರ್ತೆ ತುಂಗರೇಣುಕಾ, ರೌಡಿಗಳಾದ ಬೆಕ್ಕಿನ ಕಣ್ ರಾಜೇಂದ್ರ, ಟೋನಿ ಮುಂತಾದವರೆಲ್ಲ ಇದೇ ಕೆಎಲ್‌ಇಯಿಂದ ಬೆಳೆದುಬಂದವರು. ಸರ್ಕಾರ ಆ ಕಾಲದಲ್ಲೇ ಸರಿಸುಮಾರು ಮೂರೆಕರೆಯಷ್ಟು ಪಾಲಿಕೆ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕೆಂದು ಕೆಎಲ್‌ಇ ಸಂಸ್ಥೆಗೆ ಬಿಟ್ಟುಕೊಟ್ಟಿದೆ. ಇಲ್ಲಿರುವ ಎಸ್.ನಿಜಲಿಂಗಪ್ಪ ಕಾಲೇಜೆಂದರೆ ಇಡೀ ಬೆಂಗಳೂರಿಗೇ ಹೆಸರುವಾಸಿಯಂತಿತ್ತು. ಇಲ್ಲೇ ಕಾನೂನು ಕಾಲೇಜಿದೆ. ಫಾರ್ಮಸಿ, ಕಂಪ್ಯೂಟರ್ ಸೈನ್ಸ್, ಹೋಟೆಲ್ ಮ್ಯಾನೇಜ್‌ಮೆಂಟ್, ಟೂರಿಸಂ ಮ್ಯಾನೇಜ್‌ಮೆಂಟ್ ಇತ್ಯಾದಿ ರೊಕ್ಕ ಬಾಚುವ ಅಸಂಖ್ಯಾತ ಕೋರ್ಸುಗಳೂ, ಕಾಲೇಜುಗಳೂ ರಾಜಾಜಿನಗರದ ಕೆಎಲ್‌ಇ ಅಡ್ಡೆಯಲ್ಲಿ ತುಳುಕಾಡುತ್ತಿವೆ.

ತೀರ ಮಕ್ಕಳನ್ನು ಸುಲಿದು ಕಾಲೇಜು ನಡೆಸಬೇಕಾದ, ಶಿಕ್ಷಕರಿಗೆ ಸಂಬಳ ಕೊಡಬೇಕಾದ ಅಥವಾ ತನ್ನ ಐಷಾರಾಮಿ ರಾಜಕೀಯ ಬದುಕನ್ನು ಸಂಭಾಳಿಸಬೇಕಾದ ದಾರಿದ್ರ್ಯವಂತೂ ಖಂಡಿತ ಕೋರೆಗಿಲ್ಲ, ಕೋರೆ ಕರ್ನಾಟಕದ ಕ್ಯಾಪಿಟೇಶನ್ ಚಕ್ರಾಧಿಪತಿ. ಬೆಳಗಾವಿಯ ಕೆಎಲ್‌ಇ ಆಸ್ಪತ್ರೆ ಮತ್ತು ಮೆಡಿಕಲ್ ರಿಸರ್ಚ್ ಸೆಂಟರ್ ಇನ್‌ಸ್ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸಸ್, ಮೆಡಿಕಲ್ ಕಾಲೇಜು ಮತ್ತು ಫಾರ್ಮಸಿ ಕಾಲೇಜು, ಹುಬ್ಬಳ್ಳಿಯ ಫಾರ್ಮಸಿ ಕಾಲೇಜು, ಬೊಮ್ಮರೆಡ್ಡಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಮತ್ತು ಬೆಂಗಳೂರಿನ ಅಗಣಿತ ಕಾಲೇಜು



ಕೆಎಲ್‌ಇ ಕ್ಯಾಂಪಸ್

ಸಮೂಹಗಳಿಗೆ ಹೋಲಿಸಿದರೆ ಅವುಗಳ ಉತ್ಪತ್ತಿಯ ಮುಂದೆ ತೀರ ಎಲ್‌ಕೆಜಿ, ಯುಕೆಜಿಯ ಮಕ್ಕಳನ್ನು ಸುಲಿದು ತಿನ್ನುವ ದಾರಿದ್ರ್ಯವಂತೂ ಖಂಡಿತ ಕೋರೆಗಾಗಲಿ ಅಥವಾ ಕೆಎಲ್‌ಇ ಸೊಸೈಟಿಗಾಗಲಿ ಇಲ್ಲ,

ರಾಜಕೀಯವಾಗಿ ಕೋರೆ ಎಂಥ ಮಹತ್ವಾಕಾಂಕ್ಷಿಯೆಂದರೆ ಮೊನ್ನೆ ಇನ್ನೇನು ಯಡ್ಡಿಯನ್ನು ರಾಷ್ಟ್ರಾಧ್ಯಕ್ಷ ಗಡ್ಕರಿ ಮುಖ್ಯಮಂತ್ರಿಗಿರಿಯಿಂದ ಕಿತ್ತೊಗೆಯುತ್ತಾರೆ ಎಂಬಂಥ ಪರಿಸ್ಥಿತಿಯಲ್ಲಿ ಗಡ್ಕರಿ, ಅಧ್ವಾನಿ, ಜೇಟ್ಲಿ, ಸುಷ್ಮಾ ಸೇರಿದಂತೆ ಬಿಜೆಪಿಯ ರಾಷ್ಟ್ರನಾಯಕರಿಗೆಲ್ಲ ಕೋಟಿ ಮೊತ್ತದ ಕಜ್ಜಾಯ ತಿನ್ನಿಸಿದ್ದೇ ಕೋರೆ!

ಅದು ಮೂವತ್ತು ಕೋಟಿಯಂತೆ. ಮುಖ್ಯಮಂತ್ರಿ ಯಡ್ಡಿಯ ಕುರ್ಚಿ ಉಳಿಸಲೆಂದೇ ಈ ರೀತಿ ಮೂವತ್ತು ಕೋಟಿ ರೂಪಾಯಿ ತಂದು ಕಂಡಕಂಡವರ ಬಾಯಿಗಿಕ್ಕಿ ತಾನೂ ಎಮ್ಮೆಲ್ಸಿಯಾಗಿ ವಿಶ್ವಕನ್ನಡ ಸಮ್ಮೇಳನದ ಹೆಸರಲ್ಲಿ ಇನ್ನೊಂದಿಷ್ಟು ಕೋಟಿ ಬಾಚಿ ಪುನೀತರಾದ ಕೋರೆಗೆ ಮಕ್ಕಳ ಪೋಷಕರನ್ನು ಸುಲಿದು ಹೊಟ್ಟೆಹೊರೆಯಬೇಕಾದ ದುರ್ಗತಿ ಇಲ್ಲವೇ ಇಲ್ಲ,

ಆದರೆ ದುರಾಶೆಯಿದೆಯಲ್ಲ!

ದುಡ್ಡು ಯಾವ ಮೂಲದಿಂದ ಬಂದರೇನು? ರೊಕ್ಕ ರೊಕ್ಕವೇ. ಇಂಥ ದುರಾಶೆ ಇಟ್ಟುಕೊಂಡೇ ತನ್ನ ಕೆಎಲ್‌ಇ ಸಾಮ್ರಾಜ್ಯವನ್ನು ವಿಸ್ತರಿಸಿದ ಕೋರೆ ರಾಜಾಜಿನಗರ ಕ್ಯಾಂಪಸ್ಸಿನಲ್ಲೊಂದು ಕಾನ್ವೆಂಟ್ ನಡೆಸುತ್ತಾರೆ. ಅದರ ಹೆಸರು ಕೆಎಲ್‌ಇ ಇಂಟರ್‌ನ್ಯಾಷನಲ್ ಸ್ಕೂಲ್.

ರಾಜಾಜಿನಗರದ ನವರಂಗ್ ಹಿಂಭಾಗದ ಕೆಎಲ್‌ಇ ಕ್ಯಾಂಪಸ್ಸಿನಲ್ಲಿರುವ ನಿಜಲಿಂಗಪ್ಪ ಕಾಲೇಜಿಗೆ ಹೊಂದಿಕೊಂಡಂತೆಯೇ ಇದ್ದ ಆಟದ ಮೈದಾನವನ್ನು ನುಂಗಿ ಅಲ್ಲಿ ತಲೆ ಎತ್ತಿದ್ದೇ ಈ ಕೆಎಲ್‌ಇ ಇಂಟರ್‌ನ್ಯಾಷನಲ್ ಸ್ಕೂಲು. ಹೆಸರೇ ಹೇಳುವಂತೆ ಇದು ಕೇಂದ್ರದ CBSE ಪಠ್ಯಕ್ರಮದ ಕಾನ್ವೆಂಟು. ಸುತ್ತಮುತ್ತಲ ಪ್ರಕಾಶ್‌ನಗರ, ಶ್ರೀರಾಂಪುರ, ರಾಜಾಜಿನಗರ, ಬಸವೇಶ್ವರನಗರ, ಕೇತಮಾರನಹಳ್ಳಿ, ಗಾಯಿತ್ರಿನಗರ, ಶಿವನಹಳ್ಳಿ ಮುಂತಾದ ಏರಿಯಾಗಳಲ್ಲಿ ತೀರ ಶ್ರೀಮಂತರಲ್ಲದ, ಬಡವರೂ ಅಲ್ಲದ ಪೋಷಕರಿಲ್ಲಿ ತಮ್ಮ ಮಕ್ಕಳನ್ನು ತಂದು ಸೇರಿಸುತ್ತಾರೆ. ಇಲ್ಲಿಗೆ 8 ವರ್ಷದ ಹಿಂದೆ ಶುರುವಾದ ಕೆಎಲ್‌ಇ ಇಂಟರ್‌ನ್ಯಾಷನಲ್ ಸ್ಕೂಲ್‌ಗೆ ಈ ಹಿಂದೆ ರತ್ನಾ ದೇಶಪಾಂಡೆ ಎಂಬ ಸಭ್ಯ ಹೆಣ್ಣುಮಗಳು ಪ್ರಿನ್ಸಿಪಾಲ್ ಆಗಿದ್ದಳು. ಆನಂತರ ಉಷಾ ಪಾಟೀಲ್ ಆ ಜಾಗಕ್ಕೆ ಬಂದಳು. ಇಬ್ಬರೂ ಸಭ್ಯ ಹೆಂಗಸರೇ. ಇವರಿಬ್ಬರೂ ಕನ್ನಡಿಗರು, ಅದರಲ್ಲಿ ಲಿಂಗಾಯಿತರಾದ್ದರಿಂದ ಕೆಎಲ್‌ಇ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಅಷ್ಟಿಷ್ಟು ಕನ್ನಡದ ವಾತಾವರಣ, ಮಣ್ಣಿನ ವಾಸನೆ, ಮನುಷ್ಯತ್ವ, ಅದೊಂಥರದ ಆತ್ಮೀಯತೆಯಿತ್ತು,

ಕೆಎಲ್‌ಇ ಸೊಸೈಟಿಯ ಲಾಂಛನದಲ್ಲೇ ನಂದಿ ಶಿವಲಿಂಗದ ಜೊತೆ ಸತ್ಯ, ಪ್ರೇಮ, ಸೇವೆ, ಸ್ವಾರ್ಥತ್ಯಾಗ ಎಂಬ ನಾಲ್ಕು ಧ್ಯೇಯವಾಕ್ಯವಿದೆ. ಕೆಎಲ್‌ಇ ಎಂದರೆ ಕರ್ನಾಟಕ ಲಿಂಗಾಯತ ಎಜುಕೇಷನ್ ಸೊಸೈಟಿ. ಅದೇ ಲಾಂಛನವನ್ನು ಇವತ್ತಿಗೂ ಬಳಸಲಾಗುತ್ತದೆ. ಬಸವಣ್ಣನ ತತ್ವ-ಸಿದ್ಧಾಂತಗಳಾಗಲಿ, ಲಾಂಛನದ ಸತ್ಯ, ಪ್ರೇಮ, ಸೇವೆ ಅಥವಾ ಲಿಂಗಾಯತ ಧರ್ಮವೇ ಪ್ರತಿಪಾದಿಸುವ ಮನುಷ್ಯತ್ವವಾಗಲಿ ಕೆಎಲ್‌ಇಗೆ ಮುಖ್ಯವಾಗಿದ್ದರೆ ಕೆಎಲ್‌ಇ ಕಾನ್ವೆಂಟು ಇವತ್ತಿನ ಹಾಗೆ ಕುಲಗೆಡುತ್ತಿರಲಿಲ್ಲ,

ಅದಕ್ಕೆ ಕಾರಣಳಾದವಳು ಗೀತಿಕಾ ಕರೋಲಾ ಎಂಬ ಪಂಜಾಬಿ ಹೆಂಗುಸು. ಹಿಂದಿದ್ದ ಉಷಾ ಪಾಟೀಲರನ್ನು ಕಿತ್ತೊಗೆದು ಆ ಜಾಗಕ್ಕೆ ಈಕೆಯನ್ನು ತಂದಿಟ್ಟವನು ಸದ್ಯ ಕೆಎಲ್‌ಇಗೆ ಸೆಕ್ರೆಟರಿಯಾಗಿರುವ ಬಾಪೂ ದೇಸಾಯಿ. ಹುಟ್ಟಾ ಘಟಿಂಗನಾದ ಬಾಪೂ ದೇಸಾಯಿ ಹೆಸರಿಗಷ್ಟೇ ಗಾಂಧೀಜಿಯ ಹೆಸರಿಟ್ಟುಕೊಂಡಿದ್ದಾನೆ. ಪ್ರವೃತ್ತಿಯಲ್ಲಿ ಗೋಡ್ಸೆ. ಹಸೀ ದುಡ್ಡುಬಾಕ. ಉಷಾ ಪಾಟೀಲಳಂತೆ ಶರಣೆಯನ್ನಿಟ್ಟರೆ ರೊಕ್ಕ ಬಾಚುವುದು ಕಷ್ಟ, ಪೋಷಕರನ್ನು ಮುಂಡಾಯಿಸುವುದೂ ಕಷ್ಟ ಎನ್ನಿಸಿ ಇಲ್ಲಿಗೆ ವರ್ಷದ ಹಿಂದಷ್ಟೇ ಗೀತಿಕಾ ಕರೋಲಾ ಎಂಬ ಪಂಜಾಬಿ ಮಹಿಳೆಯನ್ನು ಪ್ರಿನ್ಸಿಪಾಲ್‌ಪಟ್ಟಕ್ಕೆ ತಂದ.

ಪ್ರಿನ್ಸಿಪಾಲ್ ಗಾದಿಯೇರಿದ್ದೇ ತಡ, ಗೀತಿಕಾ ಪಕ್ಕಾ ಮಾರ್ವಾಡಿಯಾಗಿಬಿಟ್ಟಳು. ರೊಕ್ಕ ಬಾಚಬೇಕೆಂದರೆ ವಾತಾವರಣ ಕೂಡ ಇಂಟರ್‌ನ್ಯಾಷನಲ್ಲಾಗಿರಬೇಕೆಂದು ಮಕ್ಕಳ್ಯಾರೂ ಕನ್ನಡ ಮಾತಾಡಕೂಡದೆಂದು ಗೀತಿಕಾ ಆದೇಶ ಹೊರಡಿಸಿದಳು. ಯಾರೇ ಮಕ್ಕಳು ಶಾಲಾ ಆವರಣದಲ್ಲಿ ಕನ್ನಡ ಮಾತಾಡಿದರೆಂದರೆ ಅದಕ್ಕೆ ಇಂತಿಷ್ಟು ದಂಡ ವಿಧಿಸುತ್ತೇನೆಂದು ಸರ್ಕ್ಯುಲರ್ ಬೇರೆ ಹೊರಡಿಸಿದಳು. ಇದು ಸೆಂಟ್ರಲ್ ಸಿಲಬಸ್ ಆದ್ದರಿಂದ ಮಕ್ಕಳೆಲ್ಲ ಇಂಗ್ಲಿಷ್‌ನಲ್ಲೇ ಮಾತನಾಡಬೇಕು. ಹಾಗೊಮ್ಮೆ ಇಂಗ್ಲಿಷ್ ಕಷ್ಟವಾಯಿತೆಂದರೆ ಹಿಂದಿಯಲ್ಲಿ ಮಾತಾಡಬಹುದೆಂಬುದು ಗೀತಿಕಾಳ ಮೊದಲ ಆದೇಶ.

ಗೀತಿಕಾ ಬಂದ ಒಂದೇ ತಿಂಗಳಿಗೆ ಕೆಎಲ್‌ಇ ಕಾನ್ವೆಂಟ್‌ನ ಆವರಣದಿಂದ ಕನ್ನಡ ನಾಪತ್ತೆಯಾಗಿತ್ತು, ಈ ಕೆಎಲ್‌ಇ ಕಾನ್ವೆಂಟ್‌ಗೆಂದು ಮಕ್ಕಳನ್ನು ಸೇರಿಸುವುದರ ಹಿಂದೆ ಪೋಷಕರಿಗಿರುವ ಮತ್ತೊಂದು ಲಾಭವೆಂದರೆ ಒಮ್ಮೆ ಸೇರಿಸಿಬಿಟ್ಟರೆ ಮಧ್ಯೆ ಹೈಸ್ಕೂಲು, ಪಿಯುಸಿ, ಡಿಗ್ರಿಗೆಂದು, ನಂತರ ವಿವಿಧ ಕೋರ್ಸುಗಳಿಗೆಂದು ಬೇರೆ ಬೇರೆ ಕಾಲೇಜುಗಳನ್ನು ಹುಡುಕಿಕೊಂಡು ಹೋಗುವಂತಿಲ್ಲ, ಇಲ್ಲೇ ಸಕಲ ಕೋರ್ಸುಗಳಿವೆಯಾದ್ದರಿಂದ ಒಮ್ಮೆ ಸೇರಿಸಿಬಿಟ್ಟರೆ ಮಗು ಬೆಳೆದು ದೊಡ್ಡವನಾಗುವ ಹೊತ್ತಿಗೆ ಒಂದಲ್ಲ ಒಂದು ಕೋರ್ಸು ಇಲ್ಲೇ ದಕ್ಕಿಬಿಡುತ್ತದೆ.

ಈ ಹಿಂದೆ ಬೆಂಗಳೂರಿನ ಕೆಎಲ್‌ಇ ಎಂದರೆ ರೌಡಿಗಳು, ಪೋಕರಿಗಳ ಕಾಲೇಜು ಎಂಬಂತಿದ್ದದ್ದು ಈಗ ಬದಲಾಗಿದೆ. ಕಟ್ಟಡ ಮಜಭೂತಾಗಿದೆಯೆಂದೋ, ಎದುರೇ ಪಾಲಿಕೆ ಆಟದ ಮೈದಾನವಿರುವ ಕಾರಣಕ್ಕೋ, ಕೆಎಲ್‌ಇ ಎಂಬ ಹೆಸರಿನ ಖ್ಯಾತಿಗೋ ಮಕ್ಕಳನ್ನು ಸೇರಿಸುವ ಪೋಷಕರನ್ನು ಬಾಪೂ ದೇಸಾಯಿ, ಅಕೌಂಟ್ ಸೂಪರಿಂಟೆಂಡೆಂಟ್ ಮೀನಾಕ್ಷಿ ಸಂಗೊಳ್ಳಿ ಮತ್ತು ಪ್ರಿನ್ಸಿಪಾಲ್ ಗೀತಿಕಾ ಕರೋಲಾ ಸೇರಿಕೊಂಡು ಇನ್ನಿಲ್ಲದಂತೆ ಬೋಳಿಸುತ್ತಾರೆ.

ಎಲ್‌ಕೆಜಿ ಅಥವಾ ಯುಕೆಜಿಗೆ ಸೇರಿಸಬೇಕೆಂದರೆ ಕನಿಷ್ಠ ಲಕ್ಷ ರೂಪಾಯಿ ಕಕ್ಕಲೇಬೇಕು. ಈ ಲಕ್ಷ ಕೂಡ ರೆಕಮಂಡೇಶನ್ ಇರುವವರಿಗಷ್ಟೇ. ಪ್ರಭಾವ, ಶಿಫಾರಸ್ಸು ಇಲ್ಲದವರಿಗೆ ಕನಿಷ್ಠ ಒಂದೂವರೆ ಲಕ್ಷದಿಂದ ಹಿಡಿದು 2 ಲಕ್ಷದ ತನಕ ಕಕ್ಕಿಸುತ್ತಾರೆ. ಅಂಥ ವಿದ್ಯಾವರ್ಧಕ ಸಂಸ್ಥೆಯಲ್ಲೇ ತಿಂಗಳಿಗೆ 40ರಿಂದ 60 ರೂ. ಫೀಜಿದ್ದರೆ ಕೆಎಲ್‌ಇಯಲ್ಲಿ ಪ್ರೀ-ನರ್ಸರಿಗೆ ಮಂತ್ಲಿ 2 ಸಾವಿರ ರೂಪಾಯಿ ಬಿಚ್ಚಲೇಬೇಕು. ವರ್ಷಕ್ಕೆ ಇದೇ 24 ಸಾವಿರವಾಯಿತು. ಇನ್ನು ಪ್ರಾಥಮಿಕ ಶಾಲೆ ಅಥವಾ ಹೈಸ್ಕೂಲಿನವರು ಶುರುವಿನಲ್ಲೇ ಕೊಟ್ಟ ಅಡ್ಮಿಷನ್ ಫೀಜು, ಸ್ಪೋರ್ಟ್ಸ್ ಫೀಜು, ಲೈಬ್ರರಿ ಫೀಜು, ಲ್ಯಾಬೋರೇಟರಿ ಫೀಜು ಮಾತ್ರವಲ್ಲದೇ ತಿಂಗಳಿಗೆ ಕನಿಷ್ಠ 2800 ರೂಪಾಯಿಗಳ ಮಂತ್ಲಿ ಕಕ್ಕಬೇಕು!

ಬಹುಶಃ ಬೆಂಗಳೂರಿನ ಬೇರೆ ಯಾವ ಶಾಲೆಯಲ್ಲೂ ಈ ಪಾಟಿ ಮಂತ್ಲಿ ಫೀಜು ಇರಲಿಕ್ಕಿಲ್ಲ!

ಗೀತಿಕಾ ಕರೋಲಾ ಎಂಬ ಪಂಜಾಬಿ ಬೆಡಗಿ ಪ್ರಿನ್ಸಿಪಾಲ್ ಆಗಿ ಬಂದದ್ದೇ ತಡ, ಕೆಎಲ್‌ಇ ಕಾನ್ವೆಂಟ್‌ನ ಮಕ್ಕಳ ಪೋಷಕರ ಬ್ಲಡ್‌ಪ್ರೆಷರ್ ಯಾವ ವೇಗಕ್ಕೆ ಏರುತ್ತಿದೆಯೆಂದರೆ-ಆತನಕ ಇದ್ದ ಯೂನಿಫಾರಂ ಅನ್ನು ಕಸದ ತೊಟ್ಟಿಗೆಸೆದು ಈಗ ಹೊಸ ಯೂನಿಫಾರಂ ಖರೀದಿಸಬೇಕು. ಬೆಂಗಳೂರಿನ ಎಲ್ಲಾ ಕಾನ್ವೆಂಟ್‌ಗಳು ಲಾಗಾಯ್ತಿನಿಂದ ಒಂದೇ ಸಮವಸ್ತ್ರಕ್ಕೆ ಅಂಟಿಕೊಂಡಿದ್ದರೆ ಕೆಎಲ್‌ಇಯಲ್ಲಿ ಕೇವಲ ಮೂರು ವರ್ಷದ ಅವಧಿಯಲ್ಲಿ 3 ಬಾರಿ ಸಮವಸ್ತ್ರಗಳನ್ನು ಬದಲಾಯಿಸಲಾಗಿದೆ.

ಈ ಹಿಂದೆ ಯಾರೋ ಲೋಟಸ್ ಕಂಪೆನಿಯವನು ಕಮಿಷನ್ ಕೊಟ್ಟಿದ್ದ. ಈಗ ಮೆಜೆಸ್ಟಿಕ್ ಮತ್ತು ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಬಟ್ಟೆ ಅಂಗಡಿಯಿಟ್ಟಿರುವ ಪದ್ಮಶ್ರೀ ಟೆಕ್ಸ್‌ಟೈಲ್ಸ್‌ನ ಕೋಮಟಿ ಶೆಟ್ಟಿಯಿಂದಲೇ ಯೂನಿಫಾರಂ ಖರೀದಿಸುವಂತೆ ಪ್ರಿನ್ಸಿಪಾಲ್ ಗೀತಿಕಾ ಆದೇಶಿಸಿದ್ದಾಳೆ. ಪದ್ಮಶ್ರೀ ಶೆಟ್ಟಿ ಅದೆಷ್ಟು ರೋಲ್‌ಕಾಲ್ ಕೊಟ್ಟನೋ?

ಶನಿವಾರದ ದಿಲ್ಲಿಗೆಂದು ಒಂದು ಜೊತೆ, ವಾರದ ದಿನಗಳಲ್ಲಿ ಮತ್ತೆರಡು ಜೊತೆ ಎಂದು ಒಟ್ಟು ಮೂರು ಜೊತೆ ಯೂನಿಫಾರಂ ಎಂದರೆ ಅದೇ ನಾಲ್ಕು ಸಾವಿರ ರೂಪಾಯಿಗಳಾಗುತ್ತದೆ. ವರ್ಷಂಪ್ರತಿ ಇಷ್ಟೊಂದು ಖರ್ಚು ಮಾಡಿ ಸಮವಸ್ತ್ರ ಖರೀದಿಸಬೇಕೆಂದರೆ ರಾಜಾಜಿನಗರದ ಪೋಷಕರ ಪಾಡು ಏನಾಗಬೇಕು?

ಶೂ ಪಾಲಿಶ್ ಆಗಿದೆಯಾ? ಮಕ್ಕಳು ಉಗುರು ಬಿಟ್ಟಿದ್ದಾರಾ? ತಲೆಕೂದಲು ಕಟ್ ಮಾಡಿದ್ದಾರಾ? ಯಾವುದನ್ನೂ ಗೀತಿಕಾ ಕೇಳುವುದಿಲ್ಲ, ಆಕೆಗೆ ತಾನು ಹೇಳಿದ ಅಂಗಡಿಯಿಂದಲೇ ಮಕ್ಕಳು ಷೂ ಖರೀದಿಸಬೇಕು. ಯಾವ ಅಂಗಡಿಯಿಂದ ಯೂನಿಫಾರಂ ಖರೀದಿಸಬೇಕೆನ್ನುತ್ತಾರೋ ಅದರ ಹೊರತಾಗಿ ಬೇರೆ ಎಲ್ಲಿಂದಲೂ ಬಟ್ಟೆ ಖರೀದಿಸುವಂತಿಲ್ಲ. ತಿಂಗಳಿಗೆ 2800 ಮತ್ತು ಶುರುವಿನಲ್ಲಿ ಕಟ್ಟಿದ ಸಾವಿರಾರು ರೂಪಾಯಿಗಳ ಅಡ್ಮಿಷನ್ ಫೀಜು ಸಾಲದೆಂಬಂತೆ ಪ್ರತಿವರ್ಷ ಕ್ರೀಡೆಗೆಂದೇ ಮತ್ತೆ 500 ರೂಪಾಯಿ ಕಕ್ಕಬೇಕು. ಪ್ರತಿ ತಿಂಗಳೂ ಮಕ್ಕಳನ್ನು ಶಾಲೆಯ ಬಸ್ಸಿನಲ್ಲೇ ಕರೆದೊಯ್ದು ವಿಧಾನಸೌಧ, ಲಾಲ್‌ಬಾಗ್ ಸುತ್ತಿಸಿಕೊಂಡು ಬಂದು ಅದಕ್ಕೆಂದೇ ಮತ್ತೆ 100 ರೂಪಾಯಿ ಕಕ್ಕಿಸುತ್ತಾರೆ.


ಗೀತಿಕಾ ಕರೋಲಾ

ಬೆಂಗಳೂರಿನ ಯಾವ ಮಕ್ಕಳಿಗೆ ತಾನೇ ವಿಧಾನಸೌಧ, ಲಾಲ್‌ಬಾಗ್ ಗೊತ್ತಿಲ್ಲ? ಶಾಲೆಯ ಬಸ್ಸಿನಲ್ಲೇ ಕರೆದೊಯ್ದು ಇದಕ್ಕೆಂದು ಪ್ರತಿತಿಂಗಳೂ ನೂರು ರೂಪಾಯಿ ವಸೂಲು ಮಾಡುವ ಕೆಎಲ್ಇ ಖದೀಮರಿಗೆ ಇನ್ನೂ ನಾಚಿಕೆಯಾಗುತ್ತಿಲ್ಲ. ಇದಲ್ಲದೇ ಪ್ರತಿ ವರ್ಷ ನಡೆಯುವ ಸ್ಕೂಲ್‌ಡೇ ಹೆಸರಲ್ಲಿ ಇನ್ನೊಂದು ರೌಂಡ್ ತಲೆ ಬೋಳಿಸಿಕೊಳ್ಳಲು ಪೋಷಕರು ಅಣಿಯಾಗಬೇಕು. ಬೇರೆಲ್ಲ ಶಾಲೆಗಳಲ್ಲಿ ಶಿಕ್ಷಕರೇ ನಾಟಕ ಹೇಳಿಕೊಡುತ್ತಾರೆ. ಡ್ಯಾನ್ಸನ್ನೂ ಕಲಿಸುತ್ತಾರೆ. ಗೀತಿಕಾ ಪ್ರಿನ್ಸಿಪಾಲ್ ಆಗಿ ಬಂದದ್ದೇ ತಡ, ಯಾರೇ ಮಕ್ಕಳು ನಾಟಕದಲ್ಲಿ ನಟಿಸಬೇಕೆಂದರೆ ಅದಕ್ಕೆ ಮತ್ತೆ 1000 ರೂಪಾಯಿ ಬಿಚ್ಚಬೇಕು. ಏಕೆಂದರೆ ಡ್ರಾಮಾ ಹೇಳಿಕೊಡುವವರು ಸೆಲೆಬ್ರಿಟಿಗಳಂತೆ!

ಹಾಗೇ ಡ್ಯಾನ್ಸನ್ನೂ ಸೆಲೆಬ್ರಿಟಿಗಳೇ ಬಂದು ಹೇಳಿಕೊಡುವುದರಿಂದ ಡ್ಯಾನ್ಸಿಗೆಂದು ಪ್ರತಿ ಮಗು ಮತ್ತೆ 500 ರೂ. ಕೊಡಬೇಕು. ಮಗು ಕರಾಟೆ ಕಲಿಯಲು ತಿಂಗಳಿಗೆ 200 ರೂಪಾಯಿ, ಹೊರಗೆ ಅಂಗಡಿಯಲ್ಲಿ 30 ರೂಪಾಯಿಗೆ ಸಿಗುವ ಪುಸ್ತಕಕ್ಕೆ ಇಲ್ಲಿ 100 ರೂಪಾಯಿ. ನಡುನಡುವೆ ಸಮಾಜ ಸೇವೆಗೆ, ಇನ್ನಾರದೋ ಸಹಾಯಕ್ಕೋ ಎಂದು ಮತ್ತೆ ಎಕ್ಸ್‌ಟ್ರಾ ಫೀಜು, ಪಾಲಿಕೆಗೆ ಕಮೀಷನರ್ ಆಗಿದ್ದ ಭರತ್‌ಲಾಲ್ ಮೀನಾರನ್ನು ಕರೆಸಿ ಅವರ ಹಿಂದಿ ಭಾಷಣ ಕೇಳೋದಕ್ಕೆ ಮತ್ತೆ 100 ರೂಪಾಯಿ, ಕಾಲೇಜಿನದೇ ಆಡಿಟೋರಿಯಮ್ಮಿದ್ದೂ, ಮೈದಾನದಲ್ಲೇ ಮತ್ತೊಂದು ವೇದಿಕೆಯಿದ್ದೂ ಸ್ಕೂಲ್ ಡೇ ಪ್ರಯುಕ್ತ ಸ್ಟೇಜ್ ಡೆಕೋರೇಷನ್ನಿಗೆಂದು ಮತ್ತೆ ತಲಾ 100 ರೂಪಾಯಿ ಕಿತ್ತಿದ್ದಾಳೆ ಗೀತಿಕಾ.

ಈ ರೀತಿ ಕೇಳಿದಾಗೆಲ್ಲ ಫೀಜು ಕೊಟ್ಟೂಕೊಟ್ಟು ಮಕ್ಕಳ ತಂದೆ ತಾಯಿ ಹೈರಾಣಾಗಿರುವುದು ಒಂದೆಡೆಯಾದರೆ, ಇಷ್ಟೆಲ್ಲಾ ಕೊಟ್ಟ ಮೇಲಾದರೂ ಶಿಕ್ಷಣದ ಮಟ್ಟ, ಕಾನ್ವೆಂಟ್‌ನ ಗುಣಮಟ್ಟ ಸುಧಾರಿಸಬೇಕಲ್ಲವೇ?


ದುರಂತವೆಂದರೆ ಕೆಎಲ್ಇ ಇಂಟರ್‌ನ್ಯಾಷನಲ್ ಸ್ಕೂಲ್‌ನ ಯಾವೊಬ್ಬ ಶಿಕ್ಷಕರಿಗೂ ಹೊಟ್ಟೆ ತುಂಬುವಂಥ ಸಂಬಳವಿಲ್ಲ. ಸಣ್ಣಪುಟ್ಟ ಕಾನ್ವೆಂಟುಗಳು ಕೊಡುವ ಸಂಬಳದ ಅರ್ಧದಷ್ಟು ಕೆಎಲ್ಇ ಧಣಿಗಳು ಕೊಡುವುದಿಲ್ಲ. ಯಾವೊಬ್ಬ ಟೀಚರ್ ಇಲ್ಲಿ ಶಾಶ್ವತವಾಗಿ ನಿಲ್ಲುವುದಿಲ್ಲ. ನಿಂತರೂ ಆತ ಬೇರೆಲ್ಲೂ ಸಲ್ಲದ ಕಾರಣಕ್ಕೆ ಹೊರತು ಪಾಂಡಿತ್ಯದ ಕಾರಣಕ್ಕಂತೂ ಅಲ್ಲವೇ ಅಲ್ಲ. ಹೆಸರಿಗೆ ಸೆಂಟ್ರಲ್ ಸಿಲೇಬಸ್ಸು ಮತ್ತು ಇಂಟರ್‌ನ್ಯಾಷನಲ್ ಸ್ಕೂಲಾದರೂ ಮಕ್ಕಳಿಗೆ ನೆಟ್ಟಗೊಂದು ಟೇಬಲ್ಲು' ಕುರ್ಚಿಯಿಲ್ಲ. ತುಕ್ಕುಹಿಡಿದ ಕಬ್ಬಿಣದ ಕುರ್ಚಿಯ ಮೇಲೆ ಮಕ್ಕಳು ಕೂರಬೇಕು. ಟೇಬಲ್ಲುಗಳಂತೂ ಸೆಂಟ್ರಲ್ ಜೈಲಿನಲ್ಲಿ ಕೈದಿಗಳನ್ನು ಕಟ್ಟಿ ಹಾಕಲು ಮಾಡಿದಂತಿದೆ. ಕೊಳಕು ನೆಲ. ಅಂಟಂಟು ಗೋಡೆಗಳು. ಇಲ್ಲಿನ ಶೌಚಾಲಯವಂತೂ ಎಂಥಾ ಅಧ್ವಾನವೆಂದರೆ ಇದಕ್ಕಿಂತ ಕಲಾಸಿಪಾಳ್ಯದ ಬಸ್‌ಸ್ಟ್ಯಾಂಡ್ ಟಾಯ್ಲೆಟ್ಟುಗಳೇ ಸಾವಿರ ಪಾಲು ವಾಸಿ.

ಮಕ್ಕಳನ್ನು ಬೇರೆ ಕಾನ್ವೆಂಟಿಗೆ ಸೇರಿಸೋಣವೆಂದರೆ ಶುರುವಿನಲ್ಲಿ ಕಟ್ಟಿದ ಲಕ್ಷಗಟ್ಟಲೇ ಡೊನೇಷನ್ನು ವಾಪಸ್ಸು ಕೊಡುವುದಿಲ್ಲ. ಇದ್ದು ಅನುಭವಿಸೋಣವೆಂದರೆ ಪ್ರತಿ ತಿಂಗಳೂ ಒಂದಲ್ಲ ಒಂದು ಫೀಜು, ದಂಡ, ಶುಲ್ಕ ಕಟ್ಟುವುದು ಸಾಧ್ಯವೇ ಇಲ್ಲ. ರೋಸತ್ತ ಪೋಷಕರೆಲ್ಲ ಸೆಕ್ರೆಟರಿ ಬಾಪೂ ದೇಸಾಯಿಗೆ ಕಾಲರ್ ಪಟ್ಟಿ ಹಿಡಿದು ಹೊಡೆಯುವುದೊಂದೇ ಬಾಕಿ. ಅಲ್ರೀ ಸುಮ್ನೇ ಆಕೀನ ಯಾಕೆ ಬೈಯ್ತೀರಿ? ಪ್ರಿನ್ಸಿಪಾಲ್ ಗೀತಿಕಾ ಎಷ್ಟು ಒಳ್ಳೆಯವಳು ಗೊತ್ತಾ? ಎಷ್ಟು ಚಂದ ಇಂಗ್ಲಿಷ್ ಮಾತಾಡ್ತಾಳೆ ಗೊತ್ತಾ? ಅನ್ನುತ್ತಾನೆ ಶೋಕಿಲಾಲ ಬಾಪೂ ದೇಸಾಯಿ.

ಇಂಥ ಖದೀಮರನ್ನು ಬಿಟ್ಟು ಶಿಕ್ಷಣದ ಹೆಸರಲ್ಲಿಯೇ ಸುಲಿಗೆ ಮಾಡುವ ಪ್ರಭಾಕರ್ ಕೋರೆ ಯಾವ ಮುಖ ಹೊತ್ತು ಸನ್ಮಾನ ಮಾಡಿಸಿಕೊಳ್ಳುತ್ತಾರೆ? ಮಕ್ಕಳನ್ನು ಸುಲಿಗೆ ಮಾಡಿ ಐಷಾರಾಮದ ರಾಜಕೀಯ ಮಾಡುವುದಕ್ಕಿಂತ ನೇರವಾಗಿಯೇ ರಾಬರಿ-ಡಕಾಯತಿ ಮಾಡಬಹುದಲ್ಲವೇ? ಕೋರೆಗೆ ಸನ್ಮಾನ ಬೇರೆ ಕೇಡು....!


• ರಾ. ಸೋಮನಾಥ್


ಮಂಡ್ಯ: ದಲಿತರ ಮೇಲೆ ಮುಂದುವರಿದ ಬಹಿಷ್ಕಾರ!


ವೆಂಕಟೇಶ್ ರವಿ

ಮಳವಳ್ಳಿ ತಾಲ್ಲೂಕಿನ ದಲಿತನೊಬ್ಬ ನೀರುಬಿಡುವ ವಾಟರ್‌ಮನ್ ಕೆಲಸಕ್ಕೆ ನೇಮಕವಾದ ವಿಷಯವನ್ನಿಟ್ಟುಕೊಂಡು ಮೇಲ್ಜಾತಿ ಜನ ದೌರ್ಜನ್ಯ ಜಾತಿ ಬಹಿಷ್ಕಾರದಂತ ಅಮಾನವೀಯ ನಡವಳಿಕೆ ಪ್ರದರ್ಶಿಸಿದ್ದಾರೆ. ಯತ್ತಂಬಾಡಿ ಗ್ರಾಮ ಪಂಚಾಯ್ತಿಗೆ ಸೇರಿದ ಹೊಸಪುರಕ್ಕೆ ನೀರು ಬಿಡುತ್ತಿದ್ದವ ಇದೇ ಗ್ರಾಮದ ಉಮೇಶ್ ಬಿನ್ ನಿಂಗೇಗೌಡ. ಈತ ಪರಮ ಕುಡುಕನೂ,ಸೋಮಾರಿಯೂ ಆಗಿದ್ದರಿಂದ ಕಳೆದ ತಿಂಗಳು ಕೆಲಸದಿಂದ ತೆಗೆದುಹಾಕಲಾಗಿತ್ತು, ಈ ವಾಟರ್‌ಮನ್ ಕೆಲಸಕ್ಕೆ ತಾತ್ಕಾಲಿಕವಾಗಿ ಯಾರನ್ನಾದರೂ ನೇಮಿಸಿ ನೀರುಬಿಡಲು ಬಿಲ್ ಕಲೆಕ್ಟರ್ ಸಿದ್ದರಾಜುವಿಗೆ ಜವಾಬ್ದಾರಿಯನ್ನ ಗ್ರಾ.ಪಂ. ಕಾರ್ಯದರ್ಶಿ ಆಲೂರಯ್ಯ ವಹಿಸಿದ್ದಾರೆ. ಮಾರ್ಚ್ 13 ಗ್ರಾಮದೇವತೆಯ ಹಬ್ಬ ಇದ್ದುದರಿಂದ ನೀರು ಬಿಡಲೇಬೇಕಿತ್ತು. ಅದೇದಿನ ಸವರ್ಣೀಯರ ಬೀದಿಯಲ್ಲಿ ಪೈಪ್ ಹೊಡೆದಿದ್ದರಿಂದ ಬಿಲ್‌ಕಲೆಕ್ಟರ್ ಸಿದ್ದರಾಜು, ಅನುಭವಿ ವಾಟರ್‌ಮನ್ ದಲಿತ ವೆಂಕಟೇಶ್‌ನನ್ನ ಕರೆತಂದು ಪೈಪ್ ರಿಪೇರಿ ಮಾಡಿಸಿದ್ದಾನೆ.

ಇದರಿಂದ ಕೆರಳಿದ ಸವರ್ಣೀಯ ಶಿವಕುಮಾರ್


ನರೇಂದ್ರಸ್ವಾಮಿ


ಡಾ.ಅನ್ನದಾನಿ

ಎಂಬಾತ ಪೈಪ್ ರಿಪೇರಿ ಮಾಡುತ್ತಿದ್ದ ಸ್ಥಳಕ್ಕೆ ಬಂದು "ಏ ಹೊಲೆಯ, ಹೊಲೆಯರ ಕೈಲಿ ನೀರುಬಿಡಿಸಿ ನಮ್ಮನ್ನ ಏನು ಮಾಡಬೇಕು ಎಂದುಕೊಂಡಿದ್ದೀಯ?" ಎಂದು ಏಕಾಏಕಿ ಬಿಲ್ ಕಲೆಕ್ಟರ್ ಸಿದ್ದರಾಜುವಿಗೆ ಧಮಕಿ ಹಾಕಿದ್ದಾನೆ. ಹಿಂದೆ ವಾಟರ್‌ಮನ್ ಆಗಿದ್ದ ಉಮೇಶ್‌ನ ಸಂಬಂಧಿಗಳಾದ ನಾಗರಾಜ, ಶಂಕರ್ ಬಿನ್ ರಾಮೇಗೌಡ, ಈತನ ತಮ್ಮ ಶಿವ, ಉಮೇಶ್ ಬಿನ್ ನಿಂಗೇಗೌಡ ಎಂಬ ಪುಂಡರೆಲ್ಲಾ ಸಿದ್ದರಾಜು ಹಾಗೂ ವೆಂಕಟೇಶ್‌ನಿಗೆ ಹೊಡೆಯಲು ಶುರುಮಾಡಿದ್ದಾರೆ. ಈ ಸಮಯದಲ್ಲಿ ಮಹೇಶ್, ಬಸವರಾಜ, ಸಂತೋಷ್ ಮತ್ತು ಪ್ರಕಾಶ್ ಎಂಬ ಮತ್ತಷ್ಟು ಪುಂಡರು ಸೇರಿಕೊಂಡು ಹೊಲೆಯರದ್ದು ಊರಲ್ಲಿ ಗಲಾಟೆ ಜಾಸ್ತಿಯಾಯಿತು ಎಂದು ಒಂದೇ ಸಮನೆ ಹೊಡೆದಿದ್ದಾರೆ.

ವಾಟರ್ ಮನ್ ಕೆಲಸ ವೆಂಕಟೇಶ್ ಮಗ ಅಂದಾನಿ ಎಂಬ ಯುವಕನಿಗೆ ಸಿಕ್ಕಿಬಿಡುತ್ತದೆಂಬ ಏಕೈಕ ಕಾರಣದಿಂದ ಇಷ್ಟೆಲ್ಲಾ ರಂಪಾಟ ಮಾಡಿದ್ದಾರೆ, ಇದು ಸಹಜವಾಗಿ ದಲಿತರನ್ನು ಕೆರಳಿಸಿದೆ. ಅಂಬೇಡ್ಕರ್ ಯುವಕ ಸಂಘದ ಅಧ್ಯಕ್ಷ ದೇವರಾಜ್ ಮತ್ತು ಕಾರ್ಯದರ್ಶಿ ಮಹೇಶ್‌ರವರು ವೆಂಕಟೇಶ್‌ರಿಂದ ಹಲಗೂರು ಪೊಲೀಸ್ ಸ್ಟೇಷನ್ನಲ್ಲಿ ಈ ಗೂಂಡಾಗಳ ಮೇಲೆ ಮಾರ್ಚ್ 13ರ ಸಂಜೆ ದೂರು ನೀಡಿದ್ದಾರೆ.

ಇದರಿಂದ ತಮ್ಮ ಪ್ರತಿಷ್ಠೆಗೆ ಕುಂದಾಯಿತೆಂದು ಭಾವಿಸಿದ ಪುಂಡರೆಲ್ಲಾ ಸೇರಿ ಮತ್ತೆ ದಲಿತರ ಕೇರಿಗೆ ನುಗ್ಗಿ ಅಕ್ಷರಶಃ ಗೂಂಡಾಗಿರಿ ನಡೆಸಿದ್ದಾರೆ. ಮಕ್ಕಳು, ಮುದುಕರು ಮಹಿಳೆಯರೆನ್ನದೆ ಸಿಕ್ಕಸಿಕ್ಕವರ ಮೇಲೆ ಎರಗಿ ದೌರ್ಜನ್ಯ ನಡೆಸಿದ್ದಾರೆ. ಈ ವಿಚಾರ ಪಿಎಸ್ಐ ಡಿ.ಪಿ.ಧನರಾಜ್ ತಿಳಿಸಿದ್ದರೂ ನೆಪಮಾತ್ರಕ್ಕೆ ಇಬ್ಬರು ಪೊಲೀಸರನ್ನ ಕಳುಹಿಸಿ ಕೈತೊಳೆದುಕೊಂಡಿದ್ದಾನೆ.

ಆದರೆ ವೆಂಕಟೇಶ್ ಘಟನೆಯಲ್ಲಿ ನಮ್ಮ ಮೇಲೆ ದಲಿತರು ದೂರು ನೀಡುವ ಮಟ್ಟಕ್ಕೆ ಬೆಳೆದುಬಿಟ್ಟರಲ್ಲ ಎಂಬುದನ್ನೆ ಮುಂದಿಟ್ಟುಕೊಂಡು ಮಧ್ಯರಾತ್ರಿವರೆಗೂ ಸಭೆ ನಡೆಸಿ ಮಾ.14ರಿಂದ ಬಹಿಷ್ಕಾರವನ್ನ ಜಾರಿಗೊಳಿಸಿದ್ದಾರೆ. ಸವರ್ಣೀಯರ ಅಂಗಡಿಗಳಲ್ಲಿ ದಿನಬಳಕೆ ವಸ್ತುಗಳನ್ನ ಕೊಂಡುಕೊಳ್ಳಲು ಹೋದರೆ ಕೊಡದೆ ನಿರಾಕರಿಸಿದ್ದಾರೆ. ಕೂಲಿಗೆ ಕರೆಯುತ್ತಿದ್ದವರೂ ಸಹ ಕರೆದಿಲ್ಲ, ಈ ವಿಷಯವನ್ನು ದಲಿತ ಯುವಕರು ಎಸ್ಸೈ ಧನರಾಜ್‌ಗೆ ತಿಳಿಸಿದ್ದರೂ ಪಕ್ಕದೂರಿನಲ್ಲಿ ಹಬ್ಬ ಇದೆ ಎಂದು ಈ ಬಗ್ಗೆ ತಲೆಕೆಡಿಸಿಕೊಂಡಿಲ್ಲ, ಆ ನಂತರ ಬಿಎಸ್ಪಿಯ ಮುಖಂಡ ಡಾ.ಕೃಷ್ಣಮೂರ್ತಿಯವರಿಗೆ ವಿಚಾರ ತಿಳಿಸಲಾಗಿದೆ. ಈ ಬಗ್ಗೆ ಫೋನ್ ಮೂಲಕ ಸಂಪರ್ಕಿಸಿ ಧನರಾಜ್‌ಗೆ ಜಾಡಿಸಿದ್ದರಿಂದ ಆರೋಪಿಗಳ ಮೇಲೆ ಐಪಿಸಿ ಮತ್ತು ಆಟ್ರಾಸಿಟಿಯ ದುರ್ಬಲ ಕಲಂಗಳನ್ನು ಹಾಕಿ ಎಫ್‌ಐಆರ್ ದಾಖಲಿಸಲಾಗಿದೆ, ಆದರೆ ಇದರಲ್ಲಿ ಘಟನೆ ನಡೆದಿರುವುದು ಮಾರ್ಚ್ 14 ಹಿಂದಿನ ದಿನಗಳಲ್ಲಿ ಎಂದು ನಮೂದಿಸಿ ಮಾರ್ಚ್ 16 ರಂದೇ ಆರೋಪಿಗಳಿಗೆ ಜಾಮೀನು ಸಿಗುವಂತೆ ನೋಡಿಕೊಳ್ಳಲಾಗಿದೆ. ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಪವಿತ್ರ ಮತ್ತಾಕೆಯ ಸಹೋದರ ಸುರೇಶ್ ಬಹಿರಂಗವಾಗಿ ಕುಮ್ಮಕ್ಕು ನೀಡಿ ಬಹಿಷ್ಕಾರಕ್ಕೆ ಬೆಂಬಲಿಸಿದ್ದಾರೆ.

ಹೊಸಪುರ ಗ್ರಾಮಕ್ಕೆ ಬಹಿಷ್ಕಾರ ಹೊಸದಾದರೂ ಸಹ ಇದರ ಸುತ್ತಮುತ್ತಲಿನ ಗ್ರಾಮಗಳಾದ ಎಸ್.ಐ.ಹೊನ್ನಲಗೆರೆ, ಗುಡಿಸರಗೂರಿನಲ್ಲಿ ಕ್ಷುಲ್ಲಕ ಕಾರಣಗಳಿಗಾಗಿ ದೊಡ್ಡ ಗಲಭೆಗಳಾಗಿ ದಲಿತರ ಮೇಲೆ ಸಾಮೂಹಿಕ ಬಹಿಷ್ಕಾರ ಹಾಕಲಾಗಿತ್ತು. ಗೊಲ್ಲರದೊಡ್ಡಿಯಲ್ಲಂತೂ ದಲಿತರಿಗೆ ಊರೊಳಗೆ ಪ್ರವೇಶವಿಲ್ಲ, ದಲಿತರ ಮೇಲೆ ಗೊಲ್ಲರು ನಡೆಸುವ ದೌರ್ಜನ್ಯಗಳೂ ಸಹ ಮಿತಿ ಮೀರಿವೆ. ಈ ವಿಚಾರ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರಿಗೆ ಗೊತ್ತಿದ್ದರೂ ಸಹ ಒಕ್ಕಲಿಗರು ಮತ್ತು ಗೊಲ್ಲರ ಓಟುಗಳು ಕೈತಪ್ಪಿ ಹೋಗುತ್ತವೆಂದು ದಲಿತರಿಂದ ಓಟನ್ನು ಪಡೆದು ಗೆದ್ದಿರುವ ರಾಜಕೀಯ ಪುಢಾರಿಗಳೂ ಬಾಯಿಗೆ ಬೀಗ ಹಾಕಿಕೊಂಡಿದ್ದಾರೆ.

ಬಹಿಷ್ಕಾರದ ವಿಷಯ ಗೊತ್ತಿದ್ದರೂ ಎಸ್ಸೈ ಧನರಾಜ್ ಸವರ್ಣೀಯರ ಪುಡಿಗಾಸು ತಿಂದು ಪ್ರಕರಣ ಮುಚ್ಚಿಹಾಕಲು ಶತಪ್ರಯತ್ನ ನಡೆಸಿದ್ದಾನೆ. ಮಾಜಿ ಶಾಸಕ ಅನ್ನದಾನಿ ಚೇಲಾ, ಗ್ರಾಮಪಂಚಾಯ್ತಿ ಸದಸ್ಯ ದಲಿತ ಪ್ರಕಾಶ್ ಎಂಬಾತ ಸವರ್ಣೀಯರ ಗುಲಾಮನಂತೆ ವರ್ತಿಸಿ ಎಸ್ಸೈಗೆ ಸಾತ್ ನೀಡಿದ್ದಾನೆ. ಈ ಆಸಾಮಿಯೇ ಈ ಘಟನೆಗೆ ಮುಖ್ಯ ಕಾರಣನಾಗಿದ್ದಾನೆ.


ಮಂಡ್ಯಕ್ಕೆ ಒಕ್ಕರಿಸಿಕೊಂಡಿರುವ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಶಿವರಾಂ ಪಕ್ಕಾ ಜಾತಿವಾದಿಯಾಗಿ ವರ್ತಿಸುತ್ತಿದ್ದಾನೆ. ದಲಿತರ ಉದ್ಧಾರ ಹೋಗಲೀ, ಮದ್ದೂರಿನ ವಿದ್ಯಾರ್ಥಿ ನಿಲಯದ ಹೆಸರಿನಲ್ಲಿ 2 ಕೋಟಿ ನುಂಗಿರುವವರ ವಿರುದ್ಧ ತನಿಖೆಗೆ ಒತ್ತಾಯಿಸಿದರೆ ಜನಶಕ್ತಿ ಸಂಘಟನೆಯ ಮುಖಂಡರ ಮೇಲೆ ಖೊಟ್ಟಿ ಕೇಸು ಹಾಕಿಸಿದ್ದ. ದಕ್ಷ ತಹಶೀಲ್ದಾರ್ ವಾಣಿಯವರು ಕೂತ ಜಾಗವನ್ನ ಬಿಟ್ಟು ಕದಲಲಿಲ್ಲ. ದಲಿತರು ತುತ್ತು ಅನ್ನಕ್ಕೂ ಪರದಾಡುತ್ತಿದ್ದರೂ ಕನಿಷ್ಠ ವ್ಯವಸ್ಥೆಯನ್ನ ಮಾಡದೆ ಇಡೀ ಜಿಲ್ಲಾಡಳಿತ ಅಮಾನವೀಯತೆ ಮೆರೆದಿದೆ. ಅಪರ ಜಿಲ್ಲಾಧಿಕಾರಿ ಪುಟ್ಟಮಾದಯ್ಯ ಸೌಜನ್ಯಕ್ಕೂ ಭೇಟಿ ನೀಡಿಲ್ಲ.

ಒಟ್ಟಿನಲ್ಲಿ ಜಾತಿವಾದಿಗಳ ಅರ್ಭಟ ಎಗ್ಗಿಲ್ಲದೆ ಸಾಗಿದೆ. ಪತ್ರಕರ್ತರಂತೂ ಸುದ್ದಿಯನ್ನೇ ಮಾಡದೆ ತಾವು ಯಾರ ಪರ ಎಂಬುವುದನ್ನ ಸಾಬೀತುಪಡಿಸಿದ್ದಾರೆ. ಇನ್ನು ದಲಿತರ ಹಿತ ಕಾಪಾಡಬೇಕಾದ ಜಿಲ್ಲಾಡಳಿತ ಇದ್ದೂ ಸತ್ತಂತಾಗಿದೆ. ದಲಿತರ ಬದುಕು ಮಾತ್ರ ನಿತ್ಯ ನರಕವಾಗಿದೆ. ●

ಇವರು ದಲಿತರ ಪ್ರತಿನಿಧಿಗಳಲ್ಲ ಮೇಲ್ಜಾತಿ ಗುಲಾಮರು!

ಮೇಲ್ಜಾತಿಯ ಪ್ರತಿನಿಧಿಗಳಿರಲಿ, ಮೀಸಲು ಕ್ಷೇತ್ರ ಮಳವಳ್ಳಿಯಿಂದ ಗದ್ದುಗೆ ಏರುವ ಪ್ರತಿನಿಧಿಗಳು ಮೇಲ್ಜಾತಿಯ ಗುಲಾಮರಂತಾಗಿದ್ದಾರೆ. ಮೀಸಲು ಕ್ಷೇತ್ರದ ಆಶಯಗಳು ಮಣ್ಣುಪಾಲಾಗಿವೆ. ಹಿಂದಿನ ಶಾಸಕ ಡಾ.ಕೆ.ಅನ್ನದಾನಿ ಒಕ್ಕಲಿಗರ ಗುಲಾಮನಾದರೆ, ಅನರ್ಹ ಶಾಸಕ ನರೇಂದ್ರಸ್ವಾಮಿ ಮೇಲ್ಜಾತಿ ಮತ್ತು ಲಿಂಗಾಯಿತರ ಗುಲಾಮ. ಈತ ಸಚಿವನಾಗಿ ಸಂದರ್ಭದಲ್ಲಿ ಬೇರೆ ಪಕ್ಷಗಳ ದಲಿತ ಮುಖಂಡರನ್ನ ಸುಳ್ಳು ಕೇಸುಗಳನ್ನ ಹಾಕಿಸಿ ಜೈಲಿಗೆ ತಳ್ಳಿರುವ ಭೂಪ. ಇಂತಹವರಿಂದ ದಲಿತರ ರಕ್ಷಣೆ ಸಾಧ್ಯವೇ? ಕಳೆದ ವರ್ಷ ಮಾರ್ಚ್ ತಿಂಗಳಿನಲ್ಲಿ ಕನ್ನಳಿಯಲ್ಲಿ ದಲಿತರ ಮೇಲೆ ದೌರ್ಜನ್ಯ ನಡೆದಿದ್ದರೂ ಕನಿಷ್ಠ ಭೇಟಿನೀಡಿ ಸಾಂತ್ವನದ ಮಾತಾಡಲಿಲ್ಲ, ಇದಕ್ಕೆ ಜನಶಕ್ತಿ ಸಂಘಟನೆಯವರು ಅಂಬೇಡ್ಕರ್ ಜಯಂತಿಯಂದು ನಿಮಗೆ ಹೂಹಾರ ಹಾಕುವ ಯೋಗ್ಯತೆ ಇಲ್ಲ ಎಂದು ಪ್ರತಿಭಟಿಸಿದ್ದರು. ಮಾಜಿ ಎಮ್ಮೆಲ್ಲೆ ಮಲ್ಲಾಜಮ್ಮನವರದ್ದೂ ಇದೇ ಕಥೆ. ಇದು ದಲಿತರನ್ನು ಪ್ರತಿನಿಧಿಸುವವರ ನಿರ್ಲಜ್ಜತನವಲ್ಲವೇ?

ಮಾಡಿದ ತಪ್ಪಿಗೆ ಮಗುವೇ ವಾಂತಿ ಬಾಚಬೇಕು


ಕೆಎಲ್ಇ ಸ್ಕೂಲಿನ ಮಕ್ಕಳು

ಸತ್ಯ, ಪ್ರೇಮ, ಸೇವೆ, ಸ್ವಾರ್ಥತ್ಯಾಗ ಎಂಬ ಘೋಷವಾಕ್ಯ ಹೊತ್ತ ಕೆಎಲ್ಇ ಸೊಸೈಟಿ ಕೋರೆಯ ಲೋಭ ಮತ್ತು ದುರಾಸೆಗೆ ಸಿಲುಕಿ ಹೇಗೆ ತನ್ನ ಮನುಷ್ಯತ್ವವನ್ನೇ ಕಳೆದುಕೊಂಡಿದೆ ಎಂಬುದಕ್ಕೆ ಇಲ್ಲಿಗೆ ತಿಂಗಳ ಹಿಂದಷ್ಟೇ ನಡೆದ ಈ ಘಟನೆಯೇ ಸಾಕು.

ನಾಲ್ಕನೇ ತರಗತಿಯ ಸಚಿನ್ (ಹೆಸರು ಬದಲಿಸಿದೆ) ಎಂಬ ಮಗು ಅನಾರೋಗ್ಯಕ್ಕೀಡಾಗಿ ಅವತ್ತು ಕ್ಲಾಸ್ ರೂಮಿನಲ್ಲೇ ವಾಂತಿ ಮಾಡಿದೆ. ಸಾಮಾನ್ಯವಾಗಿ ಯಾರೇ ಮಗು ವಾಂತಿ ಮಾಡಿತೆಂದರೆ ಅದಕ್ಕೆ ಹುಷಾರಿಲ್ಲವೆಂದೇ ಟೀಚರ್ ವಿಶೇಷ ಅಕ್ಕರೆ ತೋರಿಸುತ್ತಾರೆ. ಮೃದುವಾಗುತ್ತಾರೆ. ಪ್ರೀತಿಯ ಮಾತಾಡುತ್ತಾರೆ. ಅದು ಮನುಷ್ಯ ಸಹಜ ಕರುಣೆ.

ಆದರೆ ಕೆಎಲ್ಇ ಇಂಟರ್‌ನ್ಯಾಷನಲ್ ಸ್ಕೂಲಿನಲ್ಲಿ ವಾಂತಿ ಮಾಡಿದ ಒಂದೇ ತಪ್ಪಿಗೆ ರಣಚಂಡಿಯಾದ ಪ್ರಿನ್ಸಿಪಾಲ್ ಗೀತಿಕಾ ವಾಂತಿ ಮಾಡಿಕೊಂಡಿದ್ದ ಆ ಮಗುವನ್ನೇ ಗದರಿಸಿ ಪೊರಕೆ ಕೊಟ್ಟು ಅದರ ಕೈಯಲ್ಲೇ ಬಾಚಿಸುತ್ತಾಳೆ. ಮೊದಲೇ ಸುಸ್ತಾಗಿ ತಲೆ ಸುತ್ತು ಬರುತ್ತಿದ್ದ ಆ ಮಗು ವಾಂತಿಯನ್ನೂ ಬಾಚಬೇಕೆಂದರೆ ಅದಕ್ಕಿಂತ ಕ್ರೌರ್ಯವುಂಟೆ?

ಅಂಥಾ ಸರ್ಕಾರಿ ಶಾಲೆಗಳಲ್ಲೇ ಮಕ್ಕಳು ಮೂತ್ರವನ್ನೋ ಬೇಧಿಯನ್ನೋ ಮಾಡಿಕೊಂಡರೆ ಅಲ್ಲಿನ ಆಯಾಗಳು ತೊಳೆಯುತ್ತಾರೆ. ಬಿಬಿಎಂಪಿಯ ಶಾಲೆಗಳಲ್ಲೂ ಕೆಲವೊಮ್ಮೆ ಅಲ್ಲಿನ ಶಿಕ್ಷಕರೇ ಮಕ್ಕಳನ್ನು ತೊಳೆದು ಶುಚಿಗೊಳಿಸುವುದುಂಟು. ಅದು ಮನುಷ್ಯತ್ವ. ಆದರೆ ಈ ಪಾಟಿ ಡೊನೇಷನ್ನು, ಮಂತ್ಲಿ ಫೀಜು ಕೀಳುವ ಕೆಎಲ್ಇಯಲ್ಲಿ ಆಯಾಗಳಿದ್ದೂ ಮಕ್ಕಳೇ ತಮ್ಮ ವಾಂತಿಯನ್ನು ಬಾಚಿ ನೆಲ ಒರೆಸಬೇಕೆಂದರೆ ಮಕ್ಕಳ ಮನಸ್ಸು ಏನಾಗಬೇಡ?

ದಯೆ, ಕರುಣೆಯ ತಾಣವಾಗಬೇಕಿದ್ದ ಸನ್ನಿವೇಶವನ್ನೂ ಕ್ರೌರ್ಯದ ಅನುಭವಕ್ಕೆ ನೂಕುವ ಕೆಎಲ್ಇಯಲ್ಲಿ ಸದ್ಯ ಕುರುಡು ಕಾಂಚಾಣಬಿಟ್ಟರೆ ಬಸವಣ್ಣನೂ ಇಲ್ಲ, ಲಿಂಗವೂ ಇಲ್ಲ, ಇನ್ನು ಮನುಷ್ಯತ್ವ ಎಲ್ಲಿ ಸಾಧ್ಯ?

ದುಡ್ಡೇ ಇಲ್ಲಿ ಧರ್ಮ. ●

ರೇವಣಾಪುರ ಸಂಸ್ಥಾನ ಮಠ

ಲಿಂಗಾಯತ ಮಠದ ಆಸ್ತಿಗೆ ಯಡ್ಡಿ ಕೈ



ತನಗೆ ರಾಜಕೀಯ ಬಿಕ್ಕಟ್ಟು ಎದುರಾದಾಗಲೆಲ್ಲಾ ಲಿಂಗಾಯತ ಮಠಾಧೀಶರನ್ನು ಎತ್ತಿಕಟ್ಟುತ್ತಾ, ಆ ಮೂಲಕ ಲಿಂಗಾಯತ ಜನಾಂಗದವರಲ್ಲೂ ಸಿಂಪಥಿ ಗಿಟ್ಟಿಸುತ್ತಾ ಪಾರಾಗುವ ಚಾಳಿ ಯಡ್ಡಿಗಿದೆ. ಆದರೆ ಈಗ ಅದೇ ಲಿಂಗಾಯತ ಮಠದ ಆಸ್ತಿ ಗುಳುಂ ಮಾಡಲು ಅಪ್ಪಟ ಲಿಂಗಾಯತ ಯಡಿಯೂರಪ್ಪನೇ ಕೈ ಹಾಕಿದ್ದಾನೆ. ಆ ಶಿವಾಚಾರ್ಯ ಸ್ವಾಮೀಜಿ ಮತ್ತವನ ಪ್ರೇಯಸಿಯರು ಮತ್ತವರ ಸಂತಾನವನ್ನು ಹೀಗೆ ಇರಲು ಬಿಟ್ಟರೆ ರೇವಣಾಪ್ಪುರ ಮಠ ಸ್ಮಶಾನವಾಗುವ ದಿನ ದೂರವಿಲ್ಲ. ಅದೇ ರೀತಿ ನೂರಾರು ಕೋಟಿ ರೂಪಾಯಿ ಬೆಲೆಬಾಳುವ ಮಠದ ಆಸ್ತಿಯು ಕಳ್ಳಕಾಕರ ಪಾಲಾಗುವುದು ಗ್ಯಾರಂಟಿ.

• ಪಾರ್ವತೀಶ

RSS ನಾಯಕರು ಮುಖ್ಯಮಂತ್ರಿ ಯಡಿಯೂರಪ್ಪನ ಬಾಯಿಗೆ ಅರ್ಜೆಂಟಾಗಿ ಒಂದು ಬೀಗ ಹಾಕದೆ ಹೋದರೆ ಈ ಯಡ್ಡಿ ತನ್ನದೇ ಮನೆಯಲ್ಲೂ ತಾನೆ ಕದಿಯುವ ಸಾಧ್ಯತೆಗಳು ಕಂಡುಬರುತ್ತಿದೆ.

ಸಾರ್ವಜನಿಕರ, ಸರ್ಕಾರದ ಹಾಗೂ ಕಂಡವರ ಹಣ- ಆಸ್ತಿ ಕದಿಯುವುದನ್ನೇ ಫುಲ್‌ಟೈಂ ಕೆಲಸ ಮಾಡಿಕೊಂಡಿರುವ ಯಡ್ಡಿಯ ಹೊಸ ಹಗರಣ ಏನು ಗೊತ್ತೆ?

ಅಪ್ಪಟ ಲಿಂಗಾಯತ ಮಠದ ಆಸ್ತಿ ಕದಿಯಲು ಹೊರಟಿರುವುದು!

ತನಗೆ ರಾಜಕೀಯ ಬಿಕ್ಕಟ್ಟು ಎದುರಾದಾಗಲೆಲ್ಲಾ ಲಿಂಗಾಯತ ಮಠಾಧೀಶರನ್ನು ಎತ್ತಿಕಟ್ಟುತ್ತಾ ಆ ಮೂಲಕ ಲಿಂಗಾಯತ ಜನಾಂಗದವರಲ್ಲೂ ಸಿಂಪಥಿ ಗಿಟ್ಟಿಸುತ್ತಾ ಪಾರಾಗುವ ಚಾಳಿ ಯಡ್ಡಿಗಿದೆ. ಆದರೆ ಈಗ ಅದೇ ಲಿಂಗಾಯತ ಮಠದ ಆಸ್ತಿ ಗುಳುಂ ಮಾಡಲು ಅಪ್ಪಟ ಲಿಂಗಾಯತ ಯಡಿಯೂರಪ್ಪನೇ ಕೈ ಹಾಕಿದ್ದಾನೆ.



ಇದು ಹೆಚ್ಚುಕಡಿಮೆ 200 ಕೋಟಿ ರೂಪಾಯಿ ಬೆಲೆಯ ಆಸ್ತಿ!

ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹತ್ತಿರವಿರುವ ಹುಣಸಮಾರನಹಳ್ಳಿಯಲ್ಲಿರುವ ರೇವಣಾಪುರ ಸಂಸ್ಥಾನ ಮಠವೇ ಈಗ ಯಡ್ಡಿಯ ಕಾಗೇ ಕಣ್ಣಿಗೆ ಬಿದ್ದಿರುವುದು.

ಈ ಮಠದ ಹಿನ್ನೆಲೆ, ಹಾಲಿ ಪೀಠಾಧೀಶನ ರಾಸಲೀಲೆಗಳು ಹಾಗೂ ಮಠದ ಉತ್ತರಾಧಿಕಾರಿಯ ಆಯ್ಕೆಯ ಪಿತೂರಿಗಳೆಲ್ಲಾ ಈಗ ಹಾದಿರಂಪ ಬೀದಿರಂಪವಾಗಿಬಿಟ್ಟಿದೆ.

ಉತ್ತರಾಧಿಕಾರಿ ವಿವಾದ

ಸುಮಾರು ಮೂರೂವರೆ ಶತಮಾನದ ಇತಿಹಾಸ ಹೊಂದಿರುವ ಶ್ರೀಮದ್ ರೇವಣಾಪುರ ಸಿಂಹಾಸನ ಸಂಸ್ಥಾನ ಮಠವು ಬಾಳೇಹೊನ್ನೂರಿನ ರಂಭಾಪುರಿ ಹಾಗೂ ಶ್ರೀಶೈಲ ಸಂಸ್ಥಾನ ಮಠಗಳ ವ್ಯಾಪ್ತಿಗೆ ಬರುತ್ತದೆ. ಪಟ್ಟದ ಪರ್ವತರಾಜ ಶಿವಾಚಾರ್ಯ ಸ್ವಾಮಿ ಎಂಬುವನು ಈ ಮಠದ ಪೀಠಾಧಿಪತಿಯಾಗಿದ್ದಾನೆ. ಅಂದಾಜು ಎಪ್ಪತ್ತೈದು ವರ್ಷ ವಯಸ್ಸಿನ ಈ ಶಿವಾಚಾರ್ಯ ಸ್ವಾಮಿಗೆ ಕಳೆದ ಡಿಸೆಂಬರ್‌ನಲ್ಲಿ ಲಕ್ವಾ ಹೊಡೆದು ದೇಹದ ಎಡಭಾಗ ಸ್ವಾಧೀನ ತಪ್ಪಿದೆ. ಈ ಶಿವಾಚಾರ್ಯ ಮೊನ್ನೆ ಮಾರ್ಚ್ 21 ರ ಹೋಳಿಹುಣ್ಣಿಮೆಯ ದಿನ ದಿಢೀರೆಂದು ದಯಾನಂದ ಎಂಬ ಯುವಕನನ್ನು ತನ್ನ ಉತ್ತರಾಧಿಕಾರಿಯೆಂದು



ಘೋಷಿಸಲು ಹೊರಟ. ಈ ವಿಚಾರ ಗೊತ್ತಾಗಿ ಹುಣಸಮಾರನಹಳ್ಳಿಯ ಜನ ಸೇರ ಮಠಕ್ಕೆ ನುಗ್ಗಿ ಭಾವಿ ಮಠಾಧೀಶ ದಯಾನಂದನ ಕುಂಡೆ ಮೇಲೊದ್ದು ಅವನ ಕಾವಿ ಬಟ್ಟೆ ಕಿತ್ತು ಗಲಾಟೆ ಮಾಡಿದರು. ನಿರೀಕ್ಷಿಸಿದಂತೆ ಯಲಹಂಕ ಪೊಲೀಸರು ಓಡಿಬಂದರು. ಜೊತೆಗೆ ಬೆಂಗಳೂರಿನ ಕೆಲ ಘಟಿಂಗ ಲಿಂಗಾಯತ ಮಠಾಧೀಶರು ಕೋಳದ ಮಠದ ಶಾಂತವೀರ ಸ್ವಾಮಿಯ ನೇತೃತ್ವದಲ್ಲಿ ಕಾಣಿಸಿಕೊಂಡರು. ಆ ಗುಂಪಿನಲ್ಲೆ ಒಂದು ವಿಶೇಷ ವ್ಯಕ್ತಿಯೂ ಇದ್ದ.

ಅದು ಸ್ವಾಮಿ!

ಯಡ್ಡಿಯ ಆಪ್ತ ಸಹಾಯಕನಿವನು!!

ಈ ದಯಾನಂದ ಯಾರು?

ಯಡ್ಡಿಯ ಪಿಎ ಅಲ್ಯಾಕೆ ಬಂದಿದ್ದ? ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕಲು ಹೊರಟಾಗಲೇ ರೇವಣಾಪುರ ಮಠದ ಆಸ್ತಿ ಲಪಟಾಯಿಸಲು ಯಾರ್ಯಾರು ರಣಹದ್ದುಗಳಂತೆ ಹೊಂಚುಹಾಕುತ್ತಿದ್ದಾರೆಂದು ಗೊತ್ತಾಗುತ್ತದೆ.

ಶಿವಾಚಾರ್ಯ ಸ್ವಾಮಿಗೊಬ್ಬ ಮಗ!

ಹಾಲಿ ವೃದ್ಧ ಮಠಾಧೀಶ ಶಿವಾಚಾರ್ಯ ಸ್ವಾಮಿಯು ದಯಾನಂದನೆಂಬ ಮೂವತ್ತರ ಹರೆಯದ ಯುವಕನನ್ನು ಉತ್ತರಾಧಿಕಾರಿಯೆಂದು ಬಿಂಬಿಸಲು ಯತ್ನಿಸಿ ಗೂಸಾ ತಿಂದನಲ್ಲ ಆ ದಯಾನಂದ ಬೇರೆ ಯಾರೂ ಅಲ್ಲ, ಸಾಕ್ಷಾತ್ ಶಿವಾಚಾರ್ಯ ಸ್ವಾಮಿಯ ಮಗ!

ನಿಜ ಹೇಳಬೇಕೆಂದರೆ ಅದೇ ಒಂದು ದೊಡ್ಡ ಕತೆ.

ರೇವಣಾಪುರ ಮಠದ 23 ನೇ ಪೀಠಾಧಿಪತಿ ಶಿವಾಚಾರ್ಯ ಸ್ವಾಮಿ ಹತ್ತಿರ ಸಹಾಯಕನಾಗಿ ಗಂಗಾಧರಪ್ಪ ಎಂಬುವನಿದ್ದ. ರೇವಮ್ಮ ಎಂಬಾಕೆಯ ಜೊತೆ ಅವನ ಮದುವೆಯೂ ಆಗಿ ಗಂಡಹೆಂಡತಿ ಮಠದಲ್ಲೇ ವಾಸವಿದ್ದರು. ನಂತರ ಗಂಗಾಧರಪ್ಪ ಸತ್ತ, ಚಿಕ್ಕ ವಯಸ್ಸಿನ ವಿಧವೆ ರೇವಮ್ಮ ಮಠದಲ್ಲೇ ಉಳಿದಳು. ಇದೆಲ್ಲಾ ನಡೆದದ್ದು 1975 ರ ಸುಮಾರಿನಲ್ಲಿ, ಆಗ ಶಿವಾಚಾರ್ಯ ಸ್ವಾಮಿಗಿನ್ನು ನಲವತ್ತರ ವಯಸ್ಸು, ಇತ್ತ ಮಠದೊಳಗೆ ಏನಾಯಿತೆಂದರೆ ಗಂಡ ಗಂಗಾಧರಪ್ಪ ತೀರಿಕೊಂಡ ನಂತರ ರೇವಮ್ಮ ವರ್ಷಕ್ಕೊಂದು ಮಗು ಹೆರಲಾರಂಭಿಸಿದಳು. ಹುಣಸಮಾರನಹಳ್ಳಿಯ ಜನ ಮಠದೊಳಗೆ ನಡೆಯುತ್ತಿದ್ದ ಈ ಪವಾಡ ನೋಡಿ ಬೆರಗಾದರು. ಪ್ರತಿ ದಿನ ಮನೆಗೆ ಹಾಲು-ಪೇಪರ್ ಬರುವಂತೆ ಮಠದೊಳಗೂ ಪ್ರತಿ ವರ್ಷ ಒಂದು ಮಗು ಹುಟ್ಟಿ ಬರುತ್ತಿರುವುದು ಅವರಿಗೆ ಯಕ್ಷ ಪ್ರಶ್ನೆಯೆನಿಸಿತು. ಕೊನೆಗೊಮ್ಮೆ ಏನೆಂದು ನೋಡಿದರೆ ಖುದ್ದು ಮಠಾಧೀಶ ಶಿವಾಚಾರ್ಯರೇ ಆಧ್ಯಾತ್ಮ ವೈರಾಗ್ಯವನ್ನೆಲ್ಲಾ ಬಿಟ್ಟು ಸಂತಾನೋತ್ಪತ್ತಿ ಕಾರ್ಯದಲ್ಲಿ ನಿರತರಾಗಿರುವುದು ಗೊತ್ತಾಯಿತು. ಜನ ಏನೇ ಹೇಳಿದರೂ ಎಷ್ಟೇ ಬೇಡಿಕೊಂಡರೂ ಸ್ವಾಮಿ ರೇವಮ್ಮಳನ್ನು ಶಿವದಾರಕ್ಕಿಂತ ಗಟ್ಟಿಯಾಗಿ ಹಿಡಿದುಕೊಂಡಿದ್ದ. ಅದರ ಪ್ರತಿಫಲವೆಂಬಂತೆ ರೇವಣಾಪುರ ಮಠದಲ್ಲಿ ರಾಜೇಶ್ವರಿ, ಭುವನೇಶ್ವರಿ, ಸಚ್ಚಿದಾನಂದ ಹಾಗೂ ದಯಾನಂದರೆಂಬ ಮಕ್ಕಳ ಜನನವಾಯಿತು. ಇವರ ಪೈಕಿ ಕೊನೆಯವನಾಗಿರುವ ದಯಾನಂದನೇ ಮೊನ್ನೆ ತನ್ನಪ್ಪನ ಮಠಕ್ಕೆ ಉತ್ತರಾಧಿಕಾರಿಯಾಗಲು ಹೊರಟು ಫೇಲ್ ಆದವನು. ಇದರಿಂದಾಗಿ ಅಪ್ಪ-ಮಗನನ್ನು ಮುಂದಿಟ್ಟುಕೊಂಡು ಮಠದ 200 ಕೋಟಿ ರೂಪಾಯಿ ಆಸ್ತಿ ಕದಿಯಲು ಹೊರಟಿದ್ದ ಯಡ್ಡಿ ಗ್ಯಾಂಗ್‌ಗೂ ಈಗ ಕೊಂಚ ಹಿನ್ನಡೆಯಾಗಿದೆ.

ಮಠಕ್ಕಿದೆ ಸಖತ್ ಆಸ್ತಿ

ಮೂರುವರೆ ಶತಮಾನದಷ್ಟು ಹಳೆಯದಾದ ರೇವಣಾಪುರ ಮಠಕ್ಕೆ ಮೈಸೂರಿನ ಒಡೆಯರ್ ಆಳ್ವಿಕೆ ಕಾಲದಲ್ಲಿ ಹತ್ತಿರತ್ತಿರ ಎರಡು ಸಾವಿರ ಎಕರೆಯಷ್ಟು ಭೂಮಿಯನ್ನು ಉಂಬಳಿಯಾಗಿ ನೀಡಲಾಗಿತ್ತು. ಈ ಜಮೀನುಗಳೆಲ್ಲಾ ಹುಣಸಮಾರನಹಳ್ಳಿ, ಕೊಡಿಗಲಹಟ್ಟಿ, ಹೊಸಹಳ್ಳಿ, ಸುಗ್ಗಟ್ಟಿ, ಸಾತನೂರು, ಕಟ್ಟಿಗೇನಹಳ್ಳಿ, ಲಿಂಗಧೀರ ಗೊಲ್ಲಹಳ್ಳಿ ಎಂಬ ಏಳು ಹಳ್ಳಿಗಳಲ್ಲಿ ಹರಡಿಕೊಂಡಿದ್ದವು. ಈಗಲೂ ಇವೆಲ್ಲಾ ದೇವನಹಳ್ಳಿ ಏರ್‌ಪೋರ್ಟ್ ಸುತ್ತಮುತ್ತ ಇವೆ. ಈ ನಡುವೆ ಏನಾಯಿತೆಂದರೆ ರೇವಣಾಪುರ ಮಠದ ಜಮೀನುಗಳಲ್ಲಿ ವ್ಯವಸಾಯ ಮಾಡುತ್ತಿದ್ದ ನೂರಾರು ರೈತರು ಟೆನೆನ್ಸಿ ಕಾಯ್ದೆ ಯಡ್ಡಿ ಕೇಸ್ ಹಾಕಿ ಅರ್ಜಿ ನೀಡಿ ತಾವು ಉಳುತ್ತಿದ್ದ ಭೂಮಿಯನ್ನು ತಮ್ಮ ಹೆಸರಿಗೇ ಮಂಜೂರು ಮಾಡಿಸಿಕೊಂಡರು. ಒಂದಷ್ಟು ಭೂಮಿ ಇಂಡಿಯನ್ ಏರ್‌ಫೋರ್ಸ್‌ಗೆ ಹೋಯಿತು. ಆದರೂ ಮಠದ ಹತ್ತು ಪರ್ಸೆಂಟ್‌ನಷ್ಟು ಭೂಮಿ ಅಲ್ಲಲ್ಲಿ ಉಳಿದುಕೊಂಡಿತ್ತು. ಆ ಪೈಕಿ ಮಠ ಇರುವ ಹುಣಸಮಾರನಹಳ್ಳಿಯಲ್ಲೇ ಈಗಲೂ ಮೂವತ್ತೇಳು ಎಕರೆ ಜಮೀನು ಸ್ವಾಮಿಯ ಕೈಲೇ ಇದೆ. ಅಲ್ಲಿ ಇವನು ವೀರಶೈವ ಪೀಠ ಎಜುಕೇಷನ್ ಸೊಸೈಟಿ ಎಂಬ ಟ್ರಸ್ಟ್‌ನಡಿ ಶಾಲಾಕಾಲೇಜು ನಡೆಸುತ್ತಿದ್ದಾನೆ.



ಒಂದಷ್ಟು ಜಮೀನನ್ನು ಸೈಟುಗಳಾಗಿ ವಿಂಗಡಿಸಿ ರೇವಮ್ಮ ಮಾತ್ರವಲ್ಲ, ಆಕೆಯ ಅಕ್ಕತಂಗಿಯರಿಗೆ ಮತ್ತು ನೆಂಟರಿಷ್ಟರಿಗೆ ಹಂಚಿದ್ದಾನೆ. ಬಾಕಿ ಸೈಟುಗಳನ್ನು ಸಿಕ್ಕಿದವರಿಗೆಲ್ಲಾ ಮಾರಿ ಬಂದ ದುಡ್ಡನ್ನು ತನ್ನ ಪ್ರೇಯಸಿ ರೇವಮ್ಮಳಿಗೆ ಕೊಟ್ಟಿದ್ದಾನೆ. ಈ ಮಠಕ್ಕೆ ದೇವನಹಳ್ಳಿ ಹಾಗೂ ವಿಜಯಪುರ ಟೌನ್‌ಗಳಲ್ಲೂ ಕಮರ್ಷಿಯಲ್ ಪ್ರಾಪರ್ಟಿಗಳಿವೆ. ಟೆನೆನ್ಸಿ ಕಾಯ್ದೆಯಡಿ ಅರ್ಜಿ ಹಾಕದೆ ಉಳಿದಿರುವ ಆದರೆ ಈಗಲೂ ಮಠದ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವ ರೈತರೊಂದಿಗೆ 50:50 ರೀತಿ ಡೀಲ್ ಕುದುರಿಸಿ ಜಮೀನು ಪರಭಾರೆ ಮಾಡುವ ಕೆಲಸವೂ ಇಲ್ಲಿ ನಡೆಯುತ್ತಿದೆ.

ಪುಢಾರಿಗಳ ಕಣ್ಣು ಬಿತ್ತು

ಯಾವಾಗ ಶಿವಾಚಾರ್ಯ ಸ್ವಾಮಿಗೆ ಲಕ್ವಾ ಹೊಡೆದು ಹಾಸಿಗೆ ಹಿಡಿದನೋ ತಕ್ಷಣ ಹುಷಾರಾದ ಫ್ಯಾಮಿಲಿಯವರು ಮಠಕ್ಕೆ ಉತ್ತರಾಧಿಕಾರಿಯೊಬ್ಬನನ್ನು ತಂದು ಕೂರಿಸಲು ಪ್ಲಾನ್ ಮಾಡಿದರು. ಶಿವಾಚಾರ್ಯನ ಮೊದಲ ಮಗ ಸಚ್ಚಿದಾನಂದ ಗುಟ್ಕಾ ತಿನ್ನುತ್ತಾ ಬೀದಿಯಲ್ಲಿ ನಿಂತು ಪೋಲಿ ಮಾತಾಡಿಕೊಂಡು ತಿರುಗುವ ಉಡಾಳನಾದ್ದರಿಂದ ಅವನು ಪೀಠಾಧೀಶನಾಗುವುದು ಬೇಡ ಎಂದುಕೊಂಡರು. ಆಗ ಉಳಿದವನೇ ಈ ದಯಾನಂದ. ಈ ಹಂತದಲ್ಲಿ



ಶಿವಾಚಾರ್ಯ ಸ್ವಾಮಿ ಫ್ಯಾಮಿಲಿಯವರು ಎರಡು ಪ್ಲಾನ್ ಮಾಡಿದರು. ಒಂದು ದಯಾನಂದನನ್ನು ಮಠದ ಪೀಠಕ್ಕೆ ತರುವುದು. ಇನ್ನೊಂದು 200 ಕೋಟಿ ರೂ.ಗಿಂತ ಹೆಚ್ಚು ಬೆಳೆಬಾಳುವ ಮಠದ ಜಮೀನುಗಳನ್ನು ಹೋಲ್‌ಸೇಲಾಗಿ ಯಾರಿಗಾದರೂ ಜಿಪಿಎ ಮಾಡಿಕೊಟ್ಟು ದುಡ್ಡು ಮಾಡಿಕೊಳ್ಳುವುದು!

ಈ ಲ್ಯಾಂಡ್ ಡೀಲ್ ಕುದುರಿಸಲು ಸ್ವಾಮಿಜಿಯ ನೆಂಟರು ನೇರ ಯಡ್ಡಿ ಭಂಟರನ್ನೇ ಹುಡುಕಿದರು. ಅಧಿಕಾರವಿರುವ ಪವರ್‌ಫುಲ್ ರಾಜಕಾರಣಿಯೊಂದಿಗೆ ಡೀಲ್ ಕುದುರಿಸಿದರೆ ವ್ಯವಹಾರ ಸಲೀಸಾಗಿ ಮುಗಿದುಹೋಗಿಬಿಡುತ್ತದೆಂಬ ಆಸೆ ಅವರದಾಗಿತ್ತು. ವ್ಯವಹಾರ ಮಾತಾಡಿಕೊಂಡ ಮೇಲೆ ಯಡ್ಡಿ ಫ್ಯಾಮಿಲಿಯ ಜನ ಪಿಎ ಸ್ವಾಮಿಯನ್ನೇ ಮಠಕ್ಕೆ ಕಳುಹಿಸಿದರು. ಎಲ್ಲಾ ವ್ಯವಹಾರ ಕುದುರಿಸಿ ಮೊದಲು ಮಾರ್ಚ್ 21 ರಂದು ದಯಾನಂದನ ಪಟ್ಟಾಭಿಷೇಕವಾಗಲಿ ಎಂಬ

...ಾಯಿತು. ಅವತ್ತು
...ಶ್ವರ ಸ್ವಾಮಿಯ ರಥೋತ್ಸವ
...ದ ಅಧಿಕ ಜನ ಸೇರುವುದಿತ್ತು.
...ಂತವೀರಸ್ವಾಮಿ ಬೆಳ್ಳಾವಿ
... ರಾಚಾಪುರದ ಮಠಾಧೀಶ,
...ಮಠಾಧೀಶ ಮುಂತಾದ ಕೆಲ
...ಲಿಂಗಾಯತ ಸ್ವಾಮಿಗಳೂ
...ದರು. ರೇವಣಾಪುರ



ಶಿವಾಚಾರ್ಯ ಸ್ವಾಮಿ ಒಂದಷ್ಟು ಶಾಸ್ತ್ರ ...ಥಗಳನ್ನು ತಿಳಿದಿದ್ದ. ಸಿದ್ಧಗಂಗೆಯ ...ದ ಸ್ವಾಮಿಗಳನ್ನು ಬಿಟ್ಟರೆ ವಿದ್ಯೆಯಲ್ಲಿ ...ರ್ಣನೇ ಎರಡನೆಯವನೆಂಬ ಕೀರ್ತಿ ... ಆ ಗೌರವದಿಂದಲೇ ಮಾರ್ಚ್ 21 ...ಹೋತ್ಸವಕ್ಕೆ ಜನ ಸೇರಿದ್ದರು. ಆದರೆ ಭಕ್ತರಿಗೆ ... ವಿಚಾರ ತಿಳಿಸದೆ, ಯಾರಿಗೂ ಹೇಳದೆ ...ನನೇ ಮಠದ ಉತ್ತರಾಧಿಕಾರಿಯೆಂದು ಅಲ್ಲಿ ...ಮಾಡಿಬಿಟ್ಟರು. ಆಗ ಆ ಸ್ಥಳದಲ್ಲಿ ಖುದ್ದು ...ಸೇಬರ ಪಿಎ ಇದ್ದ. ಈ ಪಟ್ಟಾಭಿಷೇಕ



...ಂಡ ನಂತರ ಮಠದ ಅಧಿಕೃತ ...ಳೆಲ್ಲಾ ಶಿವಾಚಾರ್ಯನಿಂದ ಬದಲಿಸಿ ಅವನ ...ಯಾನಂದನ ಕೈಗೆ ತಲುಪಿಸುವ ಇರಾದೆ ಈ ...ತ್ತು. ಆದರೆ ಮಠದ ಭಕ್ತರಿಗೆ ಈ ...ಗೊತ್ತಿರಲಿಲ್ಲ, ಯಡ್ಡಿಯ ಪಿಎ ಅಲ್ಲಿದ್ದದ್ದೂ ... ಅವರಿಗಿದ್ದ ಸಿಟ್ಟೆಂದರೆ ಶಿವಾಚಾರ್ಯ ...ಗೇ ರೇವಮ್ಮಳನ್ನು ಇರಿಸಿಕೊಂಡು ಮಕ್ಕಳು ...ದೆ ಈಗ ತನ್ನ ಮಗನಿಗೇ ಮಠದ ...ದಿರಿ ಪಟ್ಟ ಕಟ್ಟುತ್ತಿದ್ದಾನಲ್ಲಾ ಎಂಬುದಾಗಿತ್ತು.

ಸರಿ, ದಯಾನಂದನ ಕಾವಿವೇಷ ನೋಡುತ್ತಿದ್ದಂತೆ ಅವನನ್ನು ಅಟ್ಟಿಸಿಕೊಂಡು ಹೋದ ಭಕ್ತರು ಕಾವಿಬಟ್ಟೆ ಕಿತ್ತು ಹಾಕಿದರು. ಹುಣಸಮಾರನಹಳ್ಳಿಯ ಚನ್ನವೀರಪ್ಪನವರ ಮೊಮ್ಮಕ್ಕಳು, ಎಚ್.ಆರ್. ಶಿವಯ್ಯ ಬಸವರಾಜಪ್ಪ ಕೊಡಿಗಲಟ್ಟ ಭೈರಪ್ಪ ನಂಜುಂಡಪ್ಪ ಸತ್ಯನಾರಾಯಣ, ಎಚ್.ಪಿ. ನಾರಾಯಣಸ್ವಾಮಿ, ಉತ್ತನಳ್ಳಿ ಬಸಣ್ಣ ಮುಂತಾದ ಮುಖಂಡರು ಅದ್ಯಾವಪರಿ ತಿರುಗಿಬಿದ್ದರೆಂದರೆ ಯಲಹಂಕ ಪೊಲೀಸರು ಕೈಕಟ್ಟಿ ನಿಂತರು. ಬೆಂಗಳೂರಿನಿಂದ ಬಂದಿದ್ದ ಪುಢಾರಿ ಲಿಂಗಾಯತ ಮಠಾಧೀಶರೂ ಹಾಗೂ ಯಡ್ಡಿ ಪಿಎ ಹೇಳದೆ ಕೇಳದೆ ಜಾಗಬಿಟ್ಟು ಓಡಿಹೋದರು. ಹೊಸ ಮಠಾಧೀಶನಾಗಬೇಕಿದ್ದ ದಯಾನಂದ ತನ್ನ ಕಾವಿ ವಸ್ತ್ರ ಕಳೆದುಕೊಂಡು ಚೆಡ್ಡಿ ಬನೀನಿನಲ್ಲಿಯೇ ಮಠದ ಅಡುಗೆ ಮನೇಲಿ ಬಚ್ಚಿಟ್ಟುಕೊಂಡ.

ಮತ್ತೊಂದೆಡೆ ಹಾಸಿಗೆ ವಾಸಿ ಶಿವಾಚಾರ್ಯ ಸ್ವಾಮಿ ತನ್ನ ಪ್ಲಾನ್ ಫೇಲ್ ಆಯಿತಲ್ಲ ಎಂದು ಗೋಳಾಡಿದ. ಮಠದ ಭಕ್ತರಿಗೆ ಹಾಸಿಗೆಯಿಂದಲೇ ರೋಫ್ ಹಾಕಲೆತ್ನಿಸಿದ.

"ಈ ಮಠ ನಂದು, ನನ್ನಿಷ್ಟ ಬಂದವರನ್ನ ಉತ್ತರಾಧಿಕಾರಿ ಮಾಡ್ತೀನಿ, ಮಠದ ಆಸ್ತಿ ವ್ಯವಹಾರ ದುಡ್ಡಿನ ಸರ್ವಾಧಿಕಾರವೂ ನನಗೇ ಸೇರಿದ್ದು" ಅನ್ನುತ್ತಿದ್ದಾನೆ. ಈ ಮಹಾನುಭಾವನಿಗೆ ತಾನು ಬದುಕಿರುವಾಗಲೇ ಮಗನಿಗೆ ಪಟ್ಟಕಟ್ಟಿ ಪ್ರೇಯಸಿ ಮತ್ತವಳ ಫ್ಯಾಮಿಲಿಗೆ ಒಂದಷ್ಟು ಆಸ್ತಿ-ಹಣ ಹಂಚಿ ಉಳಿದಿದ್ದನ್ನು ಯಾರಿಗಾದರೂ ದಾಟಿಸಿ ದುಡ್ಡು ಮಾಡಿಟ್ಟು ಬಿಟ್ಟರೆ ಸಾಕು ಅನಿಸಿದೆ. ಏನೋ ಆ ಮಠವೆಲ್ಲಾ ಅವರಪ್ಪನ ಮನೆಯ ಆಸ್ತಿಯೆಂಬಂತೆ!

ಸದ್ಯಕ್ಕೆ ಬಿಜೆಪಿ ಭಿನ್ನಮತೀಯರ ಕಾಟ, ವಿರೋಧ ಪಕ್ಷಗಳ ದಾಳಿ, ಲೋಕಾಯುಕ್ತರ ವಿಶೇಷ ಕೋರ್ಟ್‌ನಲ್ಲಿರುವ ಭ್ರಷ್ಟಾಚಾರದ ಕೇಸ್‌ಗಳಲ್ಲಿ ನಲುಗಿ ಹೋಗುತ್ತಿರುವ ಯಡ್ಡಿಗೆ ರೇವಣಾಪುರ ಮಠದ ಆಸ್ತಿ ಡೀಲ್ ಕೈಗೆ ಹತ್ತಿಲ್ಲ. ಆದರೆ ಯಡ್ಡಿ ಸಿಎಂ ಆಗಿ ಮುಂದುವರೆದರೆ ಇವತ್ತಲ್ಲ ನಾಳೆ ಮತ್ತೆ ಈ ಆಸ್ತಿ ಡೀಲ್‌ಗೆ ಕೈ ಹಾಕದೆ ಸುಮ್ಮನಿರುವುದಿಲ್ಲ.

ಕಳ್ಳ ಸಿಎಂಗೆ ಕಾದಿದೆ ಅರೆಸ್ಟ್

ಮುಖ್ಯಮಂತ್ರಿ ಯಡಿಯೂರಪ್ಪನ ದಟ್ಟಾಳಿಕೆ, ಭ್ರಷ್ಟಾಚಾರಗಳ ದುರಾಡಳಿತ ಕೊನೆ ಯಾಗುವಂತೆ ಕಾಣುತ್ತಿದೆ. ಲೋಕಾಯುಕ್ತ ವಿಶೇಷ ಕೋರ್ಟ್ ಯಡ್ಡಿ ವಿರುದ್ಧ ಭ್ರಷ್ಟಾಚಾರದ ಎಫ್‌ಐಆರ್ ದಾಖಲಿಸಿಕೊಂಡು ಮುಂದಿನ ಮೇ 4 ರೊಳಗೆ ವರದಿ ನೀಡುವಂತೆ ಲೋಕಾಯುಕ್ತ ಪೊಲೀಸರಿಗೆ ಆದೇಶ ನೀಡಿರುವುದು ಯಡ್ಡಿಗೆ ಕೊನೆಗಾಲ ಬರುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಈಗ ದೆಹಲಿ ಯಲ್ಲಿರುವ ಬಿಜೆಪಿ ಭಿನ್ನಮತೀಯ ರಿಗಂತೂ ಕೋರ್ಟ್ ಆದೇಶ ಕೇಳಿ ಹಂಡೆ ಹಾಲು ಕುಡಿದಷ್ಟು ಸಂತೋಷವಾಗಿದೆ. ಅವರು ಈ ಬಾರಿ ಬರಿಗೈನಲ್ಲಿ ಹಿಂತಿರುಗಿ ಬರಲಾರರು.



ಒಂದೋ ಯಡ್ಡಿಯೇ ಈಗ ರಾಜೀನಾಮೆ ನೀಡಿ ತೊಲಗಬೇಕು ಅಥವಾ ಬಿಜೆಪಿ ಹೈಕಮಾಂಡ್ ಯಡ್ಡಿಯನ್ನು ಕಿತ್ತು ಹಾಕಿ ಬೇರೆ ಮುಖ್ಯಮಂತ್ರಿಯನ್ನು ತರಬೇಕು- ಇವೆರಡೇ ಸದ್ಯಕ್ಕಿರುವ ಆಯ್ಕೆಗಳು.

ಆದರೆ ಇದ್ಯಾವುದೂ ಕಾನೂನಿನ ಕುಣಿಕೆಯಿಂದ ಹಾಗೂ ಅಕಸ್ಮಾತ್ ಅರೆಸ್ಟೂ ಆಗಿಬಿಡಬಹುದಾದ ಸಾಧ್ಯತೆಯಿಂದ ಯಡ್ಡಿಯನ್ನು ಬಚಾವು ಮಾಡಲಾರದು. ಕೋರ್ಟ್ ಯಡ್ಡಿಯ ಭ್ರಷ್ಟಾಚಾರ ಕುರಿತಂತೆ ಏನನ್ನು ಸತ್ಯ ಎಂದಿದೆಯೋ ಅದು ಕರ್ನಾಟಕದ ಜನತೆಗೆ ಮೊದಲಿನಿಂದಲೂ ಗೊತ್ತಿದ್ದ ವಿಷಯವೇ ಆಗಿದೆ. ಆದರೂ ಬಿಜೆಪಿ ಹೈಕಮಾಂಡ್‌ನ ಅಡ್ವಾಣಿ, ಸುಷ್ಮಾಸ್ವರಾಜ್ ಹಾಗೂ ನಿತಿನ್‌ಗಡ್ಕರಿ ಯಡ್ಡಿಗೇ ಬೆಂಬಲ ಕೊಡುತ್ತಾ ಬಂದಿದ್ದರು. ಹಾಗಾಗಿ ಈಗಿನ ಕೋರ್ಟ್ ಆದೇಶ ಕೇವಲ ಯಡ್ಡಿಗೆ ಮಾತ್ರವಲ್ಲ ಬಿಜೆಪಿಯ ದೆಹಲಿ ನಾಯಕರಿಗೂ ಕಪಾಳ ಮೋಕ್ಷ ಮಾಡಿದಂತಾಗಿದೆ.

ಈ ಹಿಂದಿನ ಬಿಕ್ಕಟ್ಟುಗಳೆಲ್ಲಾ ರೆಡ್ಡಿ ಗ್ಯಾಂಗ್, ಭಿನ್ನಮತೀಯರದ್ದು ಅಥವಾ ವಿರೋಧ ಪಕ್ಷಗಳ ಪ್ರತಿಭಟನೆಗಳಿಂದ ಉಂಟಾಗುತ್ತಿದ್ದವು. ಆಗ ಏನೇನೊ ಸರ್ಕಸ್ ನಡೆಸಿ ಬಚಾವಾಗುತ್ತಿದ್ದ ಯಡ್ಡಿಗೆ ಈಗ ಎಲ್ಲಿಯೂ ಬಚಾವಾಗುವ ಹಾದಿಯಿಲ್ಲ. ಒಂದು ಕಡೆ ಪಕ್ಕಾ ಹೋಂವರ್ಕ್ ಮಾಡಿಕೊಂಡೇ ದೂರು ದಾಖಲಿಸಿರುವ ಸಿರಾಜಿನ್‌ಭಾಷಾ ಮತ್ತು ಬಾಲರಾಜ್ ಎಂಬ ವಕೀಲ ಕಂಪ್ಲೇಂಟ್‌ದಾರರು, ಅವರೊಂದಿಗೆ ಸಿ.ಎಚ್. ಹನುಮಂತರಾಯ, ನಿತಿನ್-ರಂಗನಾಥ್ ಎಂಬ ವಕೀಲರ ಟೀಂ, ಮತ್ತೊಂದೆಡೆ ಖಡಕ್ಕಾಗಿರುವ ಲೋಕಾಯುಕ್ತ ಪೊಲೀಸರು... ಇವರೆಲ್ಲಾ ಒಟ್ಟಿಗೆ ಸೇರಿದರೆ ಯಡ್ಡಿಗೆಲ್ಲಿ ಬಿಡುಗಡೆ.

ಮಾಡಬಾರದ್ದನ್ನು ಮಾಡಿದರೆ ಆಗಬಾರದ್ದೇ ಆಗುತ್ತದೆ ಬಿಡಿ.

ಅರೆಸ್ಟ್ ಸಾಧ್ಯತೆ?

ಈಗಿನ ಕಾನೂನಿನ ಪ್ರಕಾರ ಕೋರ್ಟ್ ಆದೇಶದ ಪ್ರತಿ ಲೋಕಾಯುಕ್ತರಿಗೆ ತಲುಪಿದ ತಕ್ಷಣ ಅಲ್ಲಿ ಯಡ್ಡಿ ವಿರುದ್ಧ ಎಫ್‌ಐಆರ್ ದಾಖಲಾಗುತ್ತದೆ. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ 1988 ರ ಸೆಕ್ಷನ್ 19(3) ಇತ್ಯಾದಿಯಡಿ ಆರೋಪಿ ಯಡ್ಡಿ ಯನ್ನು ಬಂಧಿಸುವ ಅವಕಾಶಗಳೂ ಇವೆ.

ಆದರೆ ಅದನ್ನು ನಿರ್ಧರಿ ಸಬೇಕಾದ್ದು ಲೋಕಾಯುಕ್ತ ಎಸ್.ಪಿ. ಮಧುಕರ ಶೆಟ್ಟಿ. ತಮ್ಮ ಪೊಲೀಸ್ ಕೆಲಸದ ಕರಿಯರ್ ನುದ್ದಕ್ಕೂ ಪ್ರಾಮಾಣಿಕತೆಯಿಂದ ಕೆಲಸ ಮಾಡಿಕೊಂಡು ಬಂದಿರುವ ಮಧುಕರ ಶೆಟ್ಟಿಯವರಿಗೆ ಇದೊಂದು ಸವಾಲಿನ ಕೇಸಾಗಿದೆ. ಮೇ 4 ರೊಳಗೆ ಅಂದರೆ ಮುಂದಿನ 45 ದಿನ ದೊಳಗಾಗಿ ತನಿಖೆ ಮುಗಿಸಿ ಕೋರ್ಟ್‌ಗೆ ವರದಿ ಸಲ್ಲಿಸುವಾಗ ಗ್ಯಾರಂಟಿಯಾಗಿ ಯಡ್ಡಿಯ ಭಂಟ ಕೃಷ್ಣಯ್ಯ ಶೆಟ್ಟಿ, ಆದರ್ಶ ಡೆವಲಪರ್ಸ್‌ನ ಜಯಶಂಕರ್ ಯಡ್ಡಿ ಮಕ್ಕಳಾದ ರಾಘವೇಂದ್ರ, ವಿಜಯೇಂದ್ರರಿಗೂ ಒಂದು ಗತಿ ಕಾದಿರುತ್ತದೆ.

ಯಡ್ಡಿಯ ಬಂಧನದ ಸಾಧ್ಯತೆಯನ್ನು ತಳ್ಳಿ ಹಾಕಲು ಸಾಧ್ಯವಿಲ್ಲ.ಯಾಕೆಂದರೆ ಬಿಹಾರಿನ ಲಾಲೂ, ತಮಿಳುನಾಡಿನಲ್ಲಿ ಜಯಲಲಿತಾ ಹಾಗೂ ಜಾರ್ಖಂಡ್‌ನಲ್ಲಿ ಮಧುಕೋಡ ಕೂಡ ಸಿಎಂ, ಮಾಜಿ ಸಿಎಂ ಎನಿಸಿಕೊಂಡ ಮೇಲೂ ಭ್ರಷ್ಟಾಚಾರದ ಆರೋಪದಡಿ ಅರೆಸ್ಟಾಗಿದ್ದಾರೆ.

ಈಶ್ವರಪ್ಪ ದಿಲ್‌ಖುಷ್

ಯಡ್ಡಿ ವಿರುದ್ಧ ಹೊಸ ಬಂಡಾಯದ ನಾಯಕತ್ವ ವಹಿಸಿರುವ ಈಶ್ವರಪ್ಪ ಈಗಿನ ಲೋಕಾಯುಕ್ತ ಕೋರ್ಟ್‌ನ ಆದೇಶವನ್ನು ರೆಫರ್ ಮಾಡುತ್ತಾ ಯಡ್ಡಿ ತಲೆದಂಡಕ್ಕೆ ಪಟ್ಟು ಹಿಡಿಯುತ್ತಿರುವ ಸುದ್ದಿ ದೆಹಲಿಯಿಂದ ಬರುತ್ತಿದೆ. ಜೊತೆಗೆ ರೆಡ್ಡಿಗಳು, ಶೆಟ್ಟರ್, ಸಿ.ಟಿ. ರವಿ ಹಾಗೂ ಅನಂತ್‌ಕುಮಾರ್‌ಗೂ ಅರ್ಜೆಂಟಾಗಿ ಯಡ್ಡಿ ರಾಜೀನಾಮೆ ಬೇಕಿದೆ. ಯಡ್ಡಿ ಕಾರಣದಿಂದಾಗಿ ಪಾರ್ಲಿಮೆಂಟ್‌ನಲ್ಲೂ ಕಾಂಗ್ರೆಸ್‌ನ ಭ್ರಷ್ಟಾಚಾರಗಳ ವಿರುದ್ಧ ಖಡಕ್ಕಾಗಿ ಮಾತನಾಡಲಾಗದೆ ಹಿಂಜರಿಯುತ್ತಿದ್ದ ಕೇಂದ್ರ ಬಿಜೆಪಿ ಲೀಡರ್‌ಗಳಿಗೂ ಯಡ್ಡಿಯ ಸಹವಾಸ ಸಾಕೆನಿಸಿಬಿಟ್ಟಿದೆ.

ನ್ಯಾಷನಲ್ ಮೀಡಿಯಾಗಳಂತೂ ಬಿಟ್ಟುಬಿಡದೆ ಯಡ್ಡಿಯ ಜನ್ಮ ಜಾಲಾಡುತ್ತಿರುವುದಂತೂ ಅಡ್ವಾನಿಗೆ ನುಂಗಲಾರದ ತುತ್ತು.

ಯಡ್ಡಿ ಜೊತೆ ಯಾರ್‍ಯಾರು?

ಸ್ವತಃ RSS ನಾಯಕರೇ ಈಗ ಯಡ್ಡಿ ಬೆಂಬಲಕ್ಕಿಲ್ಲ. ಯಡ್ಡಿ ಸರ್ಕಾರದ ಮೂಲಕ RSSಗೆ 'ಕಾರ್ಯಕರ್ತರಿಗೆ' ಬ್ರಾಹ್ಮಣ ಮಠಗಳಿಗೆ ಸಾವಿರಾರು ಕೋಟಿ ರೂಪಾಯಿಗಳ ಆಸ್ತಿ, ಅನುಕೂಲಗಳನ್ನು ಗಿಟ್ಟಿಸಿರುವ ಸಂಘ ಪರಿವಾರಿಗಳಿಗೂ ಈ ತಕ್ಷಣಕ್ಕೆ ಯಡ್ಡಿಯಿಂದ ದೂರ ನಿಲ್ಲಬೇಕಿದೆ. ಹಾಗೆ RSS ಗ್ರೀನ್ ಸಿಗ್ನಲ್ ನೀಡಿದ ಮೇಲೆಯೇ ಈಶ್ವರಪ್ಪ ಗ್ಯಾಂಗ್ ಯಡ್ಡಿ ವಿರುದ್ಧ ಬಂಡಾಯ ಘೋಷಿಸಿದ್ದು.

...ಗಾಯತ ಶಿವಾಚಾರ್ಯ ಸ್ವಾಮಿಯ ...ಯಸಿಯರೂ ಮತ್ತವರ ಮಕ್ಕಳು!

...ಲ ಹಾಗೂ ರಂಭಾಪುರಿ ಸಂಸ್ಥಾನದ ...ವಾಗಿರುವ ರೇವಣಾಪುರ ಮಠದ ಪೀಠಾಧೀಶ ...ರ್ವತರಾಜ ಶಿವಾಚಾರ್ಯ ಸ್ವಾಮಿ ಮಹಾನ್ .

...ಸಹಾಯಕನಾಗಿದ್ದ ಉತ್ತನಹಳ್ಳಿ ಗಂಗಾಧರಪ್ಪ ... ಅವನ ಹೆಂಡತಿ ರೇವಮ್ಮಳ ಜೊತೆಗೇ ಸಂಬಂಧವಿರಿಸಿಕೊಂಡಿದ್ದ. ಈ ಸಂಬಂಧದಲ್ಲಿ ...ಬ್ಬರು ಮಕ್ಕಳಾದವು. ನಂತರ ...ತಂಗಿ ಪುಟ್ಟಮ್ಮ ಎಂಬುವಳನ್ನು ...ರಿಸಿಕೊಂಡು ಇಟ್ಟುಕೊಂಡ. ...ಂದಿಗೂ ಸಂಬಂಧ ಬೆಳೆಸಿ ...ಲ್ಲೂ ಸ್ವಾಮೀಜಿಗೆ ನಂದ, ...ಬ ಮಕ್ಕಳಾದರು. ಈ ನಡುವೆ ... ಅಮ್ಮ ಮಲ್ಲಮ್ಮ ಮತ್ತು ...ದ ಗೌರಿ, ಶಾರದ, ಅಂಬಿಕಾ ...ಣಾಪುರ ಮಠಕ್ಕೆ ಬಂದು ಅಲ್ಲೇ ...ಬಿಟ್ಟರು. ಇವರೆಲ್ಲಾ ಮಠಕ್ಕೆ ...ಲೆ ಮಠದವರು ನಡೆಸುತ್ತಿದ್ದ ...ಸಿ ವಿದ್ಯಾರ್ಥಿಗಳನ್ನು ಹೊರ ...ಶಿವಾಚಾರ್ಯ ಸ್ವಾಮಿಯನ್ನು ...ನಲ್ಲಿ ಹಿಡಿದಿಟ್ಟುಕೊಂಡಿದ್ದ ...ಮಠದ ದುಡ್ಡಿನಿಂದಲೇ ತನ್ನ ತಂಗಿಯರ ಮದುವೆ ಮಾಡಿದಳು. ಮೊದಲ ...ಳ ಗಂಡ ವಿಶ್ವನಾಥ ಮಠದ ವ್ಯವಹಾರದಲ್ಲಿ ...ಕೊಂಡಿದ್ದ, ಸ್ವಾಮೀಜಿಯ ಎರಡನೇ ಮಗಳು ...ಯ ಗಂಡ, ಸ್ವಾಮೀಜಿಯ ನಾದಿನಿ ಅಂಬಿಕಾಳ ...ರ್ ಶಿವಕುಮಾರ್ ಹೀಗೆ ಎಲ್ಲರೂ ಸಿಕ್ಕಸಿಕ್ಕಲೆಲ್ಲಾ ...ನ ನುಂಗತೊಡಗಿದರು. ಮಠದ ಜಮೀನನ್ನು ...ಗೆ ಬದಲಿಸಿ ತಾವೂ ಮನೆ ಕಟ್ಟಿಕೊಂಡರು. ...ಗೂ ಸೈಟು ಮಾಡಿ ದುಡ್ಡು ಕದ್ದರು... ಈ ...ದ ಶಿಕ್ಷಣ ಸಂಸ್ಥೆ ವೀರಶೈವ ಮಠ ಎಜುಕೇಶನ್



ಸೊಸೈಟಿ ಟ್ರಸ್ಟ್‌ಗೆ ಶಿವಾಚಾರ್ಯ ಸ್ವಾಮಿ ತನ್ನ ಅನಧಿಕೃತ ಪುತ್ರಿ ರಾಜೇಶ್ವರಿಯನ್ನೇ ಅಧ್ಯಕ್ಷೆಯಾಗಿ ಕೂರಿಸಿದ. ಅನಧಿಕೃತ ಪುತ್ರರತ್ನ 'ದಯಾನಂದನನ್ನೇ ಮಠದ ಉತ್ತರಾಧಿಕಾರಿ ಮಾಡಲು ಹೋಗಿ ಸಮಾ ಒದೆ ತಿಂದಿದ್ದಾನೆ. ಈ ದಯಾನಂದನಿಗೆ ಪರ್ವತ ನಂಜ ಒಡೆಯರ್ ಎಂಬ ಹೊಸ ಹೆಸರಿಟ್ಟು ಪೀಠಕ್ಕೆ ತರಲು ಶಿವಾಚಾರ್ಯ ರೆಡಿಯಾಗಿದ್ದ, ತನ್ನ ಮಠದ ಆಸ್ತಿ ಇತ್ಯಾದಿಗೆ ಸಂಬಂಧಿಸಿದಂತೆ ಸನ್ನದು (ವಿಲ್) ಸಹ ಬರೆದಿಟ್ಟಿದ್ದ.

ಆದರೆ ಹುಣಸಮಾರನಹಳ್ಳಿಯ ಜನ ಸ್ವಾಮಿ ವಿರುದ್ಧ ದಂಗೆಯೆದ್ದು ದಯಾನಂದ ನಿಗೆ ಒದ್ದು ಸನ್ನದನ್ನು ಹರಿದೆಸೆದಿದ್ದಾರೆ. ಅದೇ ಗ್ರಾಮದ ಮಲ್ಲಿಕಾರ್ಜುನ ನೆಂಬುವನು ಮಠದ ಶಾಲೆಯಲ್ಲಿ ಟೈಪಿಸ್ಟ್ ಕೆಲಸ ಮಾಡುತ್ತಿದ್ದರೂ ತಾನೊಬ್ಬ ಲೆಕ್ಚರರ್ ಎಂದು ಸುಳ್ಳು ಹೇಳಿಕೊಂಡು ತಿರುಗು ತ್ತಿರುತ್ತಾನೆ. ಮಠದೊಳಗಿನ ಅನೇಕ ದುರಾ ಚಾರಗಳಿಗೆ ಈ ಟೈಪಿಸ್ಟ್ ಮಲ್ಲಿಕಾರ್ಜು ನನ ಕುಮ್ಮಕ್ಕೇ ಜಾಸ್ತಿಯಿದೆ.

ಈ ಶಿವಾಚಾರ್ಯ ಸ್ವಾಮೀಜಿ ಮತ್ತವನ ಪ್ರೇಯಸಿಯರು ಮತ್ತವರ ಸಂತಾನವನ್ನು ಹೀಗೆ ಇರಲು ಬಿಟ್ಟರೆ ರೇವಣಾಪುರ ಮಠ ಸ್ಮಶಾನವಾಗುವ ದಿನ ದೂರವಿಲ್ಲ. ಅದೇ ರೀತಿ ನೂರಾರು ಕೋಟಿ ರೂಪಾಯಿ ಬೆಲೆಬಾಳುವ ಮಠದ ಆಸ್ತಿಯು ಕಳ್ಳಕಾಕರ ಪಾಲಾಗುವುದು ಗ್ಯಾರಂಟಿ.

ಮಠದ ಭಕ್ತರು ಹಾಗೂ ಹುಣಸಮಾರನಹಳ್ಳಿಯ ಜನ ಧೈರ್ಯದಿಂದ ಮುಂದೆ ನಿಂತು ಲಂಪಟ ಸ್ವಾಮಿ ಶಿವಾಚಾರ್ಯನಿಗೆ, ಅವನ ಪ್ರೇಯಸಿಯರಿಗೆ, ಅಕ್ರಮ ಸಂತಾನಕ್ಕೆ ಒದ್ದು ಬುದ್ಧಿ ಕಲಿಸಬೇಕಿದೆ. ಅದೇ ರೀತಿ ಮಠದ ಆಸ್ತಿ ಯಡ್ಡಿಯಾಗಲಿ ಇನ್ಯಾರೇ ಬ್ರೋಕರ್‌ಗಳ ಪಾಲಾಗದಂತೆ ನೋಡಿಕೊಳ್ಳಬೇಕಿದೆ.


ಬಿಜೆಪಿ ಹೈಕಮಾಂಡ್ ಲೆಕ್ಕಾಚಾರ

ಯಡ್ಡಿ ಸಿಎಂ ಆಗಿ ಮುಂದುವರೆಯುವುದು ಈಗ ಬಿಜೆಪಿಯ ಶಾಸಕರಿಗಾಗಲಿ, ಬಹುತೇಕ ಸಚಿವರಿಗಾಗಲಿ ಕೊನೆಗೆ ಹೈಕಮಾಂಡ್‌ಗೂ ಬೇಕಿಲ್ಲ. ಆದರೆ ಹಾಗೆಂದು ಏಕಾಏಕಿ ಯಡ್ಡಿಯನ್ನು ಕಿತ್ತೊಗೆಯುವ ಸ್ಥಿತಿಯಲ್ಲಿ ದೆಹಲಿ ನಾಯಕರಿಲ್ಲ. ಅತ್ತ ಪಕ್ಷದ ಮರ್ಯಾದೆಯೂ ಉಳಿಯಬೇಕು, ಇತ್ತ ಕರ್ನಾಟಕದಲ್ಲಿರುವ ಬಿಜೆಪಿ ಸರ್ಕಾರಕ್ಕೆ ಹಾನಿಯಾಗದಂತೆ ಯಡ್ಡಿಯನ್ನು ಆಚೆ ಕಳಿಸಬೇಕು.

ಇದಿಷ್ಟೇ ಅವರ ಮುಂದಿರುವ ಅಜೆಂಡಾ. ಈ ಹಿನ್ನೆಲೆಯಲ್ಲಿ ಅಕಸ್ಮಾತ್ ಯಡ್ಡಿ ಅಧಿಕಾರದಿಂದ ಇಳಿಯದೆ ಬಿಜೆಪಿ ವಿರುದ್ಧವೇ ತಿರುಗಿಬಿದ್ದರೆ ಅದಕ್ಕೂ ಒಂದು ತಾತ್ಕಾಲಿಕ ಪರಿಹಾರವನ್ನು ಬಿಜೆಪಿ ನಾಯಕರು ಯೋಚಿಸಿದ್ದಾರೆ.

ಅದು ಜೆಡಿಎಸ್‌ನೊಂದಿಗೆ ಮರುಮೈತ್ರಿ ಸಾಧಿಸುವುದು. ಸಂಸದ ಅನಂತ್‌ಕುಮಾರ್ ಯಾವುದೇ ಸಂದರ್ಭಕ್ಕೂ ರೆಡಿಯಾಗಿರುವಂತೆ ಕುಮಾರಸ್ವಾಮಿಗೆ ಕೋರಿರುವ ಸುದ್ದಿಯಿದೆ. ಆದರೆ ಯಡ್ಡಿ ಈಗಲೂ ರಾಜೀನಾಮೆ ಕೊಡುವುದಿಲ್ಲ ಎನ್ನುತ್ತಿರುವುದನ್ನು ನೋಡಿದರೆ ಕರ್ನಾಟಕದಲ್ಲಿ ಬಿಜೆಪಿಗೆ ಇನ್ನು ಭವಿಷ್ಯವಿರುವಂತಿಲ್ಲ.


ಪಾಪದಲ್ಲಿ ಪಾಲುದಾರರು



ಯಡ್ಡಿಯ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ಆತನ ಮಕ್ಕಳಾದ ರಾಘವೇಂದ್ರ, ವಿಜಯೇಂದ್ರ, ಅಳಿಯ ಸೋಹನ್ ಮಾತ್ರ ಫಲಾನುಭವಿಗಳಾಗಿಲ್ಲ. ಸಚಿವ ನಿರಾಣಿ, ರೇಣುಕಾಚಾರ್ಯ, ಸೋಮಣ್ಣ ಆಚಾರ್ಯ, ಅಶೋಕ್, ಶೋಭಾ ಮುಂತಾದವರೆಲ್ಲಾ ತಮ್ಮ ಶಕ್ತ್ಯಾನುಸಾರ ಲೂಟಿ ಹೊಡೆದಿದ್ದಾರೆ. ಮಾಜಿ ಸಚಿವ ಕೃಷ್ಣಯ್ಯ ಶೆಟ್ಟಿಯಂತೂ ತೀರಾ ಪಿಕ್‌ಪಾಕೆಟ್ ಲೆವೆಲ್‌ನ ಭ್ರಷ್ಟಾಚಾರ ನಡೆಸಿ ಯಡ್ಡಿಯನ್ನು ಅದರಲ್ಲಿ ಸಿಕ್ಕಿಸಿಬಿಟ್ಟಿದ್ದಾನೆ.

ಮತ್ತೊಂದೆಡೆ ಕಾರ್ಪೊರೇಟ್ ಖದೀಮರಾದ ಆದರ್ಶ ಡೆವಲಪರ್ಸ್‌ನ ಜಯಶಂಕರ, ಪಿಇಎಸ್ ಶಿಕ್ಷಣ ಸಂಸ್ಥೆಯ ದೊರೆಸ್ವಾಮಿ ನಾಯ್ಡು ಯಡ್ಡಿಯ ಅಧಿಕಾರ ಬಲ ಬಳಸಿ ನಡೆಸಿರುವ ಹಗರಣಗಳೇ ಬೆಟ್ಟದಷ್ಟಿವೆ. ಇದಿಷ್ಟೇ ಅಲ್ಲದೆ ರಾಜ್ಯದ ಲಿಂಗಾಯತ ಮಠಾಧೀಶರ ಪೈಕಿ ಕೆಲವರು ಯಡ್ಡಿಗೇ ಬೆಂಬಲ ಕೊಡುತ್ತಾ ನ್ಯಾಯ-ಧರ್ಮಕ್ಕೆ ಅರ್ಥವೇ ಇರದಂತೆ ಮಾಡಿಬಿಟ್ಟಿದ್ದಾರೆ. ಅದರಲ್ಲೂ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮಿ ಅವಿವೇಕಿಯಂತೆ ಇಷ್ಟು ದಿನ ಯಡ್ಡಿಯ ಬೆನ್ನಿಗೆ ನಿಂತಿದ್ದಂತೂ ಅಕ್ಷಮ್ಯ ಅಪರಾಧ. ಈಗಲಾದರೂ ಈ ಧರ್ಮಗುರುಗಳು ಕಾನೂನು ತನ್ನ ಕೆಲಸ ಮಾಡಲು ಬಿಟ್ಟುಕೊಟ್ಟು ಬಾಯಿಮುಚ್ಚಿಕೊಂಡು ಕೂರಬೇಕಿದೆ.

ಅರಣ್ಯ ಅಭಿವೃದ್ಧಿಯ ಹೆಸರಲ್ಲಿ ಲಕ್ಷಗಳ ಲೂಟಿ ಲೋಕಾಯುಕ್ತ ಬಲೆಗೆ ಕೊಳ್ಳೇಗಾಲ DFO



ಗಡಿ ಜಿಲ್ಲೆಯಾದ ಚಾಮರಾಜನಗರದಲ್ಲಿ ಎಲ್ಲಾ ರೀತಿಯ ನೈಸರ್ಗಿಕ ಸಂಪತ್ತು ತುಂಬಿತುಳುಕುತ್ತಿದ್ದರೂ ಇದು ರಾಜ್ಯದಲ್ಲೇ ಅತಿ ಹಿಂದುಳಿದ ಜಿಲ್ಲೆಯಾಗಿರುವುದಕ್ಕೆ ಕಾರಣ ಈ ಜಿಲ್ಲೆಯನ್ನು ಮುಕ್ಕಿ ತಿನ್ನುತ್ತಿರುವ ಭ್ರಷ್ಟ ಅಧಿಕಾರಿಗಳು!

ಅಂತಹ ಅಧಿಕಾರಿಗಳ ಸಂಕೇತದಂತಿದ್ದಾನೆ ಮೊನ್ನೆ ಮಾರ್ಚ್ 20 ರಂದು ಲೋಕಾಯುಕ್ತದವರ ಬಲೆಗೆ ಮಾಲು ಸಮೇತ ಸಿಕ್ಕಿ ಬಿದ್ದ ಅರಣ್ಯಾಧಿಕಾರಿ ಡಿ.ಎಫ್.ಓ ನಾರಾಯಣಸ್ವಾಮಿ!

ಮೂಲತಃ ಕೋಲಾರದವನಾದ ಈ ನಾರಾಯಣಸ್ವಾಮಿ ಮೂರು ವರ್ಷಗಳ ಹಿಂದೆ ಕೊಳ್ಳೇಗಾಲದ ಪ್ರಾದೇಶಿಕ ವಲಯ ಅರಣ್ಯ ಉಪಸಂರಕ್ಷಣಾಧಿಕಾರಿಯಾಗಿ ವಕ್ಕರಿಸಿದ. ಬಂದ ಹೊಸದರಲ್ಲಿ ತನ್ನ ವ್ಯಾಪ್ತಿಗೆ ಬರುವ ಎಲ್ಲಾ ಅರಣ್ಯ ಪ್ರದೇಶಗಳನ್ನು ಇಂಚಿಂಚೂ ಬಿಡದೆ ಪರಿಚಯ ಮಾಡಿಕೊಂಡ. ಕೇವಲ ಆರೇ ತಿಂಗಳುಗಳಲ್ಲಿ ತನ್ನ ವ್ಯಾಪ್ತಿಗೆ ಬರುವ ಅರಣ್ಯ ಪ್ರದೇಶದಲ್ಲಿ ಎಲ್ಲೆಲ್ಲಿ ಏನೇನಿದೆ ಎಂಬುದನ್ನು ಸಂಪೂರ್ಣವಾಗಿ ಅರೆದು ಕುಡಿದು. ಅದಾದನಂತರ ಶುರುವಾದದ್ದೆ ಈ ನಾರಾಯಣನ ನವರಂಗಿ ಆಟ!

ಕುರುಬ ಸಮುದಾಯದವನಾದ ಈ ನಾರಾಯಣಸ್ವಾಮಿ ಎಂತಹ ಘಟಿಂಗನೆಂದರೆ ಮೊದಲು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯನವರೇ ತನ್ನ ಗಾಡ್‌ಫಾದರ್ ಎಂದು ಜಂಭ ಕೊಚ್ಚಿಕೊಳ್ಳುತ್ತಿದ್ದ. ಆದರೆ ಯಾವಾಗ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದು ಸಿ.ಹೆಚ್.ವಿಜಯಶಂಕರ್ ಅರಣ್ಯ ಮಂತ್ರಿಯಾದರೋ ಆಗ ಈತ ತನ್ನ ನಿಷ್ಠೆಯನ್ನು ಬದಲಾಯಿಸಿ ಮಂತ್ರಿ ವಿಜಯಶಂಕರ್ ಅವರ ಹಿಂದೆಮುಂದೆ ನಾಯಿಯಂತೆ ಬಾಲ ಅಲ್ಲಾಡಿಸುತ್ತಾ ಸುತ್ತಾಡಲಾರಂಭಿಸಿದ. ಅಷ್ಟೇ ಆಗಿದ್ದರೆ ಪರವಾಗಿರಲಿಲ್ಲ, ಆದರೆ ಈತ "ಅರಣ್ಯ ಮಂತ್ರಿಯ ಆಶೀರ್ವಾದವೇ ನನ್ನ ಮೇಲಿರುವಾಗ ನನಗೆ ಇನ್ನು ಯಾರ ಭಯ" ಎಂದು ಹೇಳುತ್ತಾ ತನ್ನ ವ್ಯಾಪ್ತಿಗೆ ಬರುವ ಕೊಳ್ಳೇಗಾಲ, ಮಲೆಮಹದೇಶ್ವರಬೆಟ್ಟ, ರಾಮಾಪುರ, ಹನೂರು ಹಾಗೂ ಗುಂಡ್ಲುಪೇಟೆಯ ಅರಣ್ಯದೊಳಗಿರುವ ಸಂಪತ್ತನ್ನೆಲ್ಲಾ ಮುಂಡಾಮೋಚ ತೊಡಗಿದ.

ಅರಣ್ಯ ಅಭಿವೃದ್ಧಿ ಕಾಮಗಾರಿಗಳಿಗೆಂದು ಸರ್ಕಾರದಿಂದ ಕೋಟ್ಯಾಂತರ ರೂಪಾಯಿ ಬರುತ್ತದೆ. ಆ ಹಣವನ್ನೆಲ್ಲ ಈ ನಾರಾಯಣಸ್ವಾಮಿ ತನ್ನ ಮಾತುಕೇಳುವವರಿಗೆ ಮತ್ತು ತನಗೆ ಹೆಚ್ಚು ಕಮಿಷನ್ ಕೊಡುವ ಕಾಂಟ್ರಾಕ್ಟುದಾರರಿಗೆ ಕೊಟ್ಟು ಲಕ್ಷಾಂತರ ರೂಪಾಯಿ ಕಮಾಯಿ ಪಡೆಯುತ್ತಿದ್ದ. ಅಷ್ಟೇ ಅಲ್ಲ, ಅರಣ್ಯದ ಕೆಲವು ಇಂಟೀರಿಯರ್ ಪ್ರದೇಶಗಳಲ್ಲಿ ಲಕ್ಷಾಂತರ ರೂಪಾಯಿ ಕಾಮಗಾರಿ ಮಾಡಿಸಿದ್ದೇನೆಂದು ಹೇಳಿ ಅದಕ್ಕೆಲ್ಲ ನಕಲಿ ಬಿಲ್ ಸೃಷ್ಟಿಸಿ ಇಡೀ ಕಾಮಗಾರಿಯ ಹಣವನ್ನೇ ತನ್ನ ಜೇಬಿಗೆ ಇಳಿಸಿಕೊಳ್ಳುತ್ತಿದ್ದ.

ಇಷ್ಟಕ್ಕೂ ನಿಲ್ಲದ ನಾರಾಯಣಸ್ವಾಮಿಯ ಧನದಾಹ ಎಂತಹದ್ದೆಂದರೆ ಮ.ಬೆಟ್ಟದ ಹಾಗೂ ರಾಮಾಪುರ ಅರಣ್ಯ ಪ್ರದೇಶದಲ್ಲಿರುವ ಸೊಂಪಾದ ಕಾಡನ್ನು ಬೋಳಿಸಲು ಮರಗಳ್ಳರ ಜೊತೆ ಶಾಮೀಲಾಗಿದ್ದ. ಇದೇ ಪ್ರದೇಶಗಳಲ್ಲಿ ಅಕ್ರಮ ಮರಳು ದಂಧೆ ನಡೆಸುವವರಿಂದಲೂ ಪ್ರತಿ ತಿಂಗಳು ಲಕ್ಷಾಂತರ ರೂಪಾಯಿ ಕಪ್ಪ ಪಡೆಯುತ್ತಿದ್ದ. ಗುಂಡ್ಲುಪೇಟೆ, ಹನೂರು, ಕೊಳ್ಳೇಗಾಲ, ರಾಮಾಪುರ, ಮ.ಬೆಟ್ಟದ ಕಾಡಿನೊಳಗೆ ಕರಿಕಲ್ಲು ಗಣಿಗಾರಿಕೆ ನಡೆಸುವವರೊಂದಿಗೂ ಕೈಜೋಡಿಸಿ ಪ್ರತಿವಾರ ಲಕ್ಷಾಂತರ ರೂಪಾಯಿಯ ಚಂದಾ ವಸೂಲಿ ಮಾಡುತ್ತಿದ್ದ. ಹೀಗೆ ಕಾಡಿನಲ್ಲಿರುವ ಮರ, ಮರಳು, ಕಲ್ಲು ಮತ್ತು ಮಣ್ಣನ್ನು ಕದ್ದುದಕ್ಕೇ ದುಂಡಗಾದ ನಾರಾಯಣಸ್ವಾಮಿ ಎಂಬ ಅರಣ್ಯ ರಕ್ಷಣಾಧಿಕಾರಿ!

ಇಲ್ಲಿಯತನಕ ತಮ್ಮಷ್ಟಕ್ಕೆ ತಾವು ಸಿಕ್ಕ ಕಾಮಗಾರಿಯನ್ನು ಮಾಡಿಕೊಂಡು ತೆಪ್ಪಗಿದ್ದ ಅರಣ್ಯ ಗುತ್ತಿಗೆದಾರರನ್ನು ಇತ್ತೀಚೆಗೆ ನಾರಾಯಣಸ್ವಾಮಿಯ ಧನಸ್ವಾಹ ಬುದ್ಧಿ ರೊಚ್ಚಿಗೆಬ್ಬಿಸಿದೆ. ಅವರಲ್ಲಿ ಹಲವರು ಕಳೆದ ಮೂರು ತಿಂಗಳುಗಳಿಂದ ನಾರಾಯಣಸ್ವಾಮಿಯ ಲಂಚಕೋರತನದ ವಿರುದ್ಧ ಲೋಕಾಯುಕ್ತ ಅಧಿಕಾರಿಗಳಿಗೆ ದೂರುಗಳನ್ನು ಗುಜರಾಯಿಸುತ್ತಲೇ ಇದ್ದರು.

ಈ ದೂರುಗಳ ಆಧಾರದ ಮೇಲೆ ನಾರಾಯಣಸ್ವಾಮಿಯ ಮೇಲೆ ನಿಗಾ ಇಟ್ಟಿದ್ದ ಲೋಕಾಯುಕ್ತದ ಅಧಿಕಾರಿಗಳು ಮೊನ್ನೆ ಆತನನ್ನು ಮಾಲು ಸಮೇತ ಖೆಡ್ಡಾಗೆ ಬೀಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಖೆಡ್ಡಾಗೆ ಬಿದ್ದ ನಾರಾಯಣ

ಮಾರ್ಚ್ 18ರಂದು ಕೆಲವು ಎನ್‌ಜಿಓಗಳ ಸಹಯೋಗದೊಂದಿಗೆ ಅರಣ್ಯ ಇಲಾಖೆಯ ವತಿಯಿಂದ 'ಬದಿರು ಸಿರಿ' ಕಾರ್ಯಕ್ರಮವನ್ನು ಅದ್ದೂರಿಯಾಗಿಯೇ ಮಾಡಿದ ನಾರಾಯಣಸ್ವಾಮಿ. ಅಂದಿನ ಕಾರ್ಯಕ್ರಮಕ್ಕೆ ತನ್ನ ವ್ಯಾಪ್ತಿಗೆ ಬರುವ ರೇಂಜರ್‌ಗಳು, ತನ್ನ ಕೈಕೆಳಗಿನ ಅಧಿಕಾ[ರಿಗಳು] ಹಾಗೂ ಇತರ ನೌಕರರನ್ನು ಕರೆದು ಅವರಿಂದ ಬರಬೇ[ಕಾದ] ಕಮೀಷನ್‌ಗಳನ್ನು ಪಡೆದುಕೊಂಡ.

ಇದಾದನಂತರ ಮಾರ್ಚ್ 20ರ ಭಾನು[ವಾರ] ನಾರಾಯಣಸ್ವಾಮಿ ಬೆಳ್ಳಂಬೆಳಗ್ಗೆಯೇ ಬೆಂಗಳೂರಿಗೆ ಹೊ[ರಟ]. ಆದರೆ ಆತ ಬರಿಗೈಯಲ್ಲಿ ಹೊರಡಲಿಲ್ಲ, ಎರಡು ದಿ[ನ] ಹಿಂದೆ ತಾನು ಪಡೆದಿದ್ದ 8 ಲಕ್ಷ ರೂಪಾಯಿ ಲ[ಂಚದ] ಹಣವನ್ನೂ ತನ್ನ ಸರ್ಕಾರಿ ಜೀಪಿನಲ್ಲೇ (ಬುಲೆರೋ ಕೆ.ಎ ... ಜಿ.335) ಹೊರಟ.

ಕೊಳ್ಳೇಗಾಲದಿಂದ ಕೂಗಳತೆಯ ದೂರದಲ್ಲಿ[ರುವ] ಹಣಗಳ್ಳಿಯ ಪಾಪನಕೆರೆಯ ಬಳಿ ನಾರಾಯಣ[ಸ್ವಾಮಿ] ಜೀಪಿನಲ್ಲಿ ಹೋಗುತ್ತಿರುವಾಗಲೇ ಡಿಸೋಜ, ಹನುಮ... ಜಯರಾಂ ಹಾಗೂ ಧರ್ಮೇಂದ್ರ, ಎಂಬ ಲೋಕಾಯು[ಕ್ತ] ಅಧಿಕಾರಿಗಳು ಅಟಕಾಯಿಸಿಕೊಂಡರು.

ನಾರಾಯಣಸ್ವಾಮಿಯ ಜೀಪು ತಡೆದು ವಿಚಾರಿ[ಸಿದಾಗ] ಆತ ಲೋಕಾಯುಕ್ತದ ಅಧಿಕಾರಿಗಳ ಮೇಲೆಯೇ ಮು[ಗಿಬಿದ್ದು] ಕೊಂಡು ಬಿದ್ದ. "ನಾನೊಬ್ಬ ಐಎಫ್‌ಎಸ್ ಅಧಿಕಾರಿ ... ಜೀಪನ್ನು ತಪಾಸಣೆ ಮಾಡಲು ಬಿಡುವುದಿಲ್ಲ" ... ಅರಚಾಡಿದ. ನಾರಾಯಣಸ್ವಾಮಿಯ ಎಗರಾಟವನ್ನು ... ಆಗಿಯೇ ಹ್ಯಾಂಡಲ್ ಮಾಡಿದ ಲೋಕಾಯುಕ್ತ ಅ[ಧಿಕಾರಿ]ಗಳು "ನಾವು ತಪಾಸಣೆ ಮಾಡಲೇಬೇಕು. ನಿಮ್ಮ ಜೀ[ಪಿನಲ್ಲಿ] ಏನೇನಿದೆ ಎಂಬುದನ್ನು ಪರೀಕ್ಷಿಸಬೇಕು" ಎಂದು ... ಹಿಡಿದರು.

ಆಗ ನಾರಾಯಣಸ್ವಾಮಿ "ನಾನೇನು ನನ್ನ ಜೀ[ಪಿನಲ್ಲಿ] ಶ್ರೀಗಂಧ ಸಾಗಿಸುತ್ತಿಲ್ಲ, ಇವತ್ತು ರಜೆ ಇರುವುದ[ರಿಂದ] ನಾನು ಬೆಂಗಳೂರಿಗೆ ಹೋಗುತ್ತಿದ್ದೇನೆ. ಕಾರಲ್ಲಿ ನನ್ನ ಒ[ಂದಷ್ಟು] ಬಟ್ಟೆಗಳಿವೆ ಹಾಗೂ ಸ್ವಲ್ಪ ಹಣ ಇದೆ" ಎಂದ... ಹಣವನ್ನು ಅಕ್ರಮವಾಗಿ ಪಡೆದದ್ದಲ್ಲದೇ ಅಕ್ರಮ...

ಚಾಮರಾಜನಗರ ಜಿಲ್ಲೆ ಮುಂದುವರೆಯುತ್ತದಾ?

[illegible] ಬರುವ ಅಧಿಕಾರಿಗಳು ಮಾತ್ರ ಭ್ರಷ್ಟಾಚಾರದಲ್ಲಿ [illegible]. [illegible] ಎಂಬುದಕ್ಕೆ 2007ನೇ ಇಸವಿಯಿಂದ ಇಲ್ಲಿಯವರೆಗೂ [illegible] ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ [illegible] 2009ರಲ್ಲಿ [illegible] ಪಡೆದು ಲೋಕಾಯುಕ್ತ ಅತಿಥಿಯಾಗಿದ್ದ [illegible] ಎಂಬ ಕೆಎಎಸ್ ಅಧಿಕಾರಿ ಲಂಚ ಪಡೆಯುತ್ತಿದ್ದಾಗಲೇ [illegible]. ಹಾಗೆಯೇ 2010ರಲ್ಲಿ [illegible] ಪಡೆಯುತ್ತಿದ್ದಾಗ [illegible] 2011ರಲ್ಲಿ [illegible] ರೇಣುಕಾರಾಧ್ಯ ಹಾಗೂ ಎಸ್‌ಐ [illegible] ಪಡೆಯುತ್ತಿರುವಾಗಲೇ ಲೋಕಾಯುಕ್ತ [illegible] ಲೋಕಾಯುಕ್ತರಿಗೆ ಸಿಕ್ಕಿಬಿದ್ದು [illegible]. [illegible] ಜಿಲ್ಲೆ ಮುಂದುವರೆಯುತ್ತದಾ? ನೀವೇ ಹೇಳಿ!

ಚಿಕ್ಕಮಗಳೂರು: ಕೆಎಸ್‌ಆರ್‌ಟಿಸಿ ನವೀನನ ದಾಂಗುಡಿಗಳಿಗೆ ಕೊನೆ ಎಂದು?



ಸೋನಿಯಾ ಮೇಲೆರಗಿದ ಬಸ್ಸು


ಚಿಕ್ಕಮಗಳೂರು ಕೆಎಸ್‌ಆರ್‌ಟಿಸಿ ವಿಭಾಗಕ್ಕೆ ತಗುಲಿಕೊಂಡಿರುವ ನವೀನ್ ಕುಮಾರ್ ಎಂಬ ವಿಭಾಗೀಯ ನಿಯಂತ್ರಣಾಧಿಕಾರಿಯ ಕೈಗೆ ನೋಟು ಮುದ್ರಿಸುವ ಯಂತ್ರ ಕೊಡಬೇಕಿತ್ತು... ಈತನ ಭಾನಗಡಿಗಳನ್ನು ಕಂಡವರಿಗೆ ಹಾಗನ್ನಿಸುತ್ತದೆ. ಏಕೆಂದರೆ ನೋಟು ಸಿಗುವಂತಿದ್ದರೆ ಈತ ಎಲ್ಲಾದರೂ ಸರಿ ಕೈಯ್ಯಾಡಿಸಿಬಿಡಬಲ್ಲ. ಇಂತಹ ಧನದಾಹಿ ಚಿಕ್ಕಮಗಳೂರು ಕೆಎಸ್‌ಆರ್‌ಟಿಸಿ ವಿಭಾಗವನ್ನು ಗಬ್ಬೆಬ್ಬಿಸಿಬಿಟ್ಟದ್ದಾನೆ.

ಚಿಕ್ಕಮಗಳೂರು ಜಿಲ್ಲಾ ಕೇಂದ್ರದಲ್ಲಿ ಕೆಎಸ್‌ಆರ್‌ಟಿಸಿ ವಿಭಾಗದ ಕೇಂದ್ರ ಕಚೇರಿಯಿದೆ. ಇದಕ್ಕೆ ಚಿಕ್ಕಮಗಳೂರು, ಕಡೂರು, ಮೂಡಿಗೆರೆ, ಸಕಲೇಶಪುರ ಘಟಕಗಳು ಸೇರಿವೆ. ಜಿಲ್ಲೆಯು ಸಂಪೂರ್ಣವಾಗಿ ಗುಡ್ಡಗಾಡು ಪ್ರದೇಶವಾಗಿದ್ದರೂ ಪ್ರತಿ ಘಟಕದಲ್ಲೂ ತೇಜಸ್ವಿಯವರ 'ಜುಗಾರಿ ಕ್ರಾಸ್' ಕಾದಂಬರಿಯಲ್ಲಿ ಬರುವ 'ಖುದ್ದೂಸ್ ಎಕ್ಸ್‌ಪ್ರೆಸ್'ಗಳಂತಿರುವ ಬಸ್‌ಗಳಿವೆ. ಇಂತಹ ಬಸ್‌ಗಳನ್ನು ದುರಸ್ತಿಪಡಿಸಲು ನವೀನ್ ಮುಂದಾಗುತ್ತಿಲ್ಲ. ಬದಲಾಗಿ ರಿಪೇರಿಯಿಂದ ಹಿಡಿದು ಸ್ವಚ್ಛತೆವರೆಗೆ ಲಂಚ ಕೀಳುವ ಪರಿಪಾಠವನ್ನು ಬೆಳೆಸಿಕೊಂಡಿದ್ದಾನೆ. ನಿಯೋಜನೆ, ವರ್ಗಾವಣೆ, ಸ್ಥಳಾಂತರಗಳಲ್ಲಿ ಕೂಡ ಲಂಚ ಕಕ್ಕಲೇಬೇಕು.




ಅರುಣ್‌ಕುಮಾರ್

ಕೇಂದ್ರ ಬಸ್ ನಿಲ್ದಾಣದಲ್ಲಿ ಜನವರಿ ತಿಂಗಳಲ್ಲಿ ಧರ್ಮಸ್ಥಳದಿಂದ ಹುಬ್ಬಳ್ಳಿಗೆ ಹೊರಟಿದ್ದ ಬಸ್ಸೊಂದು ಸೋನಿಯಾ ಎಂಬ ವಿದ್ಯಾರ್ಥಿನಿಗೆ ಡಿಕ್ಕಿ ಹೊಡೆದಿತ್ತು, ಮಲೆನಾಡು ವಿದ್ಯಾಸಂಸ್ಥೆಯಲ್ಲಿ ಒಂಬತ್ತನೆ ತರಗತಿಯಲ್ಲಿ ಓದುತ್ತಿದ್ದ ಸೋನಿಯಾ ಆಟೋಟಗಳಲ್ಲಿ ಸಕ್ರಿಯಳಾಗಿದ್ದು ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಹದಿನೈದು ಪ್ರಶಸ್ತಿಗಳನ್ನು ಪಡೆದಿದ್ದಳು. ಆದರೆ ಆ ಅಪಘಾತದಲ್ಲಿ ಕಾಲು ಮುರಿದುಕೊಂಡ ಸೋನಿಯಾಗೆ ಇವತ್ತಿಗೂ ನಡೆದಾಡಲೂ ಆಗುತ್ತಿಲ್ಲ, ಆದರೆ ಖತರ್ನಾಕ್ ಅಧಿಕಾರಿಗಳು ಆಕೆಗೆ ಐದು ಸಾವಿರ ರೂ. ಪರಿಹಾರ ಕೊಟ್ಟು ಪ್ರಕರಣವನ್ನು ಹಳ್ಳ ಹಿಡಿಸಿದರು. ಸೋನಿಯಾಳ ಆಸ್ಪತ್ರೆ ಖರ್ಚು ಮೂವತ್ತು ಸಾವಿರ ದಾಟ ನಿಂತಿದೆ.



ಗಾಯಾಳು ಸೋನಿಯಾ



ಮೃತ ಮಜೀದ್

ಇನ್ನೊಂದು ಪ್ರಕರಣ ಗಮನಿಸಿ. ಮಜೀದ್ ಎಂಬ ಹಣ್ಣು ವ್ಯಾಪಾರಿ ಮಂಗಳೂರು ಮಾರುಕಟ್ಟೆಗೆ ರಾತ್ರಿ ಹೊರಟದ್ದಾಗ ಬಸ್ಸೊಂದು ಡಿಕ್ಕಿ ಹೊಡೆದು ಆತ ಬಸ್ಸಿನಡಿ ಸಿಲುಕಿ ಪ್ರಾಣ ಕಳೆದುಕೊಂಡ. ಅಂದು ಸಿರಾಜುದ್ದೀನ್, ನಂದಿನಿ ಹೋಟೆಲ್‌ನ ಸುರೇಶ್‌ಶೆಟ್ಟಿ ಮತ್ತು ಆನಂದ್ ಎಂಬುವರು ಮಜೀದ್‌ನ ಕಳೇಬರವನ್ನು ಸಾಗಿಸದಿದ್ದರೆ ಬಹುಶಃ ಆತನ ಹೆಣದ ಕುರುಹೂ ಪತ್ತೆಯಾಗುತ್ತಿರಲಿಲ್ಲ, ಯಥಾಪ್ರಕಾರ ಈ ಪ್ರಕರಣವನ್ನೂ ಮುಚ್ಚಿಹಾಕುವ ಪ್ರಯತ್ನಗಳು ನಡೆದವು.

ಚಿಕ್ಕಮಗಳೂರು, ಕಡೂರು ಮತ್ತು ಮೂಡಿಗೆರೆ ಕೇಂದ್ರ ಬಸ್ ನಿಲ್ದಾಣಗಳನ್ನು ಕೋಟಿಗಟ್ಟಲೆ ರೂಪಾಯಿ ಖರ್ಚು ಮಾಡಿ ಮೇಲ್ದರ್ಜೆಗೇರಿಸಲಾಗಿದೆ. ಆದರೆ ಈ ಕಾಮಗಾರಿಗಳ ದಾಖಲೆಗಳನ್ನು ತನಿಖೆಗೆ ಒಡ್ಡಿದರೆ ಕೆಲವರಂತೂ ಜೈಲುಪಾಲಾಗುತ್ತಾರೆ.

ಇತ್ತೀಚೆಗಷ್ಟೆ ಮ್ಯಾನೇಜಿಂಗ್ ಡೈರೆಕ್ಟರ್ ಬಂದಿದ್ದಾಗ ದುರಸ್ತಿಗೊಳ್ಳದ ಬಸ್ಸುಗಳನ್ನು ದಂಟರಮಕ್ಕಿ ಕೋಟೆ ಹಳೆ ಆರ್‌ಟಿಓ ಕಚೇರಿ ಬಳಿ ಗಲ್ಲಿಗಳಲ್ಲಿ ನಿಲ್ಲಿಸಿದ್ದು ರಹಸ್ಯವಾಗಿ ಉಳಿದಿಲ್ಲ, ನವೀನ್ ಕುಮಾರನ ಆಡಳಿತದಡಿ ಬಸ್ಸುಗಳ ರಿಪೇರಿ ನಿಮಿತ್ತ ಬಿಡಿಭಾಗಗಳು ಅತ್ಯಧಿಕ ಪ್ರಮಾಣಗಳಲ್ಲಿ ಸರಬರಾಜಾಗುತ್ತಿದ್ದರೂ ಸರಕಾರಿ ಬಸ್ಸುಗಳಿಗೆ ಅವು ಜೋಡಣೆಯಾಗುತ್ತಿಲ್ಲ, ನುಂಗುವ ಕಾಯಕಕ್ಕೆ ತಡೆಯುಂಟಾಗುವ ಆತಂಕದಿಂದ ಹೊಸ ಬಸ್ಸುಗಳನ್ನು ತರಿಸುತ್ತಿಲ್ಲ.

ತಮಗೆ ಬೇಕಾದವರನ್ನು ಮಾತ್ರವೇ ಆಯಾಕಟ್ಟಿನ ಜಾಗಕ್ಕೆ ನೇಮಿಸಿ ಉಳಿದವರನ್ನು ಹೊರಗಿಡುವುದು ವಾಡಿಕೆಯಾಗಿ ಬಿಟ್ಟಿದೆ. ಚಿ[ಕ್ಕ] ವಿಷಯಗಳಿಗೂ ನೌಕರರಿಗೆ ತೀರ ಕಿರುಕುಳ ನೀಡುವ ಖತರ್ನಾಕ್‌ಗಳ ದೊಡ್ಡ ಗುಂಪು ಇಲ್ಲಿದೆ.

ನವೀನ್ ಕುಮಾರನಿಂದಾಗಿ ಇಲ್ಲಿನ ಕೆಎಸ್‌ಆರ್‌ಟಿಸಿ ವಿಭಾಗವೇ 'ಖುದ್ದೂಸ್ ಎಕ್ಸ್‌ಪ್ರೆಸ್' ನಂತೆ ಏದುಸಿರು ಬಿಡುತ್ತಿದೆ. ಆದರೂ ಯಾವೊಬ್ಬ ಶಾಸಕನಾಗಲಿ, ಮಂತ್ರಿಯಾಗಲಿ ಈ ಬಗ್ಗೆ ತುಟಿ ಬಿಚ್ಚುತ್ತಿಲ್ಲ. ಯಾಕೆ?

• ಅಜೀಜ್ ಕಿರುಗುಂ[ದ]

ಣ್ಣಿರಿ ಎಂದು ಗೊತ್ತಾಗಿರುವುದರಿಂದಲೇ ನಾವು ವುವು" ಎಂದ ಅಧಿಕಾರಿಗಳು ಕೊನೆಗೂ ನಾರಾ ಮಿಯ ಜೇಬನ್ನು ತಪಾಸಣೆ ಮಾಡಿದರು.

ಅವರಿಗೆ ಸಿಕ್ಕಿದ್ದು ಎಂಟು ಲಕ್ಷ ರೂಪಾಯಿಗಳು. ಕಂಡು ಬೆಳ್ಳಂಬೆಳಗ್ಗೆಯೇ ಬೆವರತೊಡಗಿದ ನಾರಾ ಮಿ "ಇಲ್ಲಿರುವ ಹಣ ನನ್ನದಲ್ಲ. ಇದು ಯಾರೋ ಗಳು ಮಾಡಿರುವ ಕುತಂತ್ರ. ಈ ಹಣಕ್ಕೂ ನನಗೂ ವಿಲ್ಲ" ಎಂದು ಲೋಕಾಯುಕ್ತದ ಅಧಿಕಾರಿಗಳ ಮಂಡಿಯೂರಿ ಬೇಡಿಕೊಂಡ. ಆದರೆ ನಾರಾಯಣ ಮ ಲಂಚಗುಳಿತನದ ಬಗ್ಗೆ ಇಂಚಿಂಚು ತಿಳಿದಿದ್ದ ಯುಕ್ತದ ಅಧಿಕಾರಿಗಳು ನಾರಾಯಣಸ್ವಾಮಿಯನ್ನು ಲಕ್ಷ ರೂಪಾಯಿಗಳ ಸಮೇತ ಬಂಧಿಸಿ ಚಾಮರಾಜ ಕೋರ್ಟ್ ಮುಂದೆ ಹಾಜರುಪಡಿಸಿದರು.

ನ್ಯಾ ನ್ಯಾಯಾಧೀಶರು ಲಂಚಕೋರ ನಾರಾಯಣಸ್ವಾಮಿ 31ನೇ ತಾರೀಖಿನವರೆಗೆ ನ್ಯಾಯಾಲಯ ಬಂಧನದ ತೆ. ಆದೇಶ ನೀಡಿದ್ದರು. ಕೂಡಲೇ ಅನಾರೋಗ್ಯದ ಟ್ಟಿ ಕೆ.ಆರ್.ಆಸ್ಪತ್ರೆಗೆ ದಾಖಲಾದ ನಾರಾಯಣಸ್ವಾಮಿ ವೇ ಜಾಮೀನಿಗೆ ಅರ್ಜಿ ಗುಜರಾಯಿಸಿದ್ದಾನೆ.

ಲೋಕಾಯುಕ್ತ ಬಲೆಗೆ ನಾರಾಯಣಸ್ವಾಮಿ ಬಿದ್ದಿದ್ದೇ ಳ್ಳೇಗಾಲದಾದ್ಯಂತ ಈ ಸಂಚಿನ ಹಿಂದೆ ಅರಣ್ಯ ಯ ಗುತ್ತಿಗೆದಾರರ ಅಧ್ಯಕ್ಷ ಶ್ರೀನಿವಾಸನ ಕೈವಾಡವಿದೆ ಮಾತು ಕೇಳಿಬರುತ್ತಿದೆ.

ದಹಾಗೆ ಈ ಶ್ರೀನಿವಾಸ್ ಯಾರೆಂಬುದು ಇಡೀ ಕಿಗೆ ಗೊತ್ತಿದೆ. ಶ್ರೀನಿವಾಸ್ ಈ ಹಿಂದೆ ಇದೇ ಇಲಾಖೆಯಲ್ಲಿ ಸೂಪರಿಂಟೆಂಡೆಂಟ್ ಆಗಿ ಸೇವೆ ಪ್ರವೃತ್ತಿಯಾದವನು. ಆನಂತರ ಅದೇ ಇಲಾಖೆಯ ದಾರನಾಗಿ ಲಕ್ಷಾಂತರ ರೂಪಾಯಿ ಕಬಳಿಸಿದವನು. ಶ್ರೀನಿವಾಸ್ ಮತ್ತು ನಾರಾಯಣಸ್ವಾಮಿ ನಡುವೆ ದ್ವಿ ಇರುವುದೇ ಅರಣ್ಯ ಇಲಾಖೆಯ ಗುತ್ತಿಗೆ ದಾರಿಯ ವಿಷಯಕ್ಕೆ ಸಂಬಂಧಿಸಿದಂತೆ.

ರಣ್ಯ ಇಲಾಖೆಯೊಳಗೆ ನಡೆಯುವ ಎಲ್ಲಾ ಅಕ್ರಮ ಟಿಕೆ, ಡೀಲಿಂಗ್‌ಗಳು, ಕಳ್ಳವ್ಯವಹಾರಗಳನ್ನು ತೂ ಬಲ್ಲ ಶ್ರೀನಿವಾಸನೇ ಲಂಚಕೋರ ನಾರಾಯಣ ಮಿಯನ್ನು ಲೋಕಾಯುಕ್ತರ ಖೆಡ್ಡಾಗೆ ಬೀಳಿಸಿದ್ದಾನೆ ತರ್ಕಿಸಲಾಗುತ್ತಿದೆ.

ಗ ಲೋಕಾಯುಕ್ತರ ಬಲೆಗೆ ಬಿದ್ದು ಒದ್ದಾಡುತ್ತಿರುವ ಯಣಸ್ವಾಮಿ ಬರುವ ಏಪ್ರಿಲ್ 4ಕ್ಕೆ ಅಮೆರಿಕಾಕ್ಕೆ ತಿಂಗಳ ಅವಧಿಗೆ ಟ್ರೈನಿಂಗ್ ಹೋಗುವ ಅವಕಾಶ ಟ್ರೈನಿಂಗ್ ಮುಗಿದ ಕೂಡಲೇ ವಲಯ ಸಂರಕ್ಷಣಾ ಯಾಗುವ ಅವಕಾಶ... ಎರಡೂ ತಪ್ಪಿಹೋಯಿ ಎಂದು ಆಸ್ಪತ್ರೆಯಲ್ಲಿ ಮಲಗಿ ಆಕಾಶ ನೋಡು !

• ಕೊಳ್ಳೇಗಾಲ ಮಾಳಿಗೆ

ಕುವೆಂಪು ಆಶಯದ ಶೂದ್ರ ತಪಸ್ವಿ ಯಾವುದು ಸತ್ಯ?



ಕಳೆದೆರಡು ವಾರಗಳಿಂದ 'ಶೂದ್ರತಪಸ್ವಿ' ನಾಟಕದ ಕುರಿತು ನಡೆಯುತ್ತಿರುವ ಸಂವಾದಕ್ಕೆ ನನ್ನ ಕೆಲವು ಅನಿಸಿಕೆಗಳನ್ನು ವ್ಯಕ್ತಪಡಿಸುತ್ತೇನೆ.

ಶೂದ್ರ ತಪಸ್ವಿ ನಾಟಕದಲ್ಲಿ ತಪಸ್ಸಿನ ಅಧಿಕಾರ ಕುರಿತು ಮೇಲ್ವರ್ಣದವರ ಸಂಕಥನಕ್ಕೆ ಪ್ರತಿಸಂಕಥನ ನಿರ್ಮಾಣದ ಮೂಲಕ ಅದುವರೆಗೆ ಅಂಚಿಗೆ ತಳ್ಳಲ್ಪಟ್ಟವರನ್ನೂ ಕೇಂದ್ರದತ್ತ ಚಲಿಸಲು ಪ್ರೇರೇಪಿಸಲು ಶಂಬೂಕ ಪಾತ್ರವು ಬಳಕೆಯಾಗಿದೆ. ಈ ಕೆಲಸವನ್ನು ಶಂಬೂಕ ಪಾತ್ರ ರಂಗದ ಮೇಲೆ ಒಂದು ಮಾತನ್ನೂ ಆಡದೆ ಮಾಡುವುದು ಗಮನಿಸಬೇಕಾದ ಸಂಗತಿ. ಇದು ನಾಟಕದಲ್ಲಿನ ಬಂಧದಲ್ಲೂ ಶೂದ್ರನೆಂದು ಭಾವಿಸಲ್ಪಟ್ಟವನನ್ನು ಅದುವರೆಗಿನ ಸಮಾಜವು ಮೂಕನನ್ನಾಗಿಸುವುದನ್ನೂ ಅರ್ಥಪೂರ್ಣವಾಗಿ ಧ್ವನಿಸುತ್ತದೆ. ಮೂರು ಚಿಕ್ಕ ದೃಶ್ಯಗಳಿರುವ ಈ ನಾಟಕದಲ್ಲಿ ಶತಮಾನಗಳಿಂದಾದ ಸಾಮಾಜಿಕ ಶೋಷಣೆಯನ್ನು ರಾಮ, ಬ್ರಾಹ್ಮಣ ಪಾತ್ರಗಳ ಮಾತುಗಳಲ್ಲಿನ ವ್ಯಂಗ್ಯಗಳ ಮೂಲಕವೇ ಧ್ವನಿಸುತ್ತದೆ.

ಪ್ರಸ್ತುತ 'ಶೂದ್ರ ತಪಸ್ವಿ' ನಾಟಕದ ಪ್ರಯೋಗ ಹಾಗೂ ಅದನ್ನು ಪ್ರಯೋಗಿಸಿದ ನೀನಾಸಂ ತಂಡದ ಕುರಿತು ಚರ್ಚೆ ನಡೆಸಲಾಗುತ್ತಿದೆ. ಈ ಪ್ರಯೋಗದಲ್ಲಿ ಕುವೆಂಪು ಆಶಯಗಳಿಗೆ ವಿರುದ್ಧವಾದ ನಾಟ್ಯೀಕರಣ, ರಾಮನಾಮ ಜಪ, ಯಜ್ಞೋಪವೀತ ಧಾರಣೆಯ ಪ್ರಸಂಗಗಳ ಬಗ್ಗೆ, ಚಿತ್ರದುರ್ಗದ 'ರಚನಾ ತಂಡ' ಇಪ್ಪತ್ತೈದು ವರ್ಷಗಳ ಸಂಭ್ರಮದ ಕಾರ್ಯಕ್ರಮದಲ್ಲಿ ನಾನು ಪ್ರಶ್ನಿಸಿದ್ದೆ. ಆಗ ಅದಕ್ಕೆ 'ಈ ಮಾಸ' ಪತ್ರಿಕೆಯ ಎಲ್.ಕೃಷ್ಣಪ್ಪನವರು ಕೂಡಾ ಸಕಾರಾತ್ಮಕವಾಗಿ ಸ್ಪಂದಿಸಿದ್ದರು.

ಈಗಾಗಲೇ ಹೇಳಿದಂತೆ ಶೂದ್ರ ತಪಸ್ವಿ ನಾಟಕವು ಜ್ಞಾನಾಧಿಕಾರದ ಪ್ರಶ್ನೆಯನ್ನು ಭಿತ್ತಿಯಾಗಿಸಿಕೊಂಡ ನಾಟಕ. ಈ ನಾಟಕದ ಆಶಯವು ಪೌರೋಹಿತ್ಯವನ್ನು ಪ್ರಶ್ನಿಸುತ್ತದೆ. ನೀನಾಸಂ ತಂಡವು ಪ್ರಯೋಗಿಸಿದ ಶೂದ್ರತಪಸ್ವಿ ನಾಟಕವು ಕುವೆಂಪುರವರ ಶೂದ್ರ ತಪಸ್ವಿ ನಾಟಕವೇ? ಎಂಬ ಪ್ರಶ್ನೆ ಮೂಡುವಂತೆ ಪ್ರಯೋಗಗೊಂಡಿತು. ಇದರಲ್ಲಿ ಮುಖ್ಯವಾಗಿ ರಾಮನಾಮ ಜಪ ಆಗಿಂದಾಗ್ಗೆ ಇಣುಕುತ್ತಿತ್ತು. ಪ್ರಯೋಗದ ತುಂಬ ಅತಿಯಾದ ಈ ರಾಮನಾಮ ಜಪದ ಪರಿಣಾಮವಾಗಿ ಶೂದ್ರ ತಪಸ್ವಿಯ ರಾಮನ ಬದಲು ಆರೆಸ್ಸೆಸ್ ರಾಮ ಹಂತಹಂತವಾಗಿ ರೂಪುಗೊಳ್ಳತೊಡಗುತ್ತಿದ್ದುದು ಪ್ರಯೋಗದ ನಕಾರಾತ್ಮಕ ಅಂಶಗಳಲ್ಲೊಂದು.

ಕುವೆಂಪುರವರ ನಾಟಕದಲ್ಲೆಲ್ಲೂ ರಾಮನಾಮ ಜಪ ಇಲ್ಲ. ಅಂತೆಯೇ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯವು ಕೂಡ ಹೆಸರಿಗೆ ಮಾತ್ರ ರಾಮಾಯಣವೇ ಹೊರತು ಅದರ ಕೇಂದ್ರ ದೃಷ್ಟಿ ಇರುವುದು 'ಪಾಪಿಗು ಉದ್ಧಾರ ಸಾಧ್ಯ' ಎಂಬಲ್ಲಿ. ನಿರ್ದೇಶಕರಾದ ಮಂಜುನಾಥ್ ಬಡಿಗೇರರವರು ಹೇಳಿಕೊಂಡಿರುವಂತೆ ಕುವೆಂಪುರವರ ಆಶಯಗಳನ್ನು ತರುವ ಪ್ರಯತ್ನ ನಿಜಕ್ಕೂ ನಡೆಯಬೇಕೆಂದರೆ, ಅದರಲ್ಲಿ ರಾಮನಂಥ ಪ್ರಧಾನ ಪಾತ್ರದ ಆರಾಧನೆಯಲ್ಲ, 'ಮಮತೆಯ ಸುಳಿ ಮಂಥರೆ'ಯಂಥ ಪಾತ್ರಗಳನ್ನು ನಾಟಕದಲ್ಲಿ ತರಬಹುದಿತ್ತು.

ಆದರೆ ಅಡಿಗಡಿಗೆ ರಾಮನ ವೈಭವೀಕರಣದಂತೆ ನಾಟಕವು ಪ್ರಯೋಗಗೊಂಡಿತು. ಶ್ರೀರಾಮಾಯಣ ದರ್ಶನಂ, ಅನಿಕೇತನ ಕವನವನ್ನು ಬಳಸಿಕೊಳ್ಳುವುದರಿಂದಷ್ಟೇ ಕುವೆಂಪು ಆಶಯಗಳನ್ನು ನಾಟಕದಲ್ಲಿ ತಂದಂತಾಗುತ್ತದೆಯೇ? ಎಂಬ ಪ್ರಶ್ನೆಯನ್ನು ಕೇಳಿಕೊಂಡಿದ್ದರೆ, ಪ್ರಾಯಶಃ ರಾಮಜಪ ಅಪ್ರಸ್ತುತವಾಗಬಹುದಿತ್ತು.

ಕೇವಲ ಪ್ರೇಕ್ಷಕರಿಗೆ ಮನೋರಂಜನೆ ನೀಡುವುದಷ್ಟೇ ನಾಟಕದ ಉದ್ದೇಶ ಆಗಿರುವುದಿಲ್ಲವಾದ್ದರಿಂದ ಹಾಗೂ ರಂಗಮಾಧ್ಯಮವೇ ಒಂದು ಪ್ರಜ್ಞೆಯಾಗಿರುವುದರಿಂದ, ನೀನಾಸಂನಂಥ ರಂಗತಂಡಗಳು ಪ್ರಯೋಗಿಸುತ್ತಿರುವಾಗ ಪ್ರೇಕ್ಷಕರು ಆ ತಂಡದಿಂದ ಬಹಳಷ್ಟನ್ನು ನಿರೀಕ್ಷಿಸುತ್ತಿರುತ್ತಾರೆ. ಆದರೆ ಹಾಗೆಂದ ಮಾತ್ರಕ್ಕೆ ನಾಟಕಕಾರರ ಆಶಯಕ್ಕೆ ವಿರುದ್ಧವಾಗಿ ಪ್ರಯೋಗ ಮಾಡುವುದು ಅಕ್ಷಮ್ಯ.

ನಾಟಕದಲ್ಲಿ ಶಂಬೂಕನ ಪಾತ್ರವನ್ನು ಕುವೆಂಪು ಆಗಿ ಬದಲಾಯಿಸಿದ್ದು ಪ್ರಮುಖವಾಗಿದ್ದರೂ, ಅಂತಿಮವಾಗಿ ಕುವೆಂಪು ಪಾತ್ರಧಾರಿಯಿಂದ 'ಯಜ್ಞೋಪವೀತ'ವನ್ನು ಬ್ರಾಹ್ಮಣ ಪಾತ್ರಧಾರಿಗೆ ಹಾಕಿಸಿರುವ ಔಚಿತ್ಯವೇನು? ಕುವೆಂಪು ಬದುಕಿರುವಷ್ಟು ಕಾಲವೂ ಪೌರೋಹಿತ್ಯವನ್ನು ಅದಕ್ಕೆ ಸಂಬಂಧಪಟ್ಟ ಆಚರಣೆಗಳೆಲ್ಲವನ್ನು ವಿರೋಧಿಸುತ್ತಿದ್ದರು. ಆದರೆ ಕುವೆಂಪು ಪಾತ್ರಧಾರಿ ಯಜ್ಞೋಪವೀತ ಕಳಚಿದ ಬ್ರಾಹ್ಮಣನಿಗೆ ಅದನ್ನೇ ತೊಡಿಸುವುದನ್ನು ಪ್ರಜ್ಞೆ ಇದ್ದ ಯಾರು ಕೂಡಾ ಒಪ್ಪಲಾರರು.

ರಂಗಕ್ರಿಯೆಯೆಂಬುದು ಸಾಂಸ್ಕೃತಿಕ ವಿವೇಕ. ಅದು ಸದಾ ಜಾಗೃತವಾಗಿರುವುದು ಮುಖ್ಯ. ನೀನಾಸಂ ತಂಡ ಪ್ರಯೋಗಿಸಿದ್ದರಿಂದ ಅಕ್ಷರ ಅವರ ಬಗ್ಗೆ ಪ್ರಶ್ನೆಗಳೇಳುವುದು ಸಹಜವೇ ಆಗಿದೆ. ಏಕೆಂದರೆ, ತನ್ನ ಸಂಸ್ಥೆ ಪ್ರದರ್ಶಿಸುತ್ತಿರುವ ರಂಗ ಪ್ರಯೋಗವೊಂದು ಸಮಾಜದ ಮೇಲೆ ಉಂಟುಮಾಡಬಹುದಾದ ಪರಿಣಾಮಗಳಿಗೆ ಕೇವಲ ನಿರ್ದೇಶಕರೊಬ್ಬರೆ ಜವಾಬ್ದಾರರಾಗಲಾರರು.

ಆದ್ದರಿಂದ 'ಶೂದ್ರ ತಪಸ್ವಿ' ಪ್ರಯೋಗದ ಜವಾಬ್ದಾರಿಯನ್ನು ಅವರಿವರ ಹೆಗಲಿಗೆ ದಾಟಿಸುವ ಪ್ರಯತ್ನ ಮಾಡಿದಷ್ಟು; ಅದು ತಪ್ಪಿಸಿಕೊಳ್ಳಲು ನಡೆಸುವ ಪ್ರಯತ್ನಗಳಾಗುತ್ತವೆಯೇ ಹೊರತು–ನೀಡಿದ ಮದ್ದನ್ನು ಟೀಕೆ ಎಂದು ಭಾವಿಸುವ ಅಸಹಾಯಕತೆಗಳನ್ನು ವ್ಯಕ್ತಪಡಿಸುತ್ತವೆ....

• ಪ್ರದೀಪ್ ಮಾಲ್ಗುಡಿ

ಮ್ಯಾಕ್‌ಮಿಲನ್‌ನ ವಂಚನೆ



ನಾನು 1982ರಲ್ಲಿ 'ಚಂದ್ರಗಿರಿ ತೀರದಲ್ಲಿ' ಎಂಬ ಕಾದಂಬರಿ ಬರೆದಿದ್ದು ನ್ನ ಶ್ರೀ ಲಂಕೇಶ್ ಅವರು ತಮ್ಮ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಸಿದ್ದದು ಕನ್ನಡಿಗರೆಲ್ಲರಿಗೂ ತಿಳಿದ ವಿಷಯ. ಆ ಬಳಿಕ 1984ರಲ್ಲಿ ಶ್ ಅವರು ಇದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದರು. ಪ್ರಾರಂಭದಲ್ಲಿ ಶ್ ಅವರಿಗೆ ಈ ಕತೆಯ ಆಧಾರದಲ್ಲಿ ಚಲನಚಿತ್ರ ನಿರ್ಮಿಸಲು ಆಸಕ್ತಿ ೂ ಆ ಬಳಿಕ ಅವರು ಪತ್ರಿಕೆಯಲ್ಲಿ ಬ್ಯುಸಿಯಾಗಿದ್ದ ಕಾರಣ ಚಿತ್ರ ರ್ಣವನ್ನು ಕೈ ಬಿಟ್ಟರೆಂದೆನ್ನಿಸಿತು. 1984ರ ಅತ್ಯುತ್ತಮ ಕಾದಂಬರಿ ಎಂದು ಟಕ ಸಾಹಿತ್ಯ ಅಕಾಡೆಮಿಯು ಈ ಕೃತಿಗೆ ಪ್ರಶಸ್ತಿ ನೀಡಿತು.

ಆ ಬಳಿಕ ಈ ಕಾದಂಬರಿ ಏಳು ಮುದ್ರಣಗಳನ್ನು ಕಂಡಿದೆಯಲ್ಲದೆ ತದ ಹಲವಾರು ಭಾಷೆಗಳಿಗೆ ಭಾಷಾಂತರಗೊಂಡಿದೆ. ಕರ್ನಾಟಕದ ಹಲವು ದ್ಯಾನಿಲಯಗಳಲ್ಲಿ ಪಠ್ಯಪುಸ್ತಕವಾಗುತ್ತಲೇ ಇದೆ.

2001ರಲ್ಲಿ ಈ ಕಾದಂಬರಿಯನ್ನಾಧರಿಸಿ ಪೋನ್‌ವಣ್ಣನ್ ಎಂಬವರು ಳಿನಲ್ಲಿ 'ಜಮಿಲಾ' ಎಂಬ ಹೆಸರಿನಲ್ಲಿ ಚಲನಚಿತ್ರ ನಿರ್ಮಾಣ ಮಾಡಿದರು.

ಕ್ಕೆ N.F.D.C (ರಾಷ್ಟ್ರೀಯ ಚಲನಚಿತ್ರ ಮಂಡಳಿ) ಯಧನ ಒದಗಿಸಿದ್ದು ಮುಂದಿನ ಹದಿನೈದು ವರ್ಷಗಳ ನಾನು ಯಾರಿಗೂ ಯಾವ ಭಾಷೆಯಲ್ಲಿಯೂ ಈ ಬರಿಯಾಧಾರಿತ ದೃಶ್ಯ ಮಾಧ್ಯಮಕ್ಕೆ (ಟಿ.ವಿ, ಧಾರಾ, ನಾಟಕ, ಚಲನಚಿತ್ರ) ಅನುಮತಿ ನೀಡಬಾರದೆಂಬ D.C ಯ ಷರತ್ತುಗಳಿಗೆ ಒಪ್ಪಿಗೆ ಸೂಚಿಸಿ ನಾನು ಸಹಿ ದ್ದೇನೆ. ಹೀಗಾಗಿ 2016ರವರೆಗೆ ಈ ಕಾದಂಬರಿಯಾಧಾರಿತ ಚಿತ್ರ ನಿರ್ಮಾಣದ ಹಕ್ಕನ್ನು ಯಾರಿಗೂ ನೀಡಲು ಲ್ಲ.

2009ರಲ್ಲಿ ನನ್ನ ಬಳಿಗೆ ಅಲ್ತಾಫ್ ಚೊಕ್ಕಬೆಟ್ಟು ಎಂಬುವ ನು ಬಂದು ತನಗೆ ಈ ಕಾದಂಬರಿಯಾಧಾರಿತ ಚಲನಚಿತ್ರ ಸಲು ಅನುಮತಿ ನೀಡಬೇಕೆಂದು ಕೇಳಿದಾಗ ಆತನಿಗೆ D.C ಯೊಡನಿರುವ ಒಪ್ಪಂದದ ವಿಷಯ ತಿಳಿಸಿ ನನ್ನ ಗಳು' ಕಾದಂಬರಿಯನ್ನು ನೀಡಿ 'ಇದನ್ನು ಬೇಕಾದರೆ ಸಿನಿಮಾ ಮಾಡು' ಹೇಳಿದ್ದೆ.

ಬಳಿಕ ಆತನು ನನಗೆ ತಿಳಿಸದೆ, ನನ್ನ ಅನುಮತಿ ಪಡೆಯದೆ ತಾನೇ ಕತೆಗೆಂದೂ, ನಾಯಕ ನಟನೆಂದೂ ಹೆಸರಿಟ್ಟುಕೊಂಡು 'ಬ್ಯಾರಿ' ಎಂಬ ಚಿತ್ರ ನಿರ್ಮಿಸಿದ್ದಾನೆಂದು ತಿಳಿಯಿತು. ಮಲಯಾಳಂ ಸಿನಿಮಾ ಕ್ಷೇತ್ರದ ಮಾಮು ಕೋಯೊ ಎಂಬವರು ಈ ಚಿತ್ರದಲ್ಲಿ ಅಭಿನಯಿಸುತ್ತಿದ್ದು ಅವರ ಸಂದರ್ಶನ ಸ್ಥಳೀಯ ಟಿ.ವಿ. ಚಾನಲ್‌ನಲ್ಲಿ ಪ್ರಸಾರವಾದಾಗಲಷ್ಟೆ ನನಗೆ ಈ ವಿಷಯ ತಿಳಿಯಿತು. ಅವರು ಸ್ಪಷ್ಟವಾಗಿ 'ಇದು ಸಾರಾ ಅಬೂಬಕ್ಕರ್ ಅವರ ಕಾದಂಬರಿಯಾಧಾರಿತ ಚಿತ್ರ' ಎಂದು ಹೇಳಿದರು. ಹಾಗೂ ಅದಕ್ಕೆ ನನ್ನ ಅನುಮತಿ ಪಡೆದಿಲ್ಲವೆಂದು ತಿಳಿದಾಗ ಅವರೇ ಆತನೊಡನೆ ನನ್ನ ಅನುಮತಿ ಪಡೆಯಲು ಒತ್ತಾಯಿಸಿದ್ದರೆಂದು ಅವರೇ ನನ್ನೊಡನೆ ಹೇಳಿದರು.

ಈ ವಿಷಯ ತಿಳಿದಕೂಡಲೇ ನಾನು ಆಗ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾದ ಜಯಮಾಲಾ ಅವರಿಗೂ, N.F.D.C, ವಾರ್ತಾ ಇಲಾಖೆ, ಕಲರ್ ಲ್ಯಾಬ್‌ಗೂ ಈ ಚಿತ್ರ ಬಿಡುಗಡೆಗೆ ಅನುಮತಿ ನೀಡಬಾರದೆಂದು ಪತ್ರ ಬರೆದಿದ್ದೆ. ಬಳಿಕ ಮಂಗಳೂರಿನ ನ್ಯಾಯಾಲಯದಲ್ಲೂ ದೂರು ನೀಡಿದ್ದೇನೆ. ಈಗ ಆತನು ಮತ್ತೊಮ್ಮೆ ಈ ಚಿತ್ರದ ಬಿಡುಗಡೆಗೆ ಸಿದ್ಧತೆ ನಡೆಸುತ್ತಿದ್ದಾನೆ. ನಾನು ಈ ಕಾದಂಬರಿ ಬರೆದಾಗ ನನ್ನ ಮೇಲೆ ಆಕ್ರಮಣ ಮಾಡಿದ ಜನಾಂಗವೇ ಈಗ ನನ್ನ ಕಾದಂಬರಿಯನ್ನು ಕದ್ದು ಚಲನಚಿತ್ರ ನಿರ್ಮಿಸಿದ್ದಾರೆ!



ಈ ಕಾದಂಬರಿಯ ಕುರಿತು ಇನ್ನೂ ಒಂದು ವಿಷಯವನ್ನು ಹೇಳಬೇಕಾಗಿದೆ.

ಈ ಕೃತಿಯನ್ನು ಇಂಗ್ಲಿಷ್ ಭಾಷೆಗೆ ಭಾಷಾಂತರಿಸಿ ಪ್ರಕಟಿಸಲು ಚೆನ್ನೈನ ಮ್ಯಾಕ್‌ಮಿಲನ್ ಸಂಸ್ಥೆಯ ಮಿನಿಕೃಷ್ಣನ್ ಎಂಬವರು ನನ್ನನ್ನು ಸಂಪರ್ಕಿಸಿದರು. ವನಮಾಲಾ ವಿಶ್ವನಾಥ್ ಎಂಬವರು ಇದನ್ನು ಅನುವಾದಿಸಿದರು. ಈ ಅನುವಾದ ಅಷ್ಟೊಂದು ತೃಪ್ತಿಕರವಾಗಿರಲಿಲ್ಲವಾದರೂ ಮೊದಲೇ ಒಪ್ಪಂದಕ್ಕೆ ಸಹಿ ಹಾಕಿದ್ದ ಕಾರಣ ನಾನು ಅನುಮತಿ ನೀಡಬೇಕಾಯಿತು. ಇದರ ಕೃತಿ ಸ್ವಾಮ್ಯವನ್ನು ನಾನು ಯಾರಿಗೂ ನೀಡಿರದಿದ್ದರೂ ಮ್ಯಾಕ್‌ಮಿಲನ್ ಸಂಸ್ಥೆ ಅನುವಾದಕರಿಗೂ ಕೃತಿ ಸ್ವಾಮ್ಯ ನೀಡಿತು. ಇದನ್ನು ತೆಲುಗು ಭಾಷೆಗೆ ಭಾಷಾಂತರಿಸಿದ ಹೈದರಾಬಾದ್ ಬುಕ್ ಟ್ರಸ್ಟ್ ನನ್ನ ಅನುಮತಿಗೆ ಪತ್ರ ಬರೆದು ಸಂಭಾವನೆಯನ್ನು ಅನುವಾದಕಿಗೆ ನೀಡುವೆವೆಂದಾಗ ನಾನು ಎಚ್ಚರಗೊಂಡು ಕೂಡಲೇ ಲಾಯರ್ ಮುಖಾಂತರ ಮ್ಯಾಕ್‌ಮಿಲನ್ ಸಂಸ್ಥೆಗೆ ನೋಟೀಸ್ ಕಳುಹಿಸಿದೆ. ಮುಂದಿನ ಮುದ್ರಣದಲ್ಲಿ ಆ ತಪ್ಪನ್ನು ಸರಿಪಡಿಸುವೆವೆಂದು ಅವರು ನನಗೆ ಆಶ್ವಾಸನೆ ನೀಡಿದರು.

ಈಗ ಆ ಇಡೀ ಕಾದಂಬರಿಯ ಇಂಗ್ಲಿಷ್ ಅನುವಾದವನ್ನು ಮ್ಯಾಕ್‌ಮಿಲನ್ ಸಂಸ್ಥೆ ಇಂಟರ್‌ನೆಟ್‌ನಲ್ಲಿ ಪ್ರಕಟಿಸಿ ಒಂದು ಪ್ರತಿಗೆ ಹತ್ತು ಡಾಲರ್ ಬೆಲೆ ಎಂದೂ, ಬೇಕಾದವರು ಓದಿಕೊಳ್ಳಬಹುದೆಂದೂ ಜಾಹೀರಾತು ನೀಡಿದೆ. ಹಾಗೆ ಓದಿಕೊಳ್ಳಬೇಕಾದರೆ ಕೂಡಲೇ ಮ್ಯಾಕ್‌ಮಿಲನ್ ಸಂಸ್ಥೆಯ ಅಕೌಂಟ್‌ಗೆ ಹತ್ತು ಡಾಲರ್ ಸಲ್ಲಿಸುವ ವ್ಯವಸ್ಥೆ ಇದೆಯೆಂದು ತಿಳಿದು ಬಂದಿದೆ.

ಮಾತ್ರವಲ್ಲ ಇಂದು ರಾಷ್ಟ್ರಾದ್ಯಂತ ಹಲವಾರು ಕಾಲೇಜುಗಳಲ್ಲಿ ಈ ಕೃತಿ ಪಠ್ಯ ಪುಸ್ತಕವಾಗಿ ಮಾರಾಟವಾಗುತ್ತಿದೆ. ಇಂತಹ ಯಾವ ವಿಷಯವನ್ನೂ ಮೂಲ ಲೇಖಕಿಯಾದ ನನಗೆ ತಿಳಿಸಿಯೇ ಇಲ್ಲ. ಈ ವಂಚನೆಯಲ್ಲಿ ಅನುವಾದಕಿಯ ಪಾಲು ಇದೆಯೇ ಎಂದು ನನಗೆ ತಿಳಿಯದು. ಮ್ಯಾಕ್‌ಮಿಲನ್‌ನಂತಹ, ಪ್ರಾಮಾಣಿಕತೆಗೆ ಹೆಸರಾದ ಬ್ರಿಟಿಷ್ ಸಂಸ್ಥೆ ಇಷ್ಟು ಕೆಳಮಟ್ಟಕ್ಕಿಳಿದು ಲೇಖಕ, ಲೇಖಕಿಯರನ್ನು ವಂಚಿಸ ಬಹುದೆಂಬ ಕಲ್ಪನೆಯೇ ನನಗಿರಲಿಲ್ಲ.

ಮುಸ್ಲಿಂ ಮಹಿಳೆಯೋರ್ವಳು ಸಾಹಿತ್ಯ ಕ್ಷೇತ್ರ ಪ್ರವೇಶಿಸಿದಾಗ ಎಂತೆಂತಹ ವಂಚಕರೆಲ್ಲಾ ಹೊಂಚು ಹಾಕಿ ಕಾಯುತ್ತಿರುವರೆಂಬ ಕಲ್ಪನೆಯೂ ನನಗಿರಲಿಲ್ಲ, ನಾನು ಓರ್ವ ಮಹಿಳೆ; ಅಜ್ಞಳಾದ ಮುಸ್ಲಿಂ ಮಹಿಳೆ ಎಂಬುದು ಈ ಜನರ ತಿಳಿವಳಿಕೆಯಾಗಿರಬಹುದು. ಪುರುಷ ಪ್ರಧಾನ ವ್ಯವಸ್ಥೆ ಮಹಿಳೆಯರನ್ನು ಎಷ್ಟೊಂದು ರೀತಿಯಲ್ಲಿ ಶೋಷಣೆ ಮಾಡುತ್ತಿದೆ; ಕೆಲವೊಮ್ಮೆ ಮಹಿಳೆಯರೂ ಕೂಡಾ ಇಂತಹ ವಂಚನೆಗಳಲ್ಲಿ ಭಾಗಿಯಾಗುತ್ತಾರೆ ಎಂಬುದೂ ಕೂಡಾ ನೋವಿನ ವಿಷಯವಾಗಿದೆ.

ಅನುವಾದಕರನ್ನು ಒಂದು ರೀತಿಯಲ್ಲಿ 'ಬಂದಣಿಗೆ' ಎಂದು ಕರೆಯಬೇಕಾಗಿದೆ. ಯಾಕೆಂದರೆ ಏನೂ ಶ್ರಮ ಪಡದೆ, ಒಂದು ಕೃತಿಯನ್ನು ಅನುವಾದಿಸಿಕೊಂಡು ಅದರ ಪೂರ್ತಿ ಹಕ್ಕನ್ನೆ ಕಸಿದುಕೊಂಡವರನ್ನು ಇನ್ನೇನೆಂದು ಕರೆಯಬೇಕು? ಭಾಷಾಂತರವನ್ನು ನಾನೂ ಮಾಡಿದ್ದೇನೆ. ಮಲಯಾಳದಿಂದ ಕನ್ನಡಕ್ಕೆ ಐದು ಕೃತಿಗಳನ್ನು ಅನುವಾದಿಸಿದ್ದೇನೆ. ಮೊದಲೇ ಮೂಲ ಲೇಖಕರ ಅನುಮತಿ ಪಡೆದು, ಸಂಭಾವನೆಯನ್ನು ತೀರ್ಮಾನಿಸಿ ಪುಸ್ತಕ ಬಿಡುಗಡೆಯ ದಿನವೇ ಸಂಭಾವನೆಯ ಅರ್ಧ ಭಾಗವನ್ನು ಅವರಿಗೆ ನೀಡಿ ಪೂರ್ತಿ ಮಾರಾಟವಾದ ಬಳಿಕ ಸಂಭಾವನೆಯ ಉಳಿದ ಮೊತ್ತವನ್ನು ಅವರಿಗೆ ನೀಡಿದ್ದೇನೆ. ಮತ್ತು ಕೃತಿಸ್ವಾಮ್ಯವು ಮೂಲ ಲೇಖಕರದ್ದೇ ಆಗಿರುತ್ತದೆ. ಇಂತಹ ಪ್ರಾಮಾಣಿಕತೆಯನ್ನು ನಾನು ತೋರುತ್ತಾ ಬಂದಿದ್ದೇನೆ. ಇತರರಿಂದಲೂ ನಾನು ಇಂತಹ ನಡವಳಿಕೆಯನ್ನೇ ನಿರೀಕ್ಷಿಸುತ್ತೇನೆ.

• ಸಾರಾ ಅಬೂಬಕ್ಕರ್



ಜಿಮ್ ನಿರ್ಮಿಸಿದ ಪುಟ್ಟ ಸ್ವರ್ಗ

> ಕಾರ್ಬೆಟ್‌ನ ಈ ಹಳ್ಳಿಯಲ್ಲಿ ಕತೆ, ಪುರಾಣ, ವಾಸ್ತವ ಇವೆಲ್ಲ ಒಳ್ಳೆ ಎಂತಾ ಕಲಸುಮೇಲೋಗರ ಅಂದರೆ ಒಂದರಿಂದ ಇನ್ನೊಂದನ್ನು ಬೇರ್ಪಡಿಸುವುದೇ ಕಷ್ಟ. ದೇವ್ವನ್ ಗೋಸ್ವಾಮಿ ಎಂಬ ಮುದುಕ ಕಾರ್ಬೆಟ್ ಬಗ್ಗೆ ಮಾತಾಡುವುದು ಕೇಳಿದರೆ ಈತ ಕಾರ್ಬೆಟ್ ಅನ್ನು ನಿನ್ನೆ ತಾನೇ ಭೇಟಿ ಮಾಡಿರಬೇಕು ಅನ್ನಿಸುತ್ತದೆ!

ಕಾರ್ಬೆಟ್‌ನ ಪುಟ್ಟ ಹಳ್ಳಿ ಛೋಟಿ ಹಲ್ದ್ವಾನಿ ಕಾಲಾಢುಂಗಿಯ ಹತ್ತಿರ ಇದೆ. ಅದನು ಒಂದು ಕಾಲಮಾನದ ಹಿಂದೆ ಹೇಗೆ ವರ್ಣಿಸಿದ್ದನೋ ಅಷ್ಟೇ ಸುಂದರವಾಗಿ ಇಂದೂ ಇದೆ.

ಆತ ತನ್ನ ಜೊತೆ ಇರಲು 1915ರಲ್ಲಿ ಬೆಟ್ಟ ಪ್ರದೇಶದಿಂದ ಕರೆತಂದಿದ್ದ 40 ಕುಟುಂಬಗಳು ಈಗ ಬೆಳೆದು ಅವುಗಳ ಸಂಖ್ಯೆ ಹೆಚ್ಚಿದೆ. ಅವರ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಇನ್ನೂ ಕಾರ್ಬೆಟ್ ಕೊಟ್ಟ ಒಟ್ಟು 221 ಎಕರೆ ಪ್ರದೇಶದಲ್ಲಿ ಕಬ್ಬು, ಸೋಯಾ, ಅರಿಶಿನ, ಶುಂಠಿ, ಟೊಮಾಟೊ, ಹಣ್ಣು ಇತ್ಯಾದಿಗಳನ್ನು ಬೆಳೆಯುತ್ತಾರೆ. ಆತ ಭಾರತದಿಂದ 1947ರಲ್ಲಿ ಕೆನ್ಯಾಗೆ ಹೋಗುವ ಮೊದಲು ಈ ಭೂಮಿಯನ್ನು 40 ಭಾಗ ಮಾಡಿ ಎಲ್ಲರಿಗೂ ಹಂಚಿ ಹೋದ.

ಈಗ ಹಳ್ಳಿಯಲ್ಲಿ ಇರುವವರಲ್ಲಿ ಕಾರ್ಬೆಟ್ ಅನ್ನು ಕಂಡವರು ಕಡಿಮೆ. ಹಣ್ಣು ಹಣ್ಣು ಮುದುಕಿ ಜೇವಂತಿ ದೇವಿಗೆ ಕ್ರಿಸ್ಮಸ್ ಸಮಯದಲ್ಲಿ ಮಕ್ಕಳೆಲ್ಲಾ ಕಾರ್ಬೆಟ್ ಮನೆಯ ಮುಂದೆ ಸಾಲಾಗಿ ನಿಲ್ಲುತ್ತಿದ್ದುದು ಇನ್ನೂ ಚೆನ್ನಾಗಿ ನೆನಪಿದೆ. ಚಳಿಗಾಲದ ತಿಂಗಳುಗಳಲ್ಲಿ ಮಾತ್ರ ಕಾರ್ಬೆಟ್ ಈ ಮನೆಯಲ್ಲಿ ಬಂದು ಇರುತ್ತಿದ್ದ ಅಂತ ಹೇಳಿದಳು ಜೇವಂತಿ. "ಕಾರ್ಬೆಟ್ ಸಾಬ್ ಮತ್ತು ಅವನ ತಂಗಿ ಮ್ಯಾಗಿ ಮೇಮ್ ಸಾಬ್ ನಮಗೆ ಕಾಫಿ, ಕೇಕು ಎಲ್ಲಾ ಕೊಡ್ತಾ ಇದ್ದರು. ನಮ್ಮ ಹಬ್ಬ ಇದ್ದಾಗ ಅವರಿಗೆ ಸಿಹಿ ಕೊಡ್ತಾ ಇದ್ವಿ" ಅಂದಳು. ಜೇವಂತಿಯ ಗಂಡ ಕೇಶವ್ ದತ್ ಪಾಂಡೆಯ ಕುಟುಂಬವನ್ನು ಕಾರ್ಬೆಟ್ ರಾಣಿಖೇತ್‌ಯಿಂದ ಕರೆದುಕೊಂಡು ಬಂದಿದ್ದ. ಕೇಶವ್ ಇಲ್ಲಿ ಮನೆ ಮಾಡಿ ಬೇಸಾಯ ಶುರು ಮಾಡಿದ ಮೊಟ್ಟ ಮೊದಲ ಗೇಣಿ ರೈತರಲ್ಲಿ ಒಬ್ಬ. 223 ಎಕರೆ ಜಾಗವನ್ನು 1,500 ರೂಪಾಯಿಗಳಿಗೆ ಕೊಂಡಿದ್ದ ಕಾರ್ಬೆಟ್ ಕೇಶವ್‌ನಂತಹ ಅನೇಕ ಕುಟುಂಬಗಳನ್ನು ಘಢವಾಲ್, ಕುಮಾವ್ ಪ್ರದೇಶಗಳಿಂದ ಇಲ್ಲಿ ನಿಮ್ಮ ಜೀವನ ಹಸನಾಗುತ್ತದೆ ಅಂತ ಭರವಸೆ ನೀಡಿ ಬೇಸಾಯ ಮಾಡಲಿಕ್ಕೆ ಕರೆತಂದಿದ್ದ. ಈ ಜಾಗಕ್ಕೆ ಛೋಟಿ ಹಲ್ದ್ವಾನಿ- ಅಂದರೆ ಪುಟ್ಟ ಸ್ವರ್ಗ ಎಂದು ಹೆಸರಿಟ್ಟ. ಇದು ಕಾರ್ಬೆಟ್‌ನ ಜಮೀನ್ದಾರಿ ಅವತಾರ.

ಹೀಗೆ ಬಂದ ಕುಟುಂಬಗಳ ಜೀವನ ಇಲ್ಲಿ ಮುಂಚೆಗಿಂತ ಸ್ವಲ್ಪ ಮೇಲಾದದ್ದಂತೂ ಹೌದು.



ಕಾರ್ಬೆಟ್ ಇಲ್ಲಿ ದೊರಕಿಸಿಕೊಟ್ಟ ಮೊದಲ ಸೌಕರ್ಯಗಳಲ್ಲಿ ಇಲ್ಲಿನ ಭೂಮಿಗೆ ನೀರಿನ ಸೌಕರ್ಯವೂ ಒಂದು. ಪಕ್ಕದಲ್ಲಿ ಹರಿಯುವ ಬೋರ್ ನದಿಗೆ ಅಣೆಕಟ್ಟು ಕಟ್ಟಿ ಅಲ್ಲಿನ ನೀರನ್ನು ಗದ್ದೆಯ ಕಾಲುವೆಗಳ ಮೂಲಕ ಹಾಯಿಸುವ ವ್ಯವಸ್ಥೆ ಮಾಡಿದ. ಇಲ್ಲಿ ಹರಿಯುವ ನೀರು ಇಲ್ಲದ ಋತುವೇ ಇಲ್ಲ ಅಂತ ಜೇವಂತಿಯ ಮೊಮ್ಮಗ ಮೋಹನ್ ಪಾಂಡೆ ಹೇಳಿದ. "ನಾವು ಮೊದಲು ಇಲ್ಲಿ ಬಂದಾಗ ತುಂಬಾ ಕಲ್ಲು, ಮುಳ್ಳು ಇತ್ತು, ಕಾರ್ಬೆಟ್ ಸಾಬ್ ಸುಮಾರು ಸಲ ನೆಲವನ್ನು ಉತ್ತಿಸಿದ್ದನಂತೆ. ನಂತರ ಕುದುರೆಗಳನ್ನು ಇಲ್ಲಿ ಒಂದೇಸಮನೆ ಓಡಿಸಲಾಯಿತಂತೆ" ಅಂತ ಕತೆ ಶುರುಮಾಡಿದ ಮೋಹನ್.

ಕಾರ್ಬೆಟ್‌ನ ಈ ಹಳ್ಳಿಯಲ್ಲಿ ಕತೆ, ಪುರಾಣ, ವಾಸ್ತವ ಇವೆಲ್ಲ ಒಳ್ಳೆ ಎಂತಾ ಕಲಸುಮೇಲೋಗರ ಅಂದರೆ ಒಂದರಿಂದ ಇನ್ನೊಂದನ್ನು ಬೇರ್ಪಡಿಸುವುದೇ ಕಷ್ಟ. ದೇವ್ವನ್ ಗೋಸ್ವಾಮಿ ಎಂಬ ಮುದುಕ ಕಾರ್ಬೆಟ್ ಬಗ್ಗೆ ಮಾತಾಡುವುದು ಕೇಳಿದರೆ ಈತ ಕಾರ್ಬೆಟ್ ಅನ್ನು ನಿನ್ನೆ ತಾನೇ ಭೇಟಿ ಮಾಡಿರಬೇಕು ಅನ್ನಿಸುತ್ತದೆ!

ಪ್ರತಿದಿನ ಹಾಲು ಮತ್ತು ಜೇನುತುಪ್ಪವನ್ನು ಕಾರ್ಬೆಟ್ ಮನೆಗೆ ತಾನೇ ಒಯ್ಯುತ್ತಿದ್ದುದಾಗಿ ಗೋಸ್ವಾಮಿ ಹೇಳುತ್ತಾನೆ. "ನವೆಂಬರ್ ಇಂದ ಮಾರ್ಚ್‌ವರೆಗೆ ಕಾರ್ಬೆಟ್ ಇಲ್ಲಿ ಇರುತ್ತಿದ್ದ; ನಾನು ಮತ್ತು ಅಪ್ಪ ಹಾಲು ಕೊಡಲಿಕ್ಕೆ ಹೋದಾಗಲೆಲ್ಲ ಮ್ಯಾಗಿ ಮೇಮ್‌ಸಾಬ್ ನನ್ನ ಅಪ್ಪನ್ನ ಗೋಸ್ವಾಮಿಗೆ 'ಈ ಸಣ್ಣ ಹುಡುಗನ್ನ ಈ ಚಳಿಯಲ್ಲಿ ಕರೆದುಕೊಂಡು ಬರಬೇಡ. ನ್ಯುಮೋನಿಯ ಬರುತ್ತೆ' ಅಂತ ಹೇಳುತ್ತಿದ್ದರು. ಆದರೆ ನಾನು ಹೋಗುವುದನ್ನು ಯಾವತ್ತೂ ನಿಲ್ಲಿಸಲಿಲ್ಲ" ಅಂತ ನಮಗೆ ಮತ್ತೊಂದು ಕತೆ ಹೇಳಲಿಕ್ಕೆ ಶುರು ಮಾಡಿದ.

ಅಲ್ಲಿಂದ ಮುಂದೆ ಕತೆ ಇನ್ನಷ್ಟು ಮತ್ತಷ್ಟು ರೋಚಕವಾಗುತ್ತಾ ಹೋಗಿ ಒಂದು ಹಂತದಲ್ಲಿ ನಂಬಲು ಅಸಾಧ್ಯವಾದ ಪುರಾಣವಾಗಿ ತೋರಲಾರಂಭಿಸುತ್ತದೆ. ಕಾರ್ಬೆಟ್ ಹುಲಿ ಬೇಟೆಗೆ ಹೊರಟಾಗಲೆಲ್ಲಾ ತಾನೂ ಹೋಗುತ್ತಿದ್ದೆ ಅಂದ. ಪೋವಲ್ಗರ್‌ನ ಏಕಾಂಗಿ ಹುಲಿ ("ಬ್ಯಾಚುಲರ್ ಆಫ್ ಪೋವಲ್ಗರ್") ಅನ್ನು ಕಾರ್ಬೆಟ್ ಕೊಂದಾಗ ತಾನು ಜೊತೆಗೆ ಇದ್ದುದಾಗಿ ಕೊಚ್ಚಿಕೊಂಡ. ಕಾರ್ಬೆಟ್ ಹುಲಿಯನ್ನು ಆನೆಯೇರಿ ಕೊಂದ ಅಂತ ಮತ್ತೊಂದು ಸವಿವರ ಕತೆ ಶುರು ಮಾಡಿಕೊಂಡ.


ಕಾರ್ಬೆಟ್ ಅನ್ನು ಅವನ ಪುಸ್ತಕಗಳಿಂದ ಬಲ್ಲವರಿಗೆ ಈತ ನರಭಕ್ಷಕ ಹುಲಿಗಳನ್ನು ಯಾವತ್ತೂ ಒಬ್ಬನೇ, ಕಾಲ್ನಡಿಗೆಯಲ್ಲಿ ಬೇಟೆಯಾಡಿದ್ದು ಅಂತಲೂ ಗೊತ್ತಿರುತ್ತದೆ. ಈ ಪೋವಲ್ಗರ್ ಬ್ರಹ್ಮಚಾರಿಯ ಕತೆಯನ್ನೂ ಹೇಳುವ ತನ್ನ 'ಮಾನ್ ಈಟರ್ಸ್ ಆಫ್ ಕುಮಾವ್' ಎಂಬ ಸಂಕಲನದಲ್ಲಿ ಈ ಹುಲಿರಾಯನನ್ನು ಹೆಣ್ಣು ಹುಲಿಯ ಘರ್ಜನೆ ಅನುಕರಿಸಿ ತಾನು ಸೆಳೆದಿದ್ದಾಗಿ ಕಾರ್ಬೆಟ್ ಬರೆಯುತ್ತಾನೆ! ಹುಲಿ ತಾನು ಅಂದುಕೊಂಡದ್ದಕ್ಕಿಂತ ತುಂಬಾ ಮುಂಚಿತವಾಗಿ ಬಂದುಬಿಟ್ಟಾಗ ಕಾರ್ಬೆಟ್‌ಗೆ ಹತ್ತಿ ಕೂರಲಿಕ್ಕೆ ಮರ ತಕ್ಷಣಕ್ಕೆ ಸಿಕ್ಕುವುದಿಲ್ಲ, ಹುಲಿ ಮುಂದಿನ ಗಿಡಗಳ ಸಂದಿಯಿಂದ ಹೊರಬರಬಹುದು ಎಂದುಕೊಂಡು ಹುಲ್ಲಿನ ಮೇಲೆ ಸಾಪಾಟಾಗಿ ಮಲಗುತ್ತಾನೆ. ಆದರೆ ಆ ಬ್ರಹ್ಮಚಾರಿ ಕಾರ್ಬೆಟ್ ಬಲಭಾಗದ ಪೊದೆಗಳಿಂದ ಇದ್ದಕ್ಕಿದ್ದಂತೆ ಪ್ರತ್ಯಕ್ಷ ಆಗಿಬಿಟ್ಟು ಕಾರ್ಬೆಟ್ ಅನ್ನು ಕಕ್ಕಾಬಿಕ್ಕಿ ಮಾಡಿಬಿಡುತ್ತಾನೆ. ಒಂದು ಗುಂಡು ಹಾರಿಸಿ ಬ್ರಹ್ಮಚಾರಿಗೆ ಭಾರಿ ಗಾಯ ಮಾಡುತ್ತಾನೆ. ಅಂದು ತಪ್ಪಿಸಿಕೊಂಡ ಹುಲಿಯನ್ನು ಮುಂದಿನ ದಿನ ಕಾರ್ಬೆಟ್ ಮತ್ತೆ ಹುಡುಕಿ ಸಾಯಿಸುತ್ತಾನೆ.

ದೇವ್ವನ್ ಹೇಳಿದ ಕಾರ್ಬೆಟ್ ಆನೆಯ ಬೆನ್ನೇರಿ ಹುಲಿ ಕೊಂದ ಕತೆ ಸಂಪೂರ್ಣ ಸುಳ್ಳು ಅಂತಲೂ ಅಲ್ಲ. ಆ ಮುದುಕ ಘಟನೆಯನ್ನು ಕಣ್ಣಿಗೆ ಕಟ್ಟುವಂತೆ ಸವಿವರವಾಗಿ ಹೇಳಿದ: "ಹುಲಿ ಅಲ್ಲೇ ಇತ್ತು, ಆದರೆ ಅದು ನಮ್ಮನ್ನು ನೋಡೇ ಇರಲಿಲ್ಲ, ಆಗ ಕಾರ್ಬೆಟ್ ಸಾಬ್ ಬೇಕಂತ ಒಂದು ಒಣಟೊಂಗೆ ಮುರಿದರು. ಆಗ ಹುಲಿ ಈ ಕಡೆ ತಿರುಗಿ ನಮಗೆ ಸರಿಯಾಗಿ ಗುರಿಗೆ ಸಿಕ್ಕಿತ್ತು, ತಕ್ಷಣ ಕಾರ್ಬೆಟ್ ಸಾಬ್ ಗುಂಡು ಹೊಡೆದರು."

ದೇವ್ವನ್ ಜೊತೆ ಇದ್ದ ಬಿಳಿ ಶಿಕಾರಿ ಬೇರೆ ಯಾರೋ ಆಗಿದ್ದಿರಲೂಬಹುದು. ಕಾರ್ಬೆಟ್ ತನ್ನ "ಮೈ ಇಂಡಿಯಾ" ಪುಸ್ತಕದಲ್ಲಿ ಹೇಗೆ ಬಂಡಿಗಟ್ಟಲೆ ಬ್ರಿಟಿಷರು ಯುನೈಟೆಡ್ ಪ್ರಾವಿನ್ಸ್ (ಈಗಿನ ಉತ್ತರ ಪ್ರದೇಶ್ ಮತ್ತು ಉತ್ತರಾಂಚಲ್)ಗೆ ಆನೆ ಮೇಲೇರಿ ಹುಲಿ ಬೇಟೆಯಾಡಲು ಬಂದು ಇಳಿಯುತ್ತಿದ್ದರು ಅಂತ ಬರೆಯುತ್ತಾನೆ. ಇಂತಹ ಬಹಳಷ್ಟು "ಶಿಕಾರಿ ಆಟ"ವನ್ನು ಸ್ಥಳೀಯ ಹಳ್ಳಿಗರ ಸಹಕಾರದಿಂದ ಏರ್ಪಾಟು ಮಾಡಲಾಗುತ್ತಿತ್ತು.

ನಾನು ಇದರ ಬಗ್ಗೆ ಯೋಚನೆ ಮಾಡುತ್ತಿರುವಂತೆ ದೇವ್ವನ್ ಕತೆ ಇನ್ನೊಂದು ತಿರುವು ಪಡೆದುಕೊಂಡಿತ್ತು. ಪುರಾಣದ ಶೈಲಿ ಬಿಟ್ಟು ವಾಸ್ತವ ಚಿತ್ರಣದ ಶೈಲಿಗೆ ಇಳಿದಿದ್ದ: "ಬ್ಯಾಚುಲರ್ ಆಫ್ ಪೋವಲ್ಗರ್"ನ್ನು ಊರಿಗೆ ತಂದು ಅಳೆದು ನೋಡಿದಾಗ ಅದು ಮೂಗಿನಿಂದ ಬಾಲದ ತುದಿಯವರೆಗೆ 10 ಅಡಿ ಏಳು ಇಂಚು ಇತ್ತಂತೆ! ಇಡೀ ಯುನೈಟೆಡ್ ಪ್ರಾವಿನ್ಸ್‌ನಲ್ಲಿ ಇದೇ ಅವನು ಕಂಡ ಅತ್ಯಂತ ದೊಡ್ಡ ಹುಲಿ ಅಂತ ಕಾರ್ಬೆಟ್ ಕೂಡ ಬರೆಯುವುದೇನೋ ಸತ್ಯವೇ. ಈ ಹುಲಿ ಅಸಲಿನಲ್ಲಿ ನರಭಕ್ಷಕ ಆಗಿರಲೇ ಇಲ್ಲ ಸುಮ್ಮನೆ ಸಾಯಿಸಿಬಿಟ್ಟೆ ಅಂತ ಆಮೇಲೆ ಕಾರ್ಬೆಟ್ ಬೇಜಾರು ಮಾಡಿಕೊಳ್ಳುತ್ತಾನೆ.

ಛೋಟಿ ಹಲ್ದ್ವಾನಿಯ ಜನರಿಗೆ ತಮ್ಮ ಪೈರನ್ನು ಕಾಡುಪ್ರಾಣಿಗಳ ಕಾಟದಿಂದ ಕಾಪಾಡಿಕೊಳ್ಳಲು ಕಾರ್ಬೆಟ್ ಕೊಟ್ಟ ಬಂದೂಕನ್ನು ಇನ್ನೂ ತುಂಬಾ ಜತನದಿಂದ ಅಲ್ಲಿನ ಜನ ಇಟ್ಟುಕೊಂಡಿದ್ದಾರೆ. ಆಗಿನಕಾಲಕ್ಕೆ ಸರ್ಕಾರ ಇಡೀ ನಲವತ್ತು ಕುಟುಂಬಗಳ ಹಳ್ಳಿಗೆ ಒಂದು ಬಂದೂಕು ಇಟ್ಟುಕೊಳ್ಳಲು ಮಾತ್ರ ಪರವಾನಗಿ ಕೊಟ್ಟಿತ್ತು, ಆದರೆ ಬಿಳಿ ಸಾಹೇಬ ಕಾರ್ಬೆಟ್ ಹತ್ತಿರ ಬಂದೂಕುಗಳ ಒಂದು ದೊಡ್ಡ ಸಂಗ್ರಹವೇ ಇತ್ತು!



ಕಾರ್ಬೆಟ್ ಕೊಟ್ಟ ಈ ಸಿಂಗಲ್ ಬ್ಯಾರಲ್ ಬಂದೂಕು ಈಗ ತ್ರಿಲೋಕ್ ಸಿಂಗ್ ಕುಟುಂಬದ ಸುಪರ್ದಿಯಲ್ಲಿದೆ. ಅದು ಈಗಲೂ ಕೆಲಸ ಮಾಡುತ್ತದೆ! "ನೀವೇ ನೋಡಿ" ಅಂತ ತ್ರಿಲೋಕ್ ಸಿಂಗ್ ಹೆಂಡತಿ ಪಾರ್ವತೀದೇವಿ ನನ್ನ ಕೈಗೆ ಬಂದೂಕು ಕೊಟ್ಟಳು. ಹ್ಯಾಮರ್ ಬಳಸಿ ಬಳಸಿ ಸವೆದಂತೆ ಕಂಡರೂ, ಬಂದೂಕಿನ ಕುದುರೆ ಮಾತ್ರ ಸ್ವಲ್ಪವೂ ತೊಂದರೆ ಇಲ್ಲದೆ ಸರಿಯಾಗಿ ಕೆಲಸ ಮಾಡುತ್ತಿದೆ!

ಪಾರ್ವತಿಯ ಮನೆಯ ಹಿಂದಿನ ಅಂಗಳ ಕಾರ್ಬೆಟ್ ಕಾಲದ ಸಂಗ್ರಹಾಲಯದ ಮತ್ತೊಂದು ವಸ್ತುವಿನಂತೆ ತೋರುತ್ತದೆ. ಹಿಂದೆ ಎಲ್ಲರೂ ಒಟ್ಟಿಗೆ ಕೂತು ಹಳ್ಳಿಯ ವ್ಯಾಜ್ಯಗಳನ್ನೆಲ್ಲಾ ಪರಿಹರಿಸಿಕೊಳ್ಳುತ್ತಿದ್ದ "ಚೌಪಾಲ್" ಅನ್ನುವ ದುಂಡನೆ ಕಟ್ಟೆ ಹಾಗೆಯೇ ಇದೆ. ಸ್ವಲ್ಪ ಮುಂಟಪದಂತಹ ಜಾಗ ಇನ್ನೂ ಹಾಗೆಯೇ ಇದೆ. ಸ್ವಲ್ಪ ಎತ್ತರದ ಜಾಗದಲ್ಲಿರುವ ಈ ಸ್ಥಳವನ್ನು ಫಸಲು ಬೆಳೆದುನಿಂತಾಗ ಅದರ ಮೇಲೆ ಕಣ್ಣಿಟ್ಟು ಕಾಯಲೂ ಬಳಸಲಾಗುತ್ತದೆ. ಇದರ ಮೆಟ್ಟಿಲುಗಳನ್ನು ಹತ್ತುವಾಗ ಈ ಪ್ರಪಂಚ ಕಾರ್ಬೆಟ್ ಕಾಲದಿಂದ ಈಗ ನಿಜವಾಗಿಯೂ ಭೌತಿಕ ಅರ್ಥದಲ್ಲಿ ಅಷ್ಟೇನೂ ಬದಲಾಗಿಲ್ಲವೇನೋ ಅನ್ನಿಸಿತು. ದೂರದಲ್ಲಿ ನೀರಾವರಿ ಪಂಪ್‌ಸೆಟ್ ಮತ್ತು ಟ್ರ್ಯಾಕ್ಟರ್‌ನ ಭಗ್ -ಭಗ್ ಸದ್ದು ಬಿಟ್ಟರೆ ಇನ್ನೆಲ್ಲ ನೂರು ವರ್ಷದ ಹಿಂದಿನ ಚಿತ್ರದಂತೆ ಕಾಣುತ್ತಿತ್ತು.

ಕಾಡುಪ್ರಾಣಿಗಳಿಗೆ, ಅದರಲ್ಲೂ ವಿಶೇಷವಾಗಿ ಕಾಡು ಹಂದಿಗಳಿಗೆ, ತಡೆಗೋಡೆಯಾಗಿ ಕಾರ್ಬೆಟ್ ಕಟ್ಟಿದ ಗೋಡೆ ಇನ್ನೂ ಹಾಗೆಯೇ ಇರುವುದಷ್ಟೇ ಅಲ್ಲದೆ ಕಟ್ಟಿದ ಉದ್ದೇಶವನ್ನು ಈಗಲೂ ಪೂರೈಸುತ್ತಲೂ ಇದೆ. ಕೆಲವು ಕಡೆ ಸ್ವಲ್ಪ ಹಾಳಾಗಿದ್ದರೂ ಛೋಟಿ ಹಲ್ದ್ವಾನಿ ಮತ್ತು ಅದನ್ನು ಮೂರು ದಿಕ್ಕುಗಳಲ್ಲಿ ಸುತ್ತಿರುವ ಕಾಡಿನ ಮಧ್ಯೆ ಇರುವುದು ಇದೊಂದೇ ತಡೆಗೋಡೆ.

ತನ್ನ "ಮೋತಿ" ಎಂಬ ಲೇಖನದಲ್ಲಿ ಕಾರ್ಬೆಟ್ ಈ ತಡೆಗೋಡೆ ಇದ್ದರೂ ಮೋತಿ ಸಿಂಗ್‌ನ ಆಲೂಗಡ್ಡೆ ಬೆಳೆಯನ್ನು ಒಂದು ದೊಡ್ಡ ಹಂದಿ ನಾಶ ಮಾಡಿತು ಎಂದು ಬರೆಯುತ್ತಾನೆ. ಮೋತಿಯ ಹೆಂಡತಿಗೆ ಆಗ ಕಾರ್ಬೆಟ್ ಸಾಬ್ ಮೇಲೆ ಕೆಂಡಮಂಡಲ ಕೋಪ ಬರುತ್ತದೆ. ಅವನಿಗೆ ಶಿಕಾರಿ ಹುಚ್ಚು ಈ ಬಿಳಿ ಸಾಬ್ ಹತ್ತಿಸದೆ ಇದ್ದರೆ ಅವನು ಊರಲ್ಲೇ ಇದ್ದು ಎಲ್ಲ ಗಂಡಸರ ಹಾಗೆ ಹೊಲ ಕಾಯುತ್ತಿದ್ದ, ಆಲೂಗಡ್ಡೆಗಳು ಉಳಿಯುತ್ತಿದ್ದವು ಅನ್ನೋದು ಅವಳ ವಾದ.

ಮೋತಿಗಾಗಿ ಕಾರ್ಬೆಟ್ ಕಟ್ಟಿಸಿ ಕೊಟ್ಟ ಪಕ್ಕಾ ಮನೆಯಲ್ಲಿ ಈಗ ಮೋತಿಯ ಮೊಮ್ಮಗ ಭುವನ್‌ಸಿಂಗ್ ಇದ್ದಾನೆ. ಭುವನ್ ಮೋತಿಯ ದೊಡ್ಡ ಮಗ ಒಳ್ಳೆ ಶಿಕಾರಿಯಾಗಿದ್ದ ಪಾನ್ ಸಿಂಗ್‌ನ ಮಗ. ಪಾನ್ ಸಿಂಗ್‌ಗೆ (ಅವನನ್ನು ಕಾರ್ಬೆಟ್ ಪುನ್ವಾ ಎಂದು ಕರೆಯುತ್ತಾನೆ) ತಾನು ಒಮ್ಮೆ ಶಿಕ್ಷೆ ಕೊಟ್ಟದ್ದರ ಬಗ್ಗೆ ಕಾರ್ಬೆಟ್ ಬರೆಯುತ್ತಾನೆ. ಬಂದೂಕನ್ನು ಮರಳಿನ ಮೇಲೆ ಇಟ್ಟದ್ದಕ್ಕೆ ಕೋಪಗೊಂಡು ಅವನ ಕೈಯ್ಯಲ್ಲೇ ಬಹಳಷ್ಟು ದೂರ ಆ ಭಾರಿ ತೂಕದ ಬಂದೂಕನ್ನು ಹೊರಿಸುತ್ತಾನೆ.

ಮೋತಿಯ ಮೊಮ್ಮಗನ ಕಣ್ಣಿನಲ್ಲಿ ಕಾರ್ಬೆಟ್ ತುಂಬಾ ಪ್ರೀತಿಯಿಂದ ವರ್ಣಿಸುವ ಮೋತಿಯ ಛಾಯೆಯೇನಾದರೂ ಕಾಣಬಹುದೇ ಅಂತ ಸಂಜೆಯ ಬೆಳಕಿನಲ್ಲಿ ಹುಡುಕಿದೆ. ಆದರೆ ಕಾರ್ಬೆಟ್ ಈ ಜನರ ಜೊತೆಗೆ ಒಂದು ಇಡೀ ಜೀವನ ಕಳೆದು ಕಂಡುಕೊಂಡದ್ದನ್ನು ನಾನು ನನ್ನ ಪ್ರವಾಸಿ ಕಣ್ಣಿನಿಂದ ಒಂದು ಸಂಜೆಯಲ್ಲಿ ಅಳೆಯಲು ಹೇಗೆ ತಾನೇ ಸಾಧ್ಯ?

ನನ್ನ ಕಣ್ಣು ಭುವನ್ ಸಿಂಗ್ ಎತ್ತಿಕೊಂಡಿದ್ದ ನಾಯಿ ಮರಿಯ ಕಡೆ ಹರಿಯಿತು. ಆ ನಾಯಿ ಕಾರ್ಬೆಟ್‌ನ ತುಂಬಾ ಪ್ರೀತಿಯ ಬೇಟೆ ನಾಯಿ ರಾಬಿನ್ ಥರಾನೇ ಇದೆ ಅನ್ನಿಸಿತು. ನಾನು ಹಾಗೆ ಹೇಳಿದ್ದನ್ನು ಕೇಳಿ ಭುವನ್‌ಗೆ ಭಯಂಕರ ನಗು ಬಂತು. "ಇದು ಭುತಿಯ ಎಂಬ ಜಾತಿಯ ಈ ಬೆಟ್ಟಗಳಲ್ಲಿ ಸಾಮಾನ್ಯವಾಗಿ ಇರುವ ನಾಯಿ ಅಷ್ಟೇ. ಎಲ್ಲವೂ ಸುಮಾರು ಹಿಂಗೆ ಇರ್ತಾವೆ" ಅಂತ ನಿನಗೆ ಇಷ್ಟೂ ಅರ್ಥ ಆಗೋದಿಲ್ಲವಾ ಎಂಬ ದನಿಯಲ್ಲಿ ಹೇಳಿದ.

ಛೋಟಿ ಹಲ್ದ್ವಾನಿಯಲ್ಲಿರುವ ಕಾರ್ಬೆಟ್‌ನ ಮನೆ ಈಗ ಮ್ಯೂಸಿಯಂ ಆಗಿದೆ. ಅಲ್ಲಿ ವಿಶಾಲ ಅಂಗಳದ ಒಂದು ಮೂಲೆಯಲ್ಲಿ ರಾಬಿನ್‌ನ ಗೋರಿ ಇದೆ. ಬಂಗಲೆಯ ಒಳಗೆ ಕಾರ್ಬೆಟ್ ಬಳಸಿದ ಅನೇಕ ವಸ್ತುಗಳು ಇವೆ. ಟೇಬಲ್, ಕುರ್ಚಿ, ಬಂದೂಕಿನ ಕೇಸುಗಳು, ಅವನು ಅನೇಕ ಲೇಖನಗಳಲ್ಲಿ ಪ್ರಸ್ತಾಪಿಸುವ ಅವನ ನಲವತ್ತು ಪೌಂಡು ತೂಕದ ಟೆಂಟು, ಬರೆದ ಪತ್ರಗಳ, ಲೇಖನಗಳ ಹಲವು ಪ್ರತಿಗಳು, ಅವನ ಕುಟುಂಬದ ಸದಸ್ಯರ ಚಿತ್ರಗಳು ಇತ್ಯಾದಿ. ಕೆನ್ಯಾದಿಂದ 1951ರಲ್ಲಿ ಕಾರ್ಬೆಟ್ ಸಾಯುವುದಕ್ಕೆ ಮೂರು ವರ್ಷ ಮುಂಚೆ ಅವನು ಬರೆದ ಪತ್ರದ ಜೆರಾಕ್ಸ್ ಪ್ರತಿ ಇಲ್ಲಿ ಇದೆ. ಅದರಲ್ಲಿ ಅವನ ಗೆಳೆಯರಾಗಿದ್ದ ಸುತ್ತಮುತ್ತಲ ಅನೇಕ ದೇವಾಲಯಗಳ ಅರ್ಚಕರಿಗೆ ದುಡ್ಡು ಕಳಿಸಿದ್ದರ ಬಗ್ಗೆ ಬರೆಯುತ್ತಾನೆ. ಬೆಳೆ ಚೆನ್ನಾಗಿ ಆಗ್ತಾ ಇದೆಯಾ, ಕಾಡುಹಂದಿಗಳ ಕಾಟ ಇನ್ನೂ ಇದೆಯಾ ಅಂತೆಲ್ಲಾ ವಿಚಾರಿಸಿಕೊಳ್ಳುತ್ತಾನೆ.

ಈ ಎಲ್ಲಾ ಪತ್ರಗಳ ನಡುವೆ ನನ್ನ ಕಣ್ಣಿಗೆ ವಿಶೇಷವಾಗಿ ಬಿದ್ದದ್ದು ಒಂದು ಪುಟ್ಟ ಜೆರಾಕ್ಸ್ ಅಲ್ಲದ ಮೂಲ ಪ್ರತಿಯೇ ಆಗಿದ್ದ ಪೇಪರ್. ಅದರ ಮೇಲೆ ಕಾರ್ಬೆಟ್ ತನ್ನ ಅಷ್ಟೇನೂ ಸುಂದರವಲ್ಲದ ಬರಹದಲ್ಲಿ ಎರಡು ವಾಕ್ಯ ಬರೆದು ಸಹಿ ಹಾಕಿದ್ದ: "ಎಲ್ಲದರಲ್ಲೂ ತುಂಬಾ ಹುಳುಕು ಹುಡುಕಬೇಡಿ. ಒಬ್ಬ ಕಾಡು ಮನುಷ್ಯ ತನ್ನ ಕತೆಗಳನ್ನು ಕಾಡಿನ ಭಾಷೆಯಲ್ಲಿ ಮಾತ್ರ ಹೇಳಲು ಸಾಧ್ಯ - ಜಿಮ್ ಕಾರ್ಬೆಟ್"

(ಮುಗಿಯಿತು)

ಅರಣ್ಯವಾಸಿ ಜಾನಪದ

ಒಂದು ವಿಮರ್ಶಾತ್ಮಕ ಟಿಪ್ಪಣಿ

ಮಾರ್ಚ್ 18, 19ರಂದು ಹಂಪಿ ಕನ್ನಡ ವಿವಿಯಲ್ಲಿ ... ಅಖಿಲ ಕರ್ನಾಟಕ ಜಾನಪದ ಸಮ್ಮೇಳನ ...ತು. ಇದನ್ನು ಕರ್ನಾಟಕ ವಿಶ್ವವಿದ್ಯಾಲಯದ ಜಾನಪದ ... ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ...ಗಳು ಸಂಯುಕ್ತವಾಗಿ ಆಯೋಜಿಸಿದ್ದವು. ಈ ...ಳನದಲ್ಲಿ ಮಾ 19 ರಂದು ನಾನು ಭಾಗವಹಿಸಿದ್ದೆ. ...ಒಂದು ವಿಮರ್ಶಾತ್ಮಕ ಟಿಪ್ಪಣಿ ಇದು. ಸಮ್ಮೇಳನ ...ನಪದದ ಜತೆಗಿನ ನಮ್ಮ ಕಲ್ಪನೆಗಳನ್ನು ಈ ಸಮ್ಮೇಳನದ ...ಳಿ ಹಾಕಿದರೆ ನಿರಾಸೆ ಹುಟ್ಟಿಸುವಂತಿತ್ತು. ವಿವಿ ...ಸುತ್ತಿದ್ದಂತೆ ಸಮ್ಮೇಳನದ ಬ್ಯಾನರ್ ತುಂಬಾ ಬೇಸರ ...ಆಹ್ವಾನಿಸುವಂತಿತ್ತು. ವಿವಿಯ ಭುವನ ವಿಜಯದಲ್ಲಿ ...ರ್ಯಕ್ರಮವಿತ್ತು. 50ರ ಆಸುಪಾಸು ವಿದ್ಯಾರ್ಥಿಗಳು, ...ಖ್ಯೆ ದಾಟದ ಅಧ್ಯಾಪಕರು, ಸಭೆಯಲ್ಲಿ ನಾಲ್ಕು ...ಷಣ ಮಂಡಿಸುವ ವಿದ್ವಾಂಸರು ಇದ್ದರು. ಸೆಮಿನಾ...ರೋದಾಗ ಪನ್ನಂಗಧರ ಅವರು ಬುಡಕಟ್ಟುಗಳ ...ದ ಬಗ್ಗೆ ಮಾತನಾಡುತ್ತಿದ್ದರು. ನಂತರ ಗಂಗಾಧರ ... ಬುಡಕಟ್ಟುಗಳ ಆಹಾರ ಪದ್ಧತಿ ಕುರಿತಂತೆ ...ಾಡಿದರು. ಈ ಮಾತುಗಳಲ್ಲಿ ಹೊಸ ನೋಟಗಳು ... ಕೇವಲ ಮಾಹಿತಿಯ ಮಂಡನೆಯಂತಿದ್ದವು. ಈ ... ಕೂಡ ಹಳಸಲು. ಧಾರವಾಡ ವಿವಿಯ ವಿದ್ಯಾರ್ಥಿ... ತಪ್ಪು ತಪ್ಪು ನಿರೂಪಣೆ ಮಾಡುತ್ತಿದ್ದರು.

...ನಂತರ ಶಾಲಿನಿ ರಘುನಾಥ ಅವರ ಅಧ್ಯಕ್ಷತೆಯಲ್ಲಿ ... ಗಣೇಶ್ ಜಾನಪದ ...ಆಧುನಿಕತೆ ...ತೆ ಟಿಪ್ಪಣಿ ...ದರು. ...ಂತೆ ಅವರ ...ಡ ಭಾಷಣರಮ್ಯಲೋಕಗಳನ್ನು ಸ್ಪರ್ಶಿಸುವಂತಿತ್ತು, ...ದ ಎಂ.ಎ ಓದುವಾಗ ಅವರು ಮಾಡುತ್ತಿದ್ದ ...ು ನನಗೆ ನೆನಪಾದವು. ಈಗ್ಗೆ ಎಂಟುವರ್ಷ ...ೂ. ಅವರ ಆಲೋಚನೆಗಳಲ್ಲಿ ಯಾವುದೇ ಬದ... ಆದಂತೆ ಕಾಣಲಿಲ್ಲ. ಆದಿವಾಸಿ ಸಂವೇದನೆಯನ್ನು ...ತೆ ಭಗ್ನಗೊಳಿಸಿದೆ, ಈ ಭಗ್ನಗೊಳಿಸುವಿಕೆಯಿಂದಾಗಿ ...ನಾಥಪ್ರಜ್ಞೆಯಲ್ಲಿ ಬದುಕು ದೂಡುತ್ತಿವೆ, ಎನ್ನುತ್ತಾ ...ಕ ಎಂದರೆ ಅದು ಎಲ್ಲಿಯಾದರೂ ಹುಟ್ಟಬಹುದು. ...ರ್ ಉದ್ಯಮದಲ್ಲೂ ಒಂದು ಬಗೆಯ ಜಾನಪದ ...ತ್ತದೆ, ಇಂಟರ್ ನೆಟ್‌ನಲ್ಲೂ ಫೋಕ್‌ಲೋರ್‌ನ ...ಿವೆ ಎಂದು ಜಾನಪದದ ವ್ಯಾಖ್ಯಾನವನ್ನು ತುಂಬಾ ... ಕೆಲವು ಒಳನೋಟಗಳನ್ನು ನೀಡಿದರು.

...ಗಾ ನರೇಟಿವ್ಸ ಆಲೋಚನಾ ಕ್ರಮವನ್ನು ಬಿಟ್ಟು ...ಡಿ ಘಟಕಗಳ ಮೂಲಕ ಅಖಂಡವನ್ನು ವ್ಯಾಖ್ಯಾನಿ... ಜಾಗತಿಕ ಚಿಂತನಾ ಮಾದರಿಗಳು ವಿಸ್ತರಿಸಿವೆ. ...ಲ್ಲೂ ಈ ಚಿಂತನೆ ಇದೆ. ಆದರೆ ಮೊಗಳ್ಳಿಯವರು ...ಅಖಂಡತೆಯ ಕುರಿತು ಮಾತನಾಡುತ್ತ ಕೆಲವೊಮ್ಮೆ ...ೀಟಗಳನ್ನೂ, ಮಗದೊಮ್ಮೆ ಬೀಸುಹೇಳಿಕೆಗಳನ್ನೂ ...ಡ್ಡರು. ಇದನ್ನು ನೋಡಿದರೆ ಸಮಾಜದ ಬಿಡಿಬಿಡಿ ...ಶ ಬದಲಾದ ಸಾಮಾಜಿಕ ಸ್ಥಿತಿಯನ್ನು ಅರಿಯುವಲ್ಲಿ ...ಯವರು ತುಂಬಾ ದೂರ ಉಳಿದಿದ್ದಾರೆ ಅನ್ನಿಸುತ್ತಿತ್ತು. ... ಅವರ ಬಾಲ್ಯದ ಅನುಭವದ ... ಮೂಲಕ ಈ ಕಾಲವನ್ನು ...ಸುವಂತಿತ್ತು, ಅವರ ಜಾನಪದ ...ಧನಾ ಕೃತಿಗಳೂ ಇದೇ ಕಾರ...ವಲ ಥಿಯರಿಯ ಭಾರದಿಂದ ...ದೆ. ಬಹುಶಃ ಮೊಗಳ್ಳಿಯವರು ...ತಿಯನ್ನು ಮೀರಲು ಸಾಧ್ಯ... ಮತ್ತದೇ ಮಾತುಗಳು ಬೇರೆ ...ಷಗಳಲ್ಲಿ ಮರಳುವುದು ತಪ್ಪ... .





...ಗಳ್ಳಿಯವರ ಮಾತಿನ ನಂತರ ...ಥಪ ವಿದ್ಯಾರ್ಥಿಗಳಿಂದ ... ಶುರುವಾಯಿತು. ಇಲ್ಲಿ ನನ್ನ ...ಳ ಮೂಲಕ ಸಂವಾದ ಆರಂಭವಾಯಿತು. ಕನ್ನಡದ ... ಅಧ್ಯಯನ ವಿಧಾನಗಳಲ್ಲಿ ತುಂಬಾ ಹಳೆಯ ... ಈಗಲೂ ಮುಂದುವರೆದಿದೆ, ಅರವತ್ತು ಎಪ್ಪತ್ತರ ...ಲ್ಲಿ ಮಾತನಾಡಿದ ಕ್ಯಸೆಟ್ಟುಗಳನ್ನು ರಿವೈಂಡ್ ...ಂತೆ ಬಹುಪಾಲು ಜಾನಪದ ವಿದ್ವಾಂಸರು ಮಾತ...ರೆ, ಮುಂತಾಗಿ ಹೇಳಿದೆ. ಜಾನಪದವನ್ನು ಚಳ... ಸಂಗತಿಯ ಭಾಗವಾಗಿ ಸಾಮಾಜಿಕ ಬದುಕಿ...ಗೆ ಲಗತ್ತಿಸಬೇಕಿದೆ, ಜಾನಪದವನ್ನು ರಾಜಕೀಯ ...ಸದ ಸಂಗತಿಯನ್ನಾಗಿ ಮಾಡುವುದು ಇಂದಿನ ...ಎಂದು ಹೇಳುತ್ತಾ ಆಧುನಿಕತೆ ಮತ್ತು ಜಾನಪದ ... ದಿಕ್ಕುಗಳಲ್ಲೇ ಮಾತನಾಡುತ್ತಲೇ ಕೂರುವುದು ...ಸೆಮಿನಾರಿನ ಸಂಗತಿಗಳಾಗುತ್ತವೆ. ಇಂತಹ ಮಾತು ...ಕ್ಷಣಿಕೆಯಿಂದ ಮಾತನಾಡುತ್ತಲೇ ಇರಬೇಕಾಗುತ್ತದೆ ... ಕೊಂಡು ಬಿಡಿದೆ. ಇದು ಆಯೋಜಕರಿಗೆ ...ದಂತೆ ಕಾಣಲಿಲ್ಲ, ಕೆಲವು ಜಾನಪದ ವಿದ್ವಾಂಸರು ನನ್ನನ್ನು ದುರುಗುಟ್ಟಿಕೊಂಡು ನೋಡಿದರು. ಆದರೆ ನನ್ನ ಮಾತುಗಳು ಸೆಮಿನಾರಿನಲ್ಲಿದ್ದ ವಿದ್ಯಾರ್ಥಿಗಳಿಗೆ ಇಷ್ಟವಾದಂತೆ ಕಂಡಿತು. ಅವರುಗಳೆಲ್ಲಾ ಈ ಮಾತುಗಳನ್ನು ಬೆಂಬಲಿಸುವಂತೆ ಉತ್ಸಾಹಭರಿತರಾಗಿ ಕೇಳುತ್ತಿದ್ದರು.

ಅದಕ್ಕೆ ಮೊಗಳ್ಳಿಯವರು ಪ್ರತಿಕ್ರಿಯಿಸಿ ಹಿಂದೆ ಕನ್ನಡದಲ್ಲಿ ಜಾನಪದವನ್ನು ಚಳವಳಿಯ ಭಾಗವಾಗಿ ಬಳಸಿಕೊಳ್ಳಲಾಗಿದೆ ಎಂದು ಹೇಳುತ್ತಾ ವರ್ತಮಾನದಲ್ಲಿ ಅದರ ಮುಂದುವರಿಕೆ ಹೇಗೆಂದು ಹೇಳದೆ ಮೌನವಾದರು. ನಂತರ ವಿಧ್ಯಾರ್ಥಿಗಳು ಜಾಗತೀಕರಣ ಮತ್ತು ಜಾನಪದದ ಮುಖಾಮುಖಿ ಬಗ್ಗೆ ಪ್ರಶ್ನೆ ಕೇಳುತ್ತಾ ಹೋದರು, ಅದಕ್ಕೆ ಮೊಗಳ್ಳಿಯವರು ಉತ್ತರಿಸುತ್ತಾ ಸಂವಾದ ಒಂದು ಹಂತದಲ್ಲಿ ತಾರಕಕ್ಕೇರಿ ಮುಗಿಯಿತು. ಆದರೆ ಯಾವ ವಿದ್ಯಾರ್ಥಿಗಳೂ ಅರಣ್ಯವಾಸಿಗಳ ಸಂಕಷ್ಟಗಳ ಬಗ್ಗೆಯಾಗಲಿ, ಅರಣ್ಯವಾಸಿಗಳ ಒಕ್ಕಲೆಬ್ಬಿಸಿ ಅತಂತ್ರ ಸ್ಥಿತಿಯಲ್ಲಿರುವಾಗ ಅವರ ಜಾನಪದದ ಬಗ್ಗೆ ಮಾತನಾಡುವುದರ ಹಿಂದಿರುವ ರಾಜಕೀಯ ಹಿತಾಸಕ್ತಿ ಯಾವುದಾಗಿರಬೇಕು ಎನ್ನುವುದನ್ನಾಗಲಿ ಮಾತನಾಡಲಿಲ್ಲ, ವರ್ತಮಾನದ ಒಳಗಿಂದ ಹುಟ್ಟಬಹುದಾದ ಯಾವ ಪ್ರಶ್ನೆಗಳನ್ನೂ ಇಲ್ಲಿ ಎತ್ತಲಾಗಲಿಲ್ಲ. ಅಂದರೆ ಈ ಹೊತ್ತಿನ ವಿದ್ಯಾರ್ಥಿಗಳಿಗೆ ಅಧ್ಯಾಪಕರುಗಳು ಸದ್ಯದ ರಾಜಕೀಯ ವರ್ತಮಾನದ ಪ್ರಜ್ಞೆಯನ್ನು ಬೆಳೆಸದಿರುವುದು ಇದರಿಂದ ತಿಳಿಯುತ್ತಿತ್ತು. ಇದರಲ್ಲಿ ಹುಡುಗಿಯರು ಸಕ್ರಿಯವಾಗಿ ಭಾಗವಹಿಸಿದ್ದು ಖುಷಿಯ ಸಂಗತಿ.

ನಂತರ ಶಾಲಿನಿ ಮೇಡಂ ಅವರು ಚುಟುಕಾಗಿ ಅಧ್ಯಕ್ಷೀಯ ಮಾತು ಮುಗಿಸಿದರು. ನಂತರ ಸಮಾರೋಪದಲ್ಲಿ ಪ್ರೊ. ಕಾಳೇಗೌಡ ನಾಗವಾರ ಅವರು ಓತಪ್ರೋತವಾಗಿ ಮಾತಿನ ವಾಗ್ಝರಿಯನ್ನೇ ಹರಿಸಿದರು. ಅವರ ಮಾತಿಗೆ ಒಂದು ಕೇಂದ್ರವೆನ್ನುವುದು ಇರಲಿಲ್ಲ, ಮಾತುಗಳು ಎಲ್ಲೆಲ್ಲಿಗೋ ಹೋಗಿ, ಎಲ್ಲೆಲ್ಲಿಯೂ ಸುತ್ತಿ, ಎಲ್ಲೆಲ್ಲಿಗೋ ಮರಳಿದಂತಹ ಅನುಭವ ಕೇಳುಗರದು. ಜನಪದರು ಒಳಉಡುಪುಗಳನ್ನು ಹಾಕುತ್ತಿರಲಿಲ್ಲ, ಅದು ಈ ಹೊತ್ತು ಚರ್ಚೆ ಆಗಬೇಕಾದ ವಿಷಯ ಎಂದು ಹೇಳಿ ಕೇಳುಗರಲ್ಲಿ ಮುಜುಗರ ಉಂಟುಮಾಡಿದರು. ಹೆಣ್ಣಿನ ಫಲವಂತಿಕೆಯ ಬಗ್ಗೆ ಹೆಣ್ಣಿನ ಸೌಂದರ್ಯದ ಬಗ್ಗೆ ಆಹಾರ ಪಾನೀಯದ ರುಚಿ, ಗಂಡು ಹೆಣ್ಣಿನ ಮಧುರ ಸಂಬಂಧ ಮುಂತಾದವುಗಳ ಬಗ್ಗೆ ಜನಪದ ನುಡಿಗಟ್ಟು ಮತ್ತು ತ್ರಿಪದಿಗಳನ್ನು ಉಲ್ಲೇಖಿಸಿ ಉತ್ಸಾಹಭರಿತರಾಗಿ ಮಾತನಾಡಿದರು. ಮೊಟ್ಟಮೊದಲಿಗೆ ಅವರ ಮಾತು ಕೇಳುವವರಿಗೆ ಇವು ಉತ್ಸಾಹದಾಯಕ ಮಾತುಗಳಂತಿದ್ದವು. ಆದರೆ ಹಲವು ದಶಕಗಳಿಂದ ಅವರ ಮಾತುಗಳನ್ನು ಕೇಳಿಕೊಂಡು ಬಂದವರಿಗೆ, ಹಳೆ ಮಾತು ಹೊಸ ಕಾಲ ಎನ್ನುವಂತಿತ್ತು. ಆಗ ಮಧ್ಯಾಹ್ನ ಮೂರು ಗಂಟೆ. ವಿದ್ಯಾರ್ಥಿಗಳನ್ನು ಒಳಗೊಂಡಂತೆ ಎಲ್ಲರ ಮುಖ ಹೊಟ್ಟೆ ಹಸಿವಿನಿಂದ ಸಪ್ಪೆಯಾಗಿತ್ತು. ಆದರೆ ನಾಗವಾರರ ಭಾಷಣ ಮಾತ್ರ ಮುಗಿದಂತೆ ಕಾಣಲಿಲ್ಲ.

ಕೊನೆಗೂ ಅರಣ್ಯವಾಸಿಗಳ ಜಾನಪದದ ಬಗ್ಗೆಯಾಗಲಿ ಅವರ ವರ್ತಮಾನದ ತಲ್ಲಣದ ಬಗ್ಗೆಯಾಗಲಿ ನಾಗವಾರರು ಮಾತೆತ್ತಲಿಲ್ಲ, ಅಥವಾ ಅವರ ತಲ್ಲಣಗಳು ತಾಕದಂತಹ ಸೇಫರ್ ಜೋನಲ್ಲಿ ನಿಂತು ಮಾತನಾಡಿದಂತಿತ್ತು. ಕೊನೆಗೆ ಮಾತನಾಡಿದ ಸಮ್ಮೇಳನದ ಸರ್ವಾಧ್ಯಕ್ಷರಾದ ಶಂಕರ ನಾರಾಯಣರ ಮಾತುಗಳೂ ತಿಪ್ಪೆ ಸಾರಿಸುವ ಧಾಟಿಯಲ್ಲಿತ್ತು. ಕಾರ್ಯಕ್ರಮ ಮುಗಿಯಿತಲ್ಲ ಎಂದು ಎಲ್.ವಿ ಪಾಟೀಲರು ಎಲ್ಲರಿಗೂ ವಂದನಾರ್ಪಣೆ ಸಲ್ಲಿಸುತ್ತಿದ್ದರು. ಕಾರಣವೇ ಗೊತ್ತಿಲ್ಲದೆ ಅಧ್ಯಾಪಕರುಗಳು ಒಬ್ಬರಿಗೊಬ್ಬರು ಸನ್ಮಾನ ಮಾಡಿಕೊಂಡರು. ಈ ಸನ್ಮಾನ ಯಾವ ಸಾಧನೆಗಾಗಿ ಎಂದರೆ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ್ದಕ್ಕಾಗಿ ಎನ್ನುವ ಉತ್ತರ ಬಂತು. ವಿದ್ಯಾರ್ಥಿಗಳು ಕಾರ್ಯಕ್ರಮ ಯಶಸ್ವಿಯಾದ ಬಗ್ಗೆ ನಾನಾಬಗೆಯಲ್ಲಿ ವರ್ಣನೆ ಮಾಡಿದರು. ಆಯೋಜಕರಿಗೆ ಕಾರ್ಯಕ್ರಮವೊಂದನ್ನು ಮುಗಿಸಿದ ಸಂತೃಪ್ತಿ, ಅಬ್ಬಾ ಅಂತೂ ಇಂತೂ ಈ ವರ್ಷದ ಕಾರ್ಯಕ್ರಮವನ್ನು ಮುಗಿಸಿದೆವಲ್ಲಾ ಎಂಬ ನಿರಾಳತೆ, ಶಾಲಿನಿ ರಘುನಾಥ ಅವರ ಮುಖದಲ್ಲಿ ಕಾಣುತ್ತಿತ್ತು.

ಸೆಮಿನಾರನ್ನು ವಿಮರ್ಶೆ ಮಾಡಿದ್ದಕ್ಕೆ ಕಾರಣವೆಂದರೆ, ಬಹುತೇಕ ವಿಶ್ವವಿದ್ಯಾಲಯಗಳ ಸೆಮಿನಾರುಗಳು ಹೀಗೆಯೇ ಒಣಒಣ ಎನ್ನುವಂತೆ ಬಣಗುಟ್ಟುತ್ತವೆ. ಒಂದು ವಿಶ್ವವಿದ್ಯಾಲಯದ ಅಧ್ಯಾಪಕರು ಮತ್ತೊಂದು ವಿವಿಯ ಅಧ್ಯಾಪಕರನ್ನು ಆಹ್ವಾನಿಸುವುದು, ಸಂತೃಪ್ತ ಟಿ.ಎ ಡಿ.ಎ ಪಡೆದು ಅವರನ್ನು ಇವರು ಹೊಗಳಿ, ಇವರನ್ನು ಅವರು ಹೊಗಳುವ ಆತ್ಮವಂಚನೆಯಲ್ಲೇ ಸೆಮಿನಾರುಗಳು ಮುಗಿಯುತ್ತವೆ. ಆಯಾ ಸೆಮಿನಾರಿಗೆ ಲಕ್ಷಾಂತರ ರೂಪಾಯಿಗಳು ಖರ್ಚಾಗುತ್ತದೆ.


ನೋಡಿ, ಈ ಸಮ್ಮೇಳನ ಅರಣ್ಯವಾಸಿ ಜಾನಪದ ಕುರಿತದ್ದು. ಅದು ಅರಣ್ಯವಾಸಿಗಳ ಸದ್ಯದ ಬದುಕಲ್ಲಾಗುತ್ತಿರುವ ಬದಲಾವಣೆಗಳನ್ನು ತೆರೆದುತೋರುವಂತದು. ಇಂದು ಅರಣ್ಯವಾಸಿಗಳು ತಮ್ಮ ಕಲೆಯನ್ನಾಗಲಿ, ಕಾವ್ಯವನ್ನಾಗಲೀ ಸಂಭ್ರಮದಿಂದ ಹೇಳುವ ಸ್ಥಿತಿಯಲ್ಲಿಲ್ಲ. ಇಂತಹ ಅರಣ್ಯರೋದನದಲ್ಲಿ ಅವರುಗಳು ಬದುಕುತ್ತಿದ್ದರೆ ಅವರ ಜಾನಪದವನ್ನು ಮಾತ್ರ ಬೇರ್ಪಡಿಸಿ ಮಾತನಾಡುವುದಾದರೂ ಹೇಗೆ? ಆದರೆ ಇಂತಹ ಘನಕಾರ್ಯವನ್ನು ಈ ಸಮ್ಮೇಳನ ಮಾಡಿತು. ಇಲ್ಲಿ ಯಾವುದೇ ಅರಣ್ಯವಾಸಿಗಳ ಸುಳಿವಿರಲಿಲ್ಲ. ಹೋಗಲಿ ಅರಣ್ಯವಾಸಿಗಳ ಬಗ್ಗೆ ಪ್ರಾಮಾಣಿಕವಾಗಿ ದುಡಿಯುವವರನ್ನಾದರೂ ಕರೆಸಿರಲಿಲ್ಲ.

ಇಂದು ಅರಣ್ಯವಾಸಿಗಳನ್ನು ಒಕ್ಕಲೆಬ್ಬಿಸುವ ಮರಣ ಶಾಸನದಂತಹ ಕಾನೂನುಗಳು ಬರುತ್ತಿವೆ, ಅವುಗಳನ್ನು ವಿರೋಧಿಸುವ, ಆ ವಿರೋಧದ ನಿಲುವನ್ನು ಸರಕಾರಕ್ಕೆ ತಿಳಿಸುವ ಯಾವ ತುರ್ತು ಈ ಸೆಮಿನಾರಿನಲ್ಲಿ ಕಾಣಿಸಲಿಲ್ಲ. ಅಥವಾ ಅರಣ್ಯವಾಸಿಗಳು ಹೆಚ್ಚಿರುವ ಕಡೆ ಸೆಮಿನಾರು ಏರ್ಪಡಿಸಿ, ಅರಣ್ಯವಾಸಿಗಳ ಬಗ್ಗೆ ಕೆಲಸ ಮಾಡಿದ ಕೆಲವರನ್ನು ಆಹ್ವಾನಿಸಿ, ಕೆಲವು ಅರಣ್ಯವಾಸಿ ಜನರನ್ನೇ ಕರೆಸಿ ತಮ್ಮ ನಂಬಿಕೆ, ಆಚರಣೆ ಸಂಪ್ರದಾಯದಲ್ಲಿ ಆಗುತ್ತಿರುವ ಬದಲಾವಣೆಗಳಾವುವು? ಈ ಬದಲಾವಣೆಗೆ ಕಾರಣವಾದ ಸಂಗತಿಗಳಾವುವು? ಸದ್ಯದ ತಮ್ಮ ಬದುಕಿನ ತಲ್ಲಣಗಳೇನು ಮುಂತಾಗಿ ಮಾತನಾಡಿಸಿ ಅವುಗಳ ನೆಲೆಯಲ್ಲಿ ಅರಣ್ಯವಾಸಿಗಳ ಜಾನಪದವನ್ನು ಅರ್ಥಮಾಡಿಕೊಳ್ಳುವ ಕೆಲಸವನ್ನು ಮಾಡಬಹುದಿತ್ತು.

ಆದರೆ ಇಂತಹ ಯಾವ ಯೋಚನೆಯೂ ಆಯೋಜಕರಿಗೆ ಹೊಳೆದಂತಿಲ್ಲ. ಹೀಗೆ ವಿಶ್ವವಿದ್ಯಾಲಯಗಳ ಲಕ್ಷಾಂತರ ರೂಗಳು ಕನಿಷ್ಠ ರಾಜಕೀಯ ಪ್ರಜ್ಞೆಯನ್ನು ಬೆಳೆಸದ ಸೆಮಿನಾರುಗಳಿಗೆ ಖರ್ಚಾಗುತ್ತದೆ. ಅದೇ ಸೆಮಿನಾರಿನ ವಿಷಯವಾಗಿದ್ದ ಜನರ ಬದುಕು ಎಂದಿನ ದರಿದ್ರ ಸ್ಥಿತಿಯಲ್ಲಿ ಮುಂದುವರೆಯುತ್ತದೆ. ಹಾಗೆಂದು ಈ ಮಾತನ್ನು ಸಾರಾಸಗಟಾಗಿ ವಿಶ್ವವಿದ್ಯಾಲಯಗಳ ಎಲ್ಲಾ ಸೆಮಿನಾರುಗಳಿಗೆ ಆರೋಪಿಸಲು ಆಗದು. ಅಪರೂಪಕ್ಕೊಮ್ಮೆ ಒಳ್ಳೆಯ ಸೆಮಿನಾರುಗಳೂ ನಡೆಯುತ್ತವೆ. ಆದರೆ ಬಹುಪಾಲು ಸೆಮಿನಾರುಗಳು ಮೇಲಿನ ಮಾತುಗಳಿಗೆ ಪೂರಕವಾಗಿವೆ, ಇದು ವಿಶ್ವವಿದ್ಯಾಲಯಗಳ ಸೆಮಿನಾರುಗಳ ವಾಸ್ತವ. ಬಹುಪಾಲು ವಿಶ್ವವಿದ್ಯಾಲಯಗಳ ಅಧ್ಯಾಪಕರುಗಳು ಇಂತಹ ಜಡತೆಯಿಂದ ಮೈಕೊಡವಿ ಹೊರಬರುವುದು ಯಾವಾಗ?

• ಡಾ.ಅರುಣ್ ಜೋಳದಕೂಡ್ಲಿಗಿ

ಹಾಯ್ಕುಗಳು



1
ಉರಿವ ಬಿಸಿಲಲ್ಲೂ
ಹಾಸಿಕೊಂಡು ಮಲಗಿತು
ನೆರಳು ಮರದ ಕೆಳಗೆ

2
ಮುಗಿಲಲ್ಲಿ
ಗೆರೆಯ ಬರೆಯುತ
ಹಾರುತಿವೆ ಬೆಳ್ಳಕ್ಕಿ ಸಾಲು

3
ನುಂಗಿದ ಉಸಿರನ್ನು
ಹೊರಹಾಕಿತು ಕೊಳಲು
ನಾದವಾಗಿ



4
ಧರೆಗಿಳಿವ ಜಿನುಗು ಮಳೆ
ಹತ್ತಿಯಿಂದ ನೂತ
ತೆಳುದಾರದ ಎಳೆ


5
ಕತ್ತಲೂ ಸಹ
ಕಾಯುತ್ತದೆ
ಒಂದು ಬೆಳಗಿಗಾಗಿ

6
ಬಿಡಾರ, ಗುಡಿಸಲು, ಮನೆ, ಅರಮನೆ
ಸೂರೊಂದಕ್ಕೆ
ಅದೆಷ್ಟು ಹೆಸರುಗಳು!

7
ನದಿಯ ದಂಡೆಯ ಮರ ಹತ್ತಿದೆ
ನದಿಯೊಳಗಿನ
ಮರದಲ್ಲಿ ಇಳಿದೆ




8
ಸೂರ್ಯನ ಜೊತೆ
ಬೆಳಕನ್ನು ನುಂಗಿತು
ಕತ್ತಲು



9
ನದಿಗಳನ್ನೇ
ಕುಡಿದರೂ ತೀರದು
ಬಾಯಾರಿಕೆ ಕಡಲಿಗೆ

10
ಯಾವ ವೀಸಾ ಇಲ್ಲದೆ
ವಲಸೆ ಹೋದವು
ಹಕ್ಕಿಗಳು ವಿದೇಶಕ್ಕೆ

11
ಖಡ್ಗ ಝಳಪಿಸಿದಂತೆ
ಹೊಳೆದವು
ಕಡಲ ತೆರೆಗಳು ಬಿಸಿಲಿಗೆ



12
ಇರುವೆಗಳು
ನಡೆಸುತ್ತಿವೆ ಪಥಸಂಚಲನ
ಶಿಸ್ತಿನ ಸಿಪಾಯಿಗಳಂತೆ.

13
ಸಿಂಹ ಘರ್ಜಿಸಿತು
ಮೌನ ಮುರಿದ ಕಾಡು
ಪ್ರತಿ ಘರ್ಜನೆ ಹಾಕಿತು



14
ಮೌನಕ್ಕೆ
ಇರುವಷ್ಟು ಮಿತಿ
ಮಾತಿಗಿಲ್ಲ.

15
ಹುಟ್ಟಲಾರದು ...
ಕರುಣೆ ಇರದ
ಕಣ್ಣುಗಳಲ್ಲಿ.

• ಸಂತೋಷ ಅಂಗಡಿ


ಮಠದಲ್ಲಿ ಮಂಗಗಳು ವಾಸ್ತವ್ಯ ಹೂಡಿ ಬಹಳ ಕಾಲವಾಗಿತ್ತು. ಆದರೆ ಅವು ಮಠಕ್ಕೆ ಬರುವ ಭಕ್ತಾದಿಗಳಿಗೆ ಕೊಡುತ್ತಿದ್ದ ಕಿರುಕುಳ ಯಾವತ್ತೂ ದೊಡ್ಡ ಸುದ್ದಿ ಆಗಿರಲಿಲ್ಲ. ಮಠದ ಮಂಗಗಳು ಪಾರದ ಭೈರನ ಹೊರತು ಯಾರಿಗೂ ಕ್ಯಾರೆ ಅನ್ನುತ್ತಿರಲಿಲ್ಲ. ಅವು ಭೈರನಿಗೆ ಹೆದರುತ್ತಿದ್ದ ಕಾರಣ ಆತ ಪಾರ ಕಾಯುವುದಕ್ಕೆ ಯಾವಾಗಲೂ ತನ್ನ ಕೈಯಲ್ಲಿ ದೊಡ್ಡ ದೊಣ್ಣೆಯನ್ನು ಹಿಡಿದಿರುತ್ತಿದ್ದದ್ದು.

ಭೈರ ಅಲಿಯಾಸ್ ಭೈರೆಗೌಡ ಮಠದ ಜಮೀನನ್ನು ಗೇಣಿಗೆ ಪಡೆದು ಸಾಗುವಳಿ ಮಾಡುತ್ತಿದ್ದ. ಒಮ್ಮೆ ತನ್ನ ಮಗಳ ಮದುವೆಗೆಂದು ಮಠದಿಂದ ಸಾಲ ಪಡೆದಿದ್ದ. ಆ ವರ್ಷವೇ ಮಳೆ ಕೈಕೊಟ್ಟಿತ್ತು. ಆಗ ಭೈರ ಬರಿಗೈ ದಾಸನಾದ. ಗೇಣಿ ಕಟ್ಟಲಾಗದಿದ್ದಕ್ಕೆ ಮಠ ಜಮೀನನ್ನು ವಾಪಸ್ ಪಡೆಯಿತು. ಇನ್ನು ಮಗಳ ಮದುವೆಗೆಂದು ಪಡೆದಿದ್ದ ಸಾಲವನ್ನು ತೀರಿಸಲು ರಾತ್ರಿಹೊತ್ತು ಮಠವನ್ನು ಕಾಯುವ ಪಾರದ ಕೆಲಸಕ್ಕೆ ಸೇರಿದ್ದ. ಹೀಗೆ ಹಿಂದೆ ಭೈರೆಗೌಡರಾಗಿದ್ದ ಆತ ಈಗ ಬರೀ ಭೈರ ಆಗಿದ್ದ.

ಮಠದ ಮಂಗಗಳು ಈ ಪರಿ ಯಾರಿಗೂ ಕಚ್ಚಿದ್ದಿಲ್ಲ; ಕಚ್ಚಿದ್ದರೂ ಅದು ದೊಡ್ಡ ಸುದ್ದಿ ಆಗಿರಲಿಲ್ಲ. ಆದರೆ ಯಾವಾಗ ಮಂಗಗಳು ದೈವಾಂಶಸಂಭೂತರಾದ ಗುರುಗಳನ್ನೇ ಕಚ್ಚಿದವೋ ಆಗ ಅನೇಕ ಊಹಾಪೋಹಗಳು ಚಾಲನೆ ಪಡೆದವು. ಹಲವರ ಪ್ರಕಾರ ಹುಚ್ಚು ನಾಯಿ ಮಂಗಗಳನ್ನು ಕಚ್ಚಿತ್ತಂತೆ, ಇನ್ನು ಕೆಲವರ ಪ್ರಕಾರ ಮಂಗನಿಗೇ ಹುಚ್ಚು ಹಿಡಿದಿತ್ತಂತೆ, ಇಂತಹ ತರಹೇವಾರಿ ವದಂತಿಗಳ ನಡುವೆ ಮಠದೊಳಗಿಂದಲೇ ಒಂದು ತರ್ಕ ಸ್ಫೋಟಗೊಂಡಿತು. ಮಠದ ಅಧಿಕಾರಿಗಳನ್ನು ಕಂಡರಾಗದ ಮಠದ ನೌಕರರೇ ಈ ವಿಷಯವನ್ನು ಪಿಸುಗುಡುತ್ತಿದ್ದರು. ಇದು ಎಲ್ಲರನ್ನು ಕಸಿವಿಸಿಗೊಳಿಸಿತು.

ಅದೇನೆಂದರೆ: ಕೆಲವು ತಿಂಗಳ ಹಿಂದೆ ಮಠಕ್ಕೆ ಬಂದಿದ್ದ ಪ್ರವಾಸಿ ಹೆಂಗಸೊಬ್ಬಳು ಹೊಳೆ ಮೆಟ್ಟಿಲಲ್ಲಿ ಸ್ನಾನ ಮಾಡುತ್ತಿದ್ದವಳು ಕಾಣೆಯಾಗಿ ಮಠದ ತೋಟದಲ್ಲಿದ್ದ ನರಸಿಂಹಭಟ್ಟರ ಮನೆಯ ಬಾವಿಯಲ್ಲಿ ಹೆಣವಾಗಿ ಸಿಕ್ಕಿದ್ದಳು ಎಂಬುದು...

ಮಠದ ಅಡುಗೆ ಮನೆ ಪಕ್ಕದಲ್ಲೇ ಉಗ್ರಾಣವಿದೆ. ಚಿನ್ನ-ಬೆಳ್ಳಿ ಹೊರತಾಗಿ ಈ ಉಗ್ರಾಣದಲ್ಲಿ ದವಸಧಾನ್ಯಗಳಿಂದ ಹಿಡಿದು ಮತ್ತೆಲ್ಲ ಮುಖ್ಯ ವಸ್ತುಗಳನ್ನು ಇಡಲಾಗುತ್ತಿತ್ತು. ಮಾತ್ರವಲ್ಲ, ಈ ಉಗ್ರಾಣವೇ ಮಠದ ಪಾರುಪತ್ಯಗಾರ ವೇದ ಬ್ರಹ್ಮಶ್ರೀ ಚಿದಂಬರ ಫಣ ಪಾರಿಗಳ ಕಚೇರಿಯೂ ಆಗಿತ್ತು.



ಉಗ್ರಾಣವು ಹೊಳೆ ಬಾಗಿಲಿಗೆ ಹೊಂದಿಕೊಂಡಿತ್ತು. ಒಂದೇ ಒಂದು ಬಾಗಿಲಿದ್ದ ಈ ಉಗ್ರಾಣಕ್ಕೆ ಗಾಳಿ-ಬೆಳಕಿಗೆಂದು ಒಂದೇ ಒಂದು ಸಣ್ಣ ಕಿಟಕಿ ಇತ್ತು. ಆ ಕಿಟಕಿಯನ್ನು ಫಣ ಪಾರಿಗಳು ಸರಿಯಾದ ಜಾಗದಲ್ಲಿ ಇರಿಸಿದ್ದರು. ಮಠದಲ್ಲಿ ಮಂಗಗಳ ಹಾವಳಿ ಜಾಸ್ತಿಯಾಗಿದೆ ಎಂದು ಆ ಫಣ ಪಾರಿಗಳು ಉಗ್ರಾಣದಲ್ಲಿ ಇದ್ದಾಗ ಮಾತ್ರ ಆ ಕಿಟಕಿಯನ್ನು ತೆರೆಯಲಾಗುತ್ತಿತ್ತು.

ಆ ಕಿಟಕಿ ಕನಕನ ಕಿಂಡಿಗಿಂತ ಮಹತ್ವದ್ದಾಗಿತ್ತು. ಹೊಳೆ ಮೆಟ್ಟಿಲಲ್ಲಿ ಸ್ನಾನ ಮಾಡಲು ಪುರುಷರಿಗೆ ಕೆಳಗಡೆ ಮತ್ತು ಮಹಿಳೆಯರಿಗೆ ಮೇಲುಗಡೆ ಅವಕಾಶ ಮಾಡಿಕೊಡಲಾಗಿತ್ತು. ಈ ಕಳ್ಳ ಕಿಟಕಿಯಿಂದ ಹೊಳೆಯ ಮೇಲುಗಡೆ ಮೆಟ್ಟಲುಗಳಲ್ಲಿ ಮಹಿಳೆಯರು ಸ್ನಾನ ಮಾಡುತ್ತಿದ್ದ ಬಟ್ಟೆ ಬದಲಾಯಿಸುತ್ತಿದ್ದ ದೃಶ್ಯಗಳು ಚೆನ್ನಾಗಿ ಕಾಣಿಸುತ್ತಿದ್ದರಿಂದ. ಯಾವ ದೇವರಿರುವ ಗರ್ಭಗುಡಿಗಿಂತ ಮಹತ್ವದ್ದಾಗಿತ್ತು.

ಮಠದಲ್ಲಿ ಗುರುಗಳನ್ನು ಬಿಟ್ಟರೆ ಫಣ ಪಾರಿಗಳೇ ಮುಖ್ಯ ಆಡಳಿತಾಧಿಕಾರಿ. ಈ ಫಣ ಪಾರಿಗಳು ಹಿಂದೊಮ್ಮೆ ಅಪಾರ ಸಾಲ ಮಾಡಿ ಸಂತರ್ಪಣೆ ಮಾಡುವ ಸ್ಥಿತಿ ತಲುಪಿದ್ದರು. ಆದರೆ ಅವರು ಅದು ಹೇಗೋ ಮಠವನ್ನು ಸೇರಿದ್ದರು. ಹಾಗೆ ಸೇರಿದವರೇ ಮಠವನ್ನು ಅಭಿವೃದ್ಧಿಪಡಿಸಿ ಮಠದ ಸಂಪತ್ತನ್ನು ನೂರು ಪಟ್ಟು ಹೆಚ್ಚಿಸಿದ್ದರು. ಮಾತ್ರವಲ್ಲ, ಮಠಕ್ಕೆ ಹೊಸ ಚರಿತ್ರೆಯನ್ನೇ ಸೃಷ್ಟಿಸಿದ್ದರು!

ಅವರು ಹುಟ್ಟು ಹಾಕಿದ್ದ ಈ ಹೊಸ ಚರಿತ್ರೆಯ ಪ್ರಕಾರ: ಈ ಮಠ ಪುರಾಣ ಕಾಲದಿಂದಲೂ ಪುಣ್ಯ ಕ್ಷೇತ್ರವಾಗಿತ್ತು; ಇಲ್ಲಿ ಮುನಿ ಶ್ರೇಷ್ಠರು ತಪಸ್ಸು ಮಾಡಿದ್ದರು; ಅನಾದಿಕಾಲದ ರಾಜಮಹಾರಾಜರೆಲ್ಲ ಈ ಮಠದ ಗುರುಗಳ ಸಲಹೆಯನ್ನು ಪಡೆದೇ ರಾಜ್ಯಭಾರ ನಡೆಸುತ್ತಿದ್ದರು; ಇಂಥ ಶ್ರೇಷ್ಠ ಮಠದ ಮೇಲೆ ಮುಸ್ಲಿಂ ರಾಜರು ದಾಳಿ ಮಾಡಿದ್ದರಿಂದ ಮಠವು ಅಧೋಗತಿ ಸ್ಥಿತಿ ತಲುಪಿತ್ತು...

ಇಂತಹ ಹೊಸ ಚರಿತ್ರೆಯನ್ನು ಹುಟ್ಟು ಹಾಕಿದ ಫಣ ಪಾರಿಗಳು ಇದನ್ನೇ ದೇಶವಿದೇಶಗಳಲ್ಲಿ ಪ್ರಚಾರ ಮಾಡಿದರು. ಆ ಮೂಲಕ ಅಪಾರ ಭಕ್ತರನ್ನೂ, ಅವರಿಂದ ಸಂಪತ್ತನ್ನೂ ಕ್ರೂಢೀಕರಿಸಿ ದೇಶದ ನಾಲ್ಕೂ ದಿಕ್ಕುಗಳಲ್ಲಿ ಶಾಖೆಗಳನ್ನು ಪ್ರಾರಂಭಿಸಿದರು. ಆಡಳಿತ ಪಕ್ಷದ ಪ್ರಭಾವಿ ರಾಜಕಾರಣಿಗಳಿಗೆ ಗುರುಗಳಿಂದ ಮಂತ್ರಾಕ್ಷತೆ, ದೇವರ ಪ್ರಸಾದ ಇತ್ಯಾದಿಗಳನ್ನು ಕೊಡಿಸಿ ಮಠಕ್ಕೆ ಒಂದು ಇಂಜಿನಿಯರಿಂಗ್ ಕಾಲೇಜನ್ನೂ ದಯಪಾಲಿಸಿಕೊಂಡರು. ಈ ಇಂಜಿನಿಯರಿಂಗ್ ಕಾಲೇಜು ಸಂಸ್ಕೃತ ಭಾಷೆಯ ಅಲ್ಪಸಂಖ್ಯಾತರ ಕೋಟಾದಲ್ಲಿ ಸಿಕ್ಕಿದ್ದರಿಂದ ಇಲ್ಲಿ ಪೇಮೆಂಟ್ ಸೀಟುಗಳೇ ಹೆಚ್ಚು. ಕೆಲ ಸಮಯದಲ್ಲೇ ಈ ಕಾಲೇಜು ಮಠಕ್ಕೆ ಹೆಚ್ಚು ಲಾಭ ತರುವ ಅಂಗಡಿಯಾಯಿತು.

ಫಣ ಪಾರಿಗಳ ಆಗಮನಕ್ಕೂ ಮುಂಚೆ ಹೊಳೆಯ ದಡದಲ್ಲಿರುವ ಪ್ರಶಾಂತ ಗುರುಕುಲದಂತಿದ್ದ ಮಠವು ಕೆಲವೇ ವರ್ಷಗಳಲ್ಲಿ ಅವರ ದಕ್ಷತೆಯಿಂದಾಗಿ ಎಲ್ಲರ ನಿರೀಕ್ಷೆಯನ್ನು ಮೀರಿ ಬೆಳೆಯಿತು. ಫಣ ಪಾರಿಗಳ ಈ ಮಹತ್ತರ ಸಾಧನೆಯಿಂದಾಗಿ ಅವರಿಗೆ 'ಗುರುಭಕ್ತ ಶೇಖರ್', 'ಶ್ರೀಮಠ ಪುನರ್ ಪ್ರತಿಷ್ಠಾಪಕ' ತರಹದ ಅನೇಕ ಬಿರುದಾವಳಿಗಳು ದೊರಕಿದವು.

ಇಂತಹ ಫಣ ಪಾರಿಗಳ ಪತ್ನಿ ಲಕ್ಷ್ಮೀದೇವಮ್ಮನವರು ಗುರುಗಳ ಪ್ರವಚನವನ್ನು ಕೇಳಿ, ಕೇಳಿ ಗುರುಗಳ ಪರಮಭಕ್ತೆಯಾಗಿದ್ದರು. ಸದಾ ಮಡಿ, ಮೈಲಿಗೆ, ಪೂಜೆ, ಪುರಸ್ಕಾರ ಎಂದೆಲ್ಲ ಮಠದ ಸುತ್ತ ಓಡಾಡಿಕೊಂಡಿರುವುದನ್ನು ಬಿಟ್ಟರೆ ಲಕ್ಷ್ಮಿ ದೇವಮ್ಮನವರಿಗೆ ಬೇರೆ ಹರಬಿರಲಿಲ್ಲ. ದೇವರ ಹುಚ್ಚು ಹಿಡಿಸಿಕೊಂಡಂತಿದ್ದ ಲಕ್ಷ್ಮೀದೇವಮ್ಮನವರ ವರ್ತನೆ ಬಗ್ಗೆ ಫಣ ಪಾರಿಗಳು ಅದೆಷ್ಟೇ ಆಕ್ಷೇಪಿಸಿದರೂ ಆಕೆ ಅದ್ಯಾವುದನ್ನೂ ಗಮನಿಸುತ್ತಲೇ ಇರಲಿಲ್ಲ. ಖಯಾಲಿ ಮನುಷ್ಯನಾಗಿದ್ದ ಫಣ ಪಾರಿಗಳಿಗೆ ಭಗವಂತ ಇಂತಹದ್ದೊಂದು ಕೊರತೆ ಉಂಟುಮಾಡಿದ್ದ.

ಫಣ ಪಾರಿಗಳಂತ ಖಯಾಲಿ ಮನುಷ್ಯರ ಬಗ್ಗೆ ನಮ್ಮಲ್ಲೊಂದು ಅಪಹಾಸ್ಯದ ಮಾತಿದೆ. ಅದೇನೆಂದರೆ "ದಿನಾ ಸೌತೆಕಾಯಿ ಸಾರು ನೀನ್ ತಿಂತಿಯಾ?" ಎಂಬುದು. ಹಿಂದೆ ಸುಬ್ಬಣ್ಣ ಹೆಗ್ಗಡೆ ಎಂಬ ಒಬ್ಬರು ದೊಡ್ಡ ಮನುಷ್ಯರಿದ್ದರಂತೆ. ಈ ಹೆಗ್ಗಡೆಗೆ ಶಿಕಾರಿ ಚಟ ಇತ್ತಂತೆ. ಸಂಜೆ ಆಗುತ್ತಿದ್ದಂತೆ ಬ್ರಿಟಿಷ್ ಗನ್ ಅನ್ನು ಹೆಗಲ ಮೇಲೆ ಹಾಕಿಕೊಂಡು ಶಿಕಾರಿಗೆ ಹೊರಡುತ್ತಿದ್ದರಂತೆ. ಆದರೆ ಅವರು ಶಿಕಾರಿಗೆಂದು ಹೋಗುತ್ತಿದ್ದದ್ದು ಸುಬ್ಬಿ ಎಂಬ ತಮ್ಮ ಪ್ರಿಯತಮೆಯ ಮನೆಗೆ. ಇದು ಎಲ್ಲರಿಗೂ ಗೊತ್ತಿದ್ದರಿಂದ "ಹೆಗ್ಗಡೇರ ಶಿಕಾರಿ ಅಂದ್ರ ಅದು ನಾಲ್ಕು ಕಾಲಿನ ಪ್ರಾಣಿ ಬ್ಯಾಟೆ ಅಲ್ಲ, ಎರಡು ಕಾಲಿಂದು" ಎಂದು ಊರಿನ ಜನರೆಲ್ಲ ಆಡಿಕೊಳ್ಳುತ್ತಿದ್ದರು. ಸಾಮಾನ್ಯವಾಗಿ ಆಗುವಂತೆ ಕೊನೆಗೊಂದು ದಿನ ಊರವರ ಇಂತಹ ಮಾತು ಹೆಗ್ಗಡೇರ ಹೆಂಡತಿಯ ಕಿವಿಗೂ ಬತ್ತು.

ಅವತ್ತು ಸಂಜೆ ಹೆಗ್ಗಡೆ ತಮ್ಮ ಕೋವಿಯನ್ನು ಹೆಗಲ ಮೇಲೆ ಹಾಕಿಕೊಂಡು ಕಾಲುಗಳನ್ನು ಮೆಟ್ಟುಗಳಿಗೆ ಸೇರಿಸುತ್ತಿದ್ದಾಗ ಅವರ ಪತ್ನಿ "ಎಲ್ಲಿಗೆ ಸವಾರಿ?" ಎಂದು ಛೇಡಿಸಿದಳಂತೆ. ಒಳ್ಳೆಯ ಕೆಲಸಕ್ಕೆ ಹೋಗುತ್ತಿರುವಾಗ ಇವಳದ್ದೊಂದು ಅಪಶಕುನ ಎಂದು ಹೆಗ್ಗಡೆ ಗೊಣಗಾಡಿದರಂತೆ. ಯಾಕೆಂದರೆ ನಮ್ಮಲ್ಲಿ ಹೊರಗಡೆ ಹೋಗುತ್ತಿರುವವರನ್ನು "ಎಲ್ಲಿಗೆ?" ಎಂದು ಕೇಳಕೂಡದು, ಹಾಗೆ ಕೇಳಿದರೆ ಹೋದ ಕೆಲಸ ಆಗುವುದಿಲ್ಲ ಎಂಬ ಮೂಢನಂಬಿಕೆ ಇದೆ. ಆದ್ದರಿಂದ "ಎಲ್ಲಿಗೆ?" ಬದಲಾಗಿ "ಎಷ್ಟು ದೂರ?" ಅಂತ ಕೇಳಬೇಕು. ತಮ್ಮ ಹೆಂಡತಿ ಹಾಗೆ ನಾಜೂಕಾಗಿ ಕೇಳದೆ ನೇರವಾಗಿ "ಎಲ್ಲಿಗೆ" ಎಂದು ಕೇಳಿದ್ದರಿಂದ ಹೆಗ್ಗಡೆಗೆ ಸಿಟ್ಟು ಬಂದಿತ್ತು.

"ಅಪಶಕುನ" ಎಂದು ಹೆಗ್ಗಡೆ ಗುಡುಗಿದರು.


"ಪುಣ್ಯ ಕೆಲಸಕ್ಕೆ ಹೋಗುತ್ತಿದ್ದೀರಿ ಅದಕ್ಕೇ ನಾನು 'ಎಲ್ಲಿಗೆ' ಅಂತ ಕೇಳಬಾರ್ದು. ನಿಮಗೆ ನಾಚಿಕೆ ಇಲ್ಲ, ಮರ್ಯಾದೆ ಇಲ್ಲ, ಮೊಮ್ಮಕ್ಕಳಾಗಿದ್ರೂ ಆ ರಂಡೆ ಹಿಂದೆ ಹೋಗ್ತೀರಲ್ಲ.. ಅವಳು ಅದೇನು ಮದ್ದು ಹಾಕಿದ್ದಾಳೋ ಏನೋ ನಿಮಗೆ. ಎಲ್ಲ ನನ್ನ ಹಣೆಬರಹ" ಅಂತ ಅವರ ಪತ್ನಿ ವಾಚಾಮಗೋಚರ ಬೈಯಲಾರಂಭಿಸಿದರು. ತಮ್ಮ ಪತ್ನಿಯ ಈ ದಾಳಿಯನ್ನು ತಡೆಯಲಾಗದೆ ಹೆಗ್ಗಡೆಯವರು "ದಿನಾ ಸೌತೆಕಾಯಿ ಸಾರು ನೀನ್ ತಿಂತಿಯೇನು?" ಅಂತ ಕೇಳಿದರಂತೆ.

ಮಲೆನಾಡಿನಲ್ಲಿ ಈ ಹಿಂದೆ ತರಕಾರಿಗಳನ್ನು ದುಡ್ಡಿಗೆ ಮಾರುವ ಪದ್ಧತಿ ಇರಲಿಲ್ಲವಾದ್ದರಿಂದ ನಮ್ಮಲ್ಲಿ ತರಕಾರಿ ಅಂಗಡಿಗಳೂ ಇರಲಿಲ್ಲ. ಮಾತ್ರವಲ್ಲ, ಮಳೆಗಾಲದ ಆರು ತಿಂಗಳ ಕಾಲ ಬೇರೆಬೇರೆ ತರಹದ ತರಕಾರಿಗಳೂ ನಮ್ಮಲ್ಲಿ ಸಿಗುತ್ತಿರಲಿಲ್ಲ. ಆದ್ದರಿಂದ ಬೇಸಿಗೆಯಲ್ಲಿ ಬೆಳೆಯುತ್ತಿದ್ದ ಸೌತೆಕಾಯಿ, ಚಿನಿಕಾಯಿ, ಗೋಟ್‌ಕಾಯಿ ತರಹದ ದೀರ್ಘಕಾಲ ಬಾಳಿಕೆ ಬರುವ ತರಕಾರಿಗಳನ್ನು ಸಂರಕ್ಷಿಸಿ ಮಳೆಗಾಲದಲ್ಲಿ ಅನಿವಾರ್ಯವಾಗಿ ಅವುಗಳನ್ನು ದಿನನಿತ್ಯ ಉಪಯೋಗಿಸುತ್ತಾರೆ. ಸೌತೆಕಾಯಿಯನ್ನು ಬಳಸಿ ವೈವಿಧ್ಯ ಖಾದ್ಯಗಳನ್ನು ಮಾಡುವವರಿದ್ದಾರೆ. ಆದರೆ ಅದು ಎಲ್ಲರಿಗೂ ಬರುವುದಿಲ್ಲ. ಆ ಕಾರಣಕ್ಕೇ ನಮ್ಮಲ್ಲಿ ಸೌತೆ ಕಾಯಿ ಸಾರು ಎಂದರೇನೇ ಬಹಳಷ್ಟು ಜನ ಮುಖ ಮುರಿಯುತ್ತಾರೆ.

ಅವತ್ತು ಸಿಟ್ಟಿಗೆದ್ದ ಖಯಾಲಿ ಮನುಷ್ಯ ಹೆಗ್ಗಡೆಯವರು ತಮ್ಮ ಪತ್ನಿಯ ದಾಳಿಯನ್ನು ಸಹಿಸಲಾಗದೆ ಒಂದೇ ಮಾತಿನಲ್ಲಿ "ದಿನಾ ಸೌತೆಕಾಯಿ ಸಾರು ನೀನಿ ತಿಂತ್ತೀ ಏನು?" ಎಂದು ಕೇಳಿ ಹೊರಗೆ ಹೊರಟರಂತೆ. ಅಂದಿನಿಂದ ಈ ಮಾತು ಜನರ ಬಳಕೆಯಲ್ಲಿ ಸೇರಿಕೊಂಡಿದೆ. ಮಠದ ಫಣ ಪಾರಿಗಳ ಬಗ್ಗೆಯೂ ಇದೇ ಮಾತನ್ನು ಹೇಳಬಹುದು.

ಮಂಗನ ಬ್ಯಾಟೆ


10



ಫಣ ಪಾರಿಗಳು ಮಠದ ಲೆಕ್ಕಾಚಾರ ನೋಡುವ ನೆಪದಲ್ಲಿ ಬೆಳಗ್ಗೆಯೇ ಉಗ್ರಾಣಕ್ಕೆ ಬಂದು ಕಿಟಕಿಯ ಹಿಂದೆ ನಿಂತು ಜೊಲ್ಲು ಸುರಿಸುತ್ತಿದ್ದರು. ಭಕ್ತಾದಿಗಳು ಹೊಳೆಯಲ್ಲಿ ಸ್ನಾನವನ್ನೇನೋ ಮಾಡುತ್ತಿದ್ದರು. ಆದರೆ ಬಟ್ಟೆ ಬದಲಾಯಿಸಬೇಕಲ್ಲ, ಅದರಲ್ಲೂ ಆಗ ತಾನೆ ಬಂದಿದ್ದ ಎಲಾಸ್ಟಿಕ್ ಒಳ ಉಡುಪು ಮೈಯಿಗೆ ಅಂಟಿಕೊಂಡು ತುಂಬಾ ತೊಂದರೆ ಕೊಡುತ್ತಿದ್ದವು. ಒಂದು ದಿನ ಪ್ರವಾಸಿ ಮಹಿಳೆಯೊಬ್ಬಳು ಸ್ನಾನ ಮಾಡಿ ಬಟ್ಟೆ ಬದಲಾಯಿಸಲು ಉಗ್ರಾಣದ ಪಕ್ಕ ಇದ್ದ ಅರಳಿ ಮರದ ಹತ್ತಿರ ಬಂದಳು. ಆಕೆಯನ್ನು ಗಮನಿಸಿದ ಪಾರು ಪತ್ಯಗಾರರು ಕಚೇರಿಯ ಬಾಗಿಲನ್ನು ತೆಗೆದು 'ಒಳಗಡೆ ಹೋಗಿ, ಏನೂ ತೊಂದರೆ ಇಲ್ಲ" ಎಂದರು. ಅವರನ್ನು ನಂಬಿದ ಹೆಂಗಸು ಒಳಗೆ ಹೋದಾಗ ಆಕೆಯ ಬಾಯಿಗೆ ಬಟ್ಟೆ ತುರುಕಿ ಆಕೆಯ ಮೇಲೆ ಬಲಾತ್ಕಾರ ಮಾಡಲಾಯಿತು. ಅನಂತರ ಆಕೆಯ ಕೈಕಾಲುಗಳನ್ನು ಕಟ್ಟಿ ಹಾಕಿ, ಉಗ್ರಾಣಕ್ಕೆ ಬೀಗ ಜಡಿದು ಹೊರಟುಹೋದರು.

ಫಣ ಪಾರಿಗಳು ಮನೆಗೆ ಹೋಗಿ, ಜನಿವಾರ ಬದಲಾಯಿಸಿ, ಸ್ನಾನ ಮಾಡಿ ಮಠದ ಮುಖ್ಯ ಕಚೇರಿಗೆ ಬಂದರು. ಮುಗ್ಧರಾಗಿದ್ದ ಗುರುಗಳು ಮಠದ ಲೌಕಿಕ ವ್ಯವಹಾರದ ಬಗ್ಗೆ ನಿರ್ಲಿಪ್ತರಾಗಿರುತ್ತಿದ್ದರು. ಆದರೆ ಫಣ ಪಾರಿಗಳು ತನ್ನೊಂದಿಗೆ ಅಮಲ್ದಾರ, ಫರ್‌ದಾರ, ಕಿಲ್ಲೆದಾರ, ಫೌಜಿದಾರ, ಮುಂತಾದ ಅಧಿಕಾರಿಗಳೊಂದಿಗೆ ಆತ್ಮೀಯರ ಪಟಾಲಂಅನ್ನೇ ಹೊಂದಿದ್ದರು. ಮಾತ್ರವಲ್ಲ, ಅವರೊಂದಿಗೆ ಎಲ್ಲ ಕೆಲಸಗಳನ್ನು ಒಟ್ಟೊಟ್ಟಾಗಿಯೇ ಮಾಡುತ್ತಿದ್ದರು. ಮಠದ ಅಭಿವೃದ್ಧಿಗೆ ಇದೂ ಒಂದು ಕಾರಣವಾಗಿತ್ತು.

ಅವತ್ತು ಅಮಲ್ದಾರ ಶಂಕರ ಶಾಸ್ತ್ರಿಗಳನ್ನು ತಮ್ಮಲ್ಲಿಗೆ ಕರೆಸಿಕೊಂಡ ಫಣ ಪಾರಿಗಳು ಅವರಿಗೆ ಗುಟ್ಟಾಗಿ ಉಗ್ರಾಣದಲ್ಲಿ ಒಳ್ಳೆ ಮಾವಿನ ಹಣ್ಣು ಇದೆ, ಅದನ್ನು ಗೊರುಟು ಹೊರಗೆ ಹಾಕಬೇಡ ಎಂದು ಸೂಚ್ಯವಾಗಿ ಹೇಳಿದರು. ಅಮಲ್ದಾರರು ತಮಗೆ ಬೇಕಾದಷ್ಟು ಮಾವಿನ ಹಣ್ಣನ್ನು ತಿಂದು ಬೀಗ ಹಾಕಿಕೊಂಡು ಬಂದರು. ಹಾಗೆ ಬಂದವರೇ ತಮ್ಮ ಪಾಪವನ್ನು ಉಳಿದವರಿಗೂ ಹಂಚಿದರು.



● ಕಲ್ಕುಳಿ ವಿಠ್ಠಲ ಹೆಗ್ಡೆ

ಪುಣ್ಯಕ್ಷೇತ್ರದಲ್ಲಿ ತನ್ನ ಮೇಲೆ ಆದ ಈ ಅನಿರೀಕ್ಷಿತ ಆಕ್ರಮಣದಿಂದ ಆಘಾತಗೊಂಡ ಭಕ್ತೆ ಮೌನವಾಗಿಯೇ ದೇವರನ್ನು ಬೇಡಿಕೊಂಡು ಪ್ರಜ್ಞಾಹೀನಳಾದಳು. ಬಾಗಿಲು ತೆಗೆದುಬಂದ ದೈತ್ಯರೆಲ್ಲ ಆಕೆಯಮೇಲೆ ಬಂಡೆಗಳಂತೆ ಎಗರಿದಾಗ ತಾನು ಎಲ್ಲಿದ್ದೇನೆ, ಬದುಕಿದ್ದೇನೋ ಸತ್ತಿದ್ದೇನೋ ಎಂದೂ ಆಕೆಗೆ ಗೊತ್ತಾಗುವಂತಿರಲಿಲ್ಲ, ಆಕೆಯ ಮೇಲೆ ಮತ್ತೆಮತ್ತೆ ಬಂಡೆಗಳು ಬೀಳುತ್ತಲೇ ಇದ್ದವು.

ಅಂದು ಮಠದ ಅಧಿಕಾರಿಗಳು ಒಬ್ಬರನಂತರ ಮತ್ತೊಬ್ಬರು ಉಗ್ರಾಣದ ಕಚೇರಿಗೆ ಹೋಗಿಬರುತ್ತಿರುವುದನ್ನು ಪಾರದ ಭೈರ ಗಮನಿಸಿದ. ಉಗ್ರಾಣದ ಒಳಗೆ ಹೋಗುವಾಗ ಅಧಿಕಾರಿಗಳ ಘನಂಧಾರಿ ಗತ್ತಿನಲ್ಲಿ ಹೋಗುತ್ತಿರುವವರು ಹೊರಬರುವಾಗ ಹೊದ್ದುಕೊಂಡಿದ್ದ ಪಂಚೆಯನ್ನೇ ಮುಸುಕು ಮಾಡಿಕೊಂಡು ಕಳ್ಳ ಬೆಕ್ಕುಗಳಂತೆ ಬರುತ್ತಿದ್ದಾರಲ್ಲ ಎಂದು ಭೈರನಿಗೆ ಅನುಮಾನ ಬಂತು. ಉಗ್ರಾಣದ ಒಳಗೆ ಏನೋ ಕರಾಮತ್ತು ನಡೆಯುತ್ತಿದೆ ಎಂದು ಬಾಗಿಲಿಗೆ ಕಿವಿಗೊಟ್ಟು ನಿಂತ. ಉಗ್ರಾಣದಲ್ಲಿನ ಲೆಕ್ಕಾಚಾರದ ಮರ್ಮ ಆತನಿಗೆ ಗೊತ್ತಾಯಿತು. ಆದರೆ ಯಾರು ಅಂತ ಗೊತ್ತಾಗಲಿಲ್ಲ. ಸಂಜೆ ಹೊತ್ತಿಗೆ ಹೊಳೆಯಲ್ಲಿ ಸ್ನಾನಕ್ಕೆ ಬಂದಿದ್ದ ಮಹಿಳೆಯೊಬ್ಬರು ಕಾಣೆಯಾಗಿದ್ದಾರೆ ಎಂಬ ಸುದ್ದಿ ಕೇಳಿದಾಗ ಭೈರನಿಗೆ ಗುಟ್ಟು ತಿಳಿಯಿತು. ಹಾಗೆಯೇ ಭೈರನಿಗೆ ಈ ವಿಚಾರ ತಿಳಿದಿದೆ ಎಂಬ ಸುದ್ದಿ ಫಣ ಪಾರಿಗಳ ಕಿವಿಯನ್ನು ತಲುಪಿತು. ಕತ್ತಲಾದ ನಂತರ ಮುಖ್ಯ ಪಾರ ಪತ್ಯಗಾರರು ಭೈರನನ್ನು ಮುಖ್ಯ ಕಚೇರಿಗೆ ಕರೆಸಿಕೊಂಡು ಫಣ ಪಾರಿಗಳ

ಆಪ್ತ ಕೋಣೆಗೆ ಹೋಗುವಂತೆ ಹೇಳಿದರು. ಆಡಳಿತಾಧಿ
ಗಳ ಆಪ್ತ ಕೋಣೆಗೆ ಭೈರ ಎಂದೂ ಹೋದವ
ಹಾಗೆಯೇ ಆತನನ್ನು ಇಷ್ಟು ಹತ್ತಿರ ಅವರು ಎ
ಕರೆಸಿಕೊಂಡಿದ್ದೂ ಇರಲಿಲ್ಲ. ಇಷ್ಟು ದಿನ "ಸಂಬಳ
ಒಂದು ಸ್ವಲ್ಪ ಜಾಸ್ತಿ ಮಾಡಿ, ಸಾಲ ಮನ್ನಾ ಮ
ಇಷ್ಟು ವರ್ಷ ಮಠಕ್ಕೆ ದುಡಿದಿದ್ದೀನಿ" ಎಂಬ ಭೈ
ಅಹವಾಲನ್ನು ಕೇಳಿಸಿಕೊಳ್ಳುವವರೂ ಇರಲಿಲ್ಲ.
ಮುಟ್ಠಾಳು, ಆದರೂ ಆತನ ಮೇಲೆ ಹಲವು ನಿಬಂ
ಗಳಿದ್ದವು. ಇವತ್ತು ತನ್ನನ್ನು ಇಷ್ಟು
ಕರೆಯುತ್ತಿರುವುದಕ್ಕೆ ಕಾರಣ ಏನೋ
ಬೇಕೆಂದು ಹೆದರುತ್ತಲೇ ಆತ ಆಪ್ತ ಕೋ
ಹೋದ. ಭೈರ ಕಂಡಕೂಡಲೇ
ಭೈರಪ್ಪ" ಅಂತ ಕರೆದ ಫಣ ಪಾರಿ
ತಮ್ಮ ಕೈಬೆರಳಲ್ಲಿದ್ದ ಒಂದು ಪ
ಉಂಗುರವನ್ನು ತೆಗೆದು ಭೈರನಿಗೆ ಕೊಟ್
ಮಠದವರ್ಯಾರೂ ಭೈರನಿಗೆ ಉಡುಗ
ಕೊಟ್ಟಿರಲಿಲ್ಲ. ಆತನಿಗೆ ಆಶ್ಚರ್ಯವಾಯಿ
"ಬೇಡ ಸ್ವಾಮಿ, ಬೇಡ ಸ್ವಾಮಿ" ಎ
ಹೇಳುತ್ತಲೇ ಬಗ್ಗುತ್ತಾ ಕೈ ಒಡ್ಡಿದ.

"ಉಗ್ರಾಣದೊಳಗೆ ಯಾರೋ ಹೆಂ
ಸೇರಿಕೊಂಡಿದ್ದಾಳೆ. ಅದ್ಯಾವುದೋ ಹೆಂ
ಹೊಳೆಗೆ ಸ್ನಾನ ಮಾಡಲು ಹೋದವಳು ನ
ಆಗಿದ್ದಾಳಂತೆ. ಯಾರೋ ಗಂಡ ಬಿಟ್ಟ
ಬೇಕು. ಕಿಲ್ಲೆದಾರರು ನಿನ್ನ ಜೊತೆಗಿರು
ಇದು ಮಠದ ಮರ್ಯಾದೆಯ ಪ್ರಶ್ನೆ. ಇ
ನೀನೇ ಬಗೆಹರಿಸಬೇಕು. ಇದು ನಿನ್ನ
ಬ್ದಾರಿ..." ಅಂತೆಲ್ಲ ಏನೇನೋ ಹೇಳುತ್ತಿ
ಎಂದಿನ ಅಧಿಕಾರದ ದರ್ಪ ಅವರಲ್ಲಿ ಕ
ತ್ತಿರಲಿಲ್ಲ. ಈ ಎಲ್ಲ ಅನಿರೀಕ್ಷಿತ ಘಟನೆಗಳಿಂದ ಭೈ
ಅವರು ಹೇಳಿದ್ದೆಲ್ಲ ಅಸ್ಪಷ್ಟವಾಗಿ ಅರ್ಥವಾಗಿತ್ತು. ಆ
ಆತ 'ಆಯ್ತು ಸ್ವಾಮಿ', 'ಆಗಲಿ ಸ್ವಾಮಿ', 'ಮ
ಸ್ವಾಮಿ' ಎಂದು ಹೇಳುತ್ತಿದ್ದ. ಫಣ ಪಾರಿಗಳು
ಹೊರನಡೆದರು. ಕಿಲ್ಲೆದಾರ ನರಸಿಂಹ ಅವಧಾನಿ ಬ
"ಹತ್ತು ಗಂಟೆಗೆ ಬರ್ತಿನಿ. ಉಗ್ರಾಣದ ಹತ್ತಿರ ಇ
ಎಂದು ಹೇಳಿ ಹೊರಟು ಹೋದ. ಭೈರ ಉಂಗುರ
ಜೋಪಾನವಾಗಿ ತನ್ನ ಖಾಕಿ ಚೆಡ್ಡಿಯ ಒಳಗೆ ಇಳಿ

ಹತ್ತು ಗಂಟೆಗೆ ಸರಿಯಾಗಿ ಟಾರ್ಚ್‌ನೊಂದಿಗೆ ಬ
ಕಿಲ್ಲೆದಾರ ನರಸಿಂಹ ಅವಧಾನಿ ಉಗ್ರಾಣದ ಬಾ
ತೆಗೆದು ಅದರೊಳಗೆ ಬಿದ್ದಿದ್ದ ಹೆಂಗಸನ್ನು ಎತ್ತಿಕೊ
ಭೈರನಿಗೆ ಹೇಳಿದ. ಭೈರ ಕಟ್ಟುಮಸ್ತಾದ ಆಳಾದ
ಅವನಿಗೆ ತಂಡಿ ಬಟ್ಟೆಯಲ್ಲಿದ್ದ ತಂಡಿ ಮುದ್ದೆ ಆಗಿದ್ದ
ಹೆಂಗಸು ಭಾರವೇ ಅನ್ನಿಸಿತು. ಆದರೂ ಬೇತಾಳನ ಶವ
ಆಕೆಯನ್ನು ಎತ್ತಿ ತನ್ನ ಹೆಗಲ ಮೇಲೆ ಹಾಕಿಕೊ
ಅವಧಾನಿಗಳ ಹಿಂದೆ ನಡೆದ. ಆ ಹೆಂಗಸಿನ ದೇಹ
ಇನ್ನೂ ಜೀವ ಇದೆಯೋ, ಇಲ್ಲವೋ ಎಂದು ಗೊತ್ತ
ಭಯಗೊಂಡ. ಅವಧಾನಿಯ ಅಪ್ಪಣೆಯಂತೆ ರಾತ್
ಕತ್ತಲಲ್ಲಿ ಮಠದ ತೋಟದ ಕಾಲುದಾರಿಯಲ್ಲಿ ನ
ಮುಖ್ಯ ಅರ್ಚಕ ಕೃಷ್ಣ ಶರ್ಮರ ಬಾವಿ ಕಟ್ಟೆಗೆ ತಲುಪಿ
ಕಟ್ಟಿಹಾಕಿದ್ದ ಆ ಹೆಂಗಸಿನ ಕೈಕಾಲುಗಳನ್ನು ಅವ
ಬಿಚ್ಚಿದರು. ಆಕೆಯನ್ನು ಬಾವಿಗೆ ಹಾಕಬೇಕೆಂದು
ಹೊತ್ತಿಗೆ ಭೈರನಿಗೆ ಅರ್ಥವಾಗಿತ್ತು. ಅ
ಅವಧಾನಿಗಳು 'ಎತ್ತಿ ಹಾಕ ಬ
ಮಾರಾಯ' ಎಂದು ಪಿಸುಗುಟ್ಟಿದ
ಆಕೆಯನ್ನು ಬಾವಿಯಕಟ್ಟೆಯ ಮೇಲೆ ಕು
ಬಾವಿಯ ನೇಣನ್ನು ಆಕೆಯ ಕು
ಹಾಕಿದ ನಂತರ 'ನಿಧಾನವಾಗಿ ಇ
ಎಂದರು. ಬಾವಿ ಹಗ್ಗ ಪೂರ್ತಿ
ಯೊಳಗೆ ಹೋಯಿತು. ಅಂದಿನಿಂದ
ನನ್ನು ಸದಾ ಕಾಡಿದ ಪ್ರಶ್ನೆ ಆ ಹೆಂ
ದೇಹದಲ್ಲಿ ಇನ್ನೂ ಜೀವವಿತ್ತೆ ಎಂಬ
ಅವತ್ತು ಆತನ 'ಉಡುಗೊರೆ'
ಮುಗಿದಿತ್ತು... ಬೆಳಗ್ಗೆ ಮುಖ್ಯ ಅ
ಕೃಷ್ಣಶಾಸ್ತ್ರಿಯ ಹೆಂಡತಿ ಬಾವಿಯ ಹಗ್ಗ
ಎಳೆದಾಗ ಅದು ಭಾರವಾಗಿತ್ತು. ಹೆದರಿದ ಗಂಡ ಹೆ
ಟಾರ್ಚ್ ಹಾಕಿ ನೋಡಿದರೆ ಏನೂ ಕಾಣಿಸಲಿಲ್ಲ. ಅಕ್ಕ
ಮನೆಯವರನ್ನೆಲ್ಲ ಕರೆದು ಹಗ್ಗವನ್ನು ಎಳೆದಾಗ ಉದ್ದಕೂದ
ಅರೆನಗ್ನ ಹೆಂಗಸಿನ ದೇಹ ಕಾಣಿಸಿತು. ಆಗ ಈ ಪ್ರ
ದೊಡ್ಡ ಸುದ್ದಿ ಆಯಿತಾದರೂ ಅನಂತರ ಎಲ್ಲ ಸುದ್ದಿಗ
ಮರೆಯಾಯಿತು. ಆದರೆ ಈ ಪ್ರಕರಣದಿಂದಾಗಿ ಮಠ
ಒಂದು ಬದಲಾವಣೆ ಆಯಿತು. ಅಂದಿನಿಂದ ಶು
ಸುಗ್ಗಿ ಹಬ್ಬದ ರಾತ್ರಿ ತೇರು ವಜಾ ಆಗಿ ಮಡಿ ಬ್ರಾಹ್ಮ
ಎಳೆಯುವ ಬೆಳಗ್ಗಿನ ತೇರು ಪ್ರಾರಂಭವಾಯಿತು.

ಎಲ್ಲರೂ ಮರೆತಿದ್ದ ಮುಚ್ಚಿಹೋಗಿದ್ದ ಈ ಪ್ರ
ಹಲವಾರು ವರ್ಷಗಳ ನಂತರ ಮಂಗಗಳ ಕೃಪೆಯಿ
ಮತ್ತೆ ಜೀವ ಪಡೆಯಿತು. ಅವತ್ತು ಸತ್ತ ಹೆಂಗಸಿನ
ಮತಿಭ್ರಮಣೆಗೊಂಡು ಹುಚ್ಚನಾದನಂತೆ. ಆ ಹೆಂ
ಪ್ರೇತವೇ ಮಂಗನ ರೂಪದಲ್ಲಿ ಬಂದು ಗುರು
ಕಚ್ಚಿದೆ ಎಂಬೆಲ್ಲ ಮಾತುಗಳು ಕೇಳಿಬಂದವು....

(ಮುಂದುವರೆಯುವ

...ದ್ಯಾವೇಗೌಡನಿಗೆ ತಕ್ಕ ಎದುರಾಳಿ ಎಡೂರಪ್ಪನಂತೆ

...ಬಿಸಿಲು, ವಿನಾಕಾರಣ ಮನಸ್ಸು ಘಾಸಿಗೊಳ್ಳುವ
. ಆದ್ದರಿಂದ ಕಾಳಮಾವನಿಗೆ ಯಾವ ರಾಜಕಾರಣಿ
...ಗತಿಯೂ ಬೇಕಿರಲಿಲ್ಲ, ಕೇಳಲು ತಯಾರಾದರೆ
...ಉಗ್ರಿ, ಎಡೂರಪ್ಪನ ವಾಸಿಯಾಗದ ಕಾಯಿಲೆ
...ರೆಯಲು ತಯಾರಾಗಿದ್ದ. ಇದನ್ನರಿತ ಕಾಳಮಾವ
...ದ್ದಿ ತೆಗೆದು,
...ಗಾದಿಯಬ್ಬ ಯಾವತ್ಲೆ ಜುಮ್ಮಿ?" ಎಂದ.
...ಬಂದ್ಲು ಸ್ವಾಮಾರಕೆ ಎಂಟು ದಿಸಕಂತೆ ಕಣಮಾವ"

... ಬಂದೇಬುಡ್ತು ನೋಡವ್ವ ಆಗ್ಲೆಯು."
...ಮಾರಬ್ಬಾದ್ರೆ ಮಂಗಳಾರ ವರಸ ತೊಡಕು. ಈ

...ಮ ಉ ಸೀ ಮೆ

ಕಟ್ಟೆಪುರಾಣ

▸ಬಿ. ಚಂದ್ರೇಗೌಡ

...ಲ್ಲ ಸೇರಿ ದ್ವಡ್ಡಮ್ಮನಬ್ಬ ಮಾಡ್ತರಂತೆ."
...ಡ್ಡೆಸ್ರೊದ್ರು ಬುಟ್ಟಳವುಳು. ಮಾಡಿಸಿಗತ್ತೆ. ಊರಬ್ಬ
...ವು ಯಾವುದ್ದಾರಾಗಿದ್ದವೂ?" ಎಂದ ಕಾಳಮಾವ.
...ಚಿಗೆ ಸುಮಾರೂರಲ್ಲಿ ಹಬ್ಬ ನಿಂತೋಗ್ಯವೆ
...ವ" ಎಂದ ಉಗ್ರಿ.
...ದ್ಯಾಕ್ ನಿಂತವೆ?"
...ಮ್ಮೂರಲ್ಲಿ ಯಾಕೆ ನಿಂತಿತ್ತೋ ಅದೇ ಕಾರಣವ
...ಊರಿಗೂ ಕೊಡಬವುದು. ಈ ದಳದ ಬಡ್ಡೆತ್ತವುಕೆ
... ಕಂತ್ರಾಟಲಿ ಕಾಸಾಯ್ತು. ಅದ್ಕೆ ತೋಳು ತಿಮುರು
...ಯ್ತು. ಸರಿ ಕಾಂಗ್ರೆಸಿನವು ಸುಮ್ಮನಿದ್ದವೆ. ಅವು
...ಗದವೆ. ಅಂಗಾಗಿ ಊರಬ್ಬಗಳು ನಿಂತೋಗ್ಯವೆ.
... ಬಿಜೆಪಿ ಬ್ಯಾರೆ ಹಳ್ಳಿಕಡಿಕೆ ಬಂದದೆ.
...ಗೌಡನೆ ಬಿಜೆಪಿ ಲೀಡ್ರು ಅಂದ್ರೆ ಕೇಳಬೇಕೆ.
...ರು ನ್ಯಟ್ಟಗಿದ್ದವೂ?" ಎಂದ ಉಗ್ರಿ.
...ವುನ ಮಗನ ಮದಿವಾಯ್ತಂತೆ, ಹೋಗಲಿಲವೇನ್ಲ

...ಹೋಗಲಿಲ್ಲ ಕಣಮಾವ. ಅದು ಬೆಂಗಳೂರು
...ಲಿ ಮಾಡಿದನಂತೆ."
...ಗಳೂರರ ಮನೆಲಿ ಮಾಡಿದ್ನೆ!"
... ಕಣ ಮಾವ. ಕೋಟ್ಯಂತ್ರುಪಾಯಿ ಕರ್ಚು
... ಮಗನ ಮದುವೆ ಮಾಡಿದನಂತೆ. ಇಲ್ಲಿಂದ
...ಟು ಜನ ಹೋಗಿದ್ರು. ಜುಮ್ಮಿ ಹೋಗಬೇಕು
...ನ್ಲೇಯಿಲ್ಲ."
...ವೀಗ ಕಾಂಗ್ರೆಸ್ಸು, ಅವುನು ಬಿಜೆಪಿ. ಅದ್ಯಂಗ್ಲ
...?"
...ರ್ಟಿ ವೈಸಮ್ಯನ್ಸಲ್ಲ ಮದುವಿಗೆ ತರಬಾರ್ದು
...ಎಂದ ಕಾಳಮಾವ.
...ಗಂತ ಹೋದ್ರೆ, ಓ ಇವುರು ಮ್ಯಾಲ್ನಾಟಕೆ
...ವೆ, ವಳಗೆ ಚನ್ನಾಗೆ ಅವ್ರುರೆ ಅನ್ನಕಳದಿಲವೆ

"ಅದು ನಿಜವೆ ಬುಡು. ಈ ಹಾಳು ರಾಜಕಾರಣ ಮನುಸನ ಪರಿಸ್ಥಿತಿಯ ಎಲ್ಲಿಗೆ ತಂದು ಮಡಗ್ಯದೆ ನೋಡು" ಎಂದ ಕಾಳಮಾವ.

"ನೀನೋಗಿರಲಿಲವೇನೊ ಸೀರಮಾವ ಮದುವಿಗೆ?"

"ಇಲ್ಲೆಲ್ಲಾರ ಮಾಡಿದ್ರೆ ಹೋಯ್ತಿದ್ದೆ ಕಂಡ್ರೆ. ಅದು ಬೆಂಗಳೂರರಮನೆಗೆ ನಮ್ಮಂಥೋರು ಯಾಕೋಗದು ಅಂತ ಸುಮ್ಮನಾದೆ."

"ಅರಮನೆಲ್ಯಾಕೆ ಮದುವೆ ಮಾಡಿದ? ಇವುನೇನು ರಾಜಮನ್ಸನದೋನೆ?"

"ಬೇಕಾದೋಟು ದುಡ್ಡದೆ ಕಣಮಾವ. ಅವುನು ಬಿಡಿಎ ಛೇರಮೀನಾಗಿದ್ದ ನೋಡು, ಆಗ ಮಾಡಿಕಂಡಿರೊ ಸೈಟು ಮಾರಿದ್ರೆ ಸಾಕು ಬೆಂಗಳೂರರಮನೆಯಲ್ಲ ರಾಜಾಸ್ತಾನದ ಜೈಪುರದರಮನೇಲಿ ಮಾಡ ಬವುದು. ಅಷ್ಟು ದುಡ್ಡದೆ ಅವುಂತ."

"ನೋಡಪ್ಪ, ನಾನು ಕಂಡಂಗೆ ಯಾವ ಸ್ಥಿತಿಲಿದ್ರು. ಇವತ್ತೋಗಿ ಅರಮನೇಲಿ ಮದುವೆ ಮಾಡ್ತರೆ ಅಂದ್ರೆ ಏನ್ಹೇಳನ?"

"ಏನು ಹೇಳಂಗಿಲ್ಲ, ಹೋಗಿ ಉಂಡಬರಬೇಕು ಅಷ್ಟೆಯ. ಬೀಗರೂಟನು ಜೋರಾಗಿ ಮಾಡಿಸಿದ್ನಂತೆ ಕಣಮಾವ" ಎಂದ ಉಗ್ರಿ.

"ಬೀಗರೂಟ ಅಂದ್ರೆ ನನಿಗೆದ್ರಿಕಾಯ್ತದೆ ಕಂಡ್ರ" ಎಂದಳು ಜುಮ್ಮಿ.

"ಅದ್ಯಾಕೆದ್ರಿಕತ್ತಿಯೇ? ಬೀಗರೂಟ ಅಂತ ಬ್ಯಾರೆ ಬಾಡಾಕ್ಯರೆ. ಆಡುಕುರಿನೆ ಅಲ್ವೆ ಕುಯ್ಯದು."

"ಅದಕಲ್ಲ ಕಂಡ್ರ. ಆಚೆ ತಿಂಗಳೂ ಬೀಗರೂಟಕೆ ಅಂತ ಹೋಗಿ ಟೆಂಪೊ, ಆಕ್ಸೆಂಟಾಗಿ ಹದುಮೂರು ಜನ ಸತ್ತೋದ್ರು. ಅಲ್ಲಿಗಲ್ಲಿಗೆ ಒಂದೇ ವಾರಕೆ ನಂಜನಗೂಡತ್ರ ಬರೀ ಹೆಂಗಸರೇ ಸತ್ತೋದ್ರು. ಅದರಲ್ಲೂ ಕದಬಳ್ಳಿತ ಸತ್ತೋರೋದ್ರು ಉಳದೋರ ಪಾಡ ನೋಡಕ್ಯಾಗದಿಲ್ಲ, ಅವ್ರುರ ನೋಡಿದ್ರೆ ಸಾಕು ಬೀಗರೂಟನೂ ಬ್ಯಾಡ, ಬಿಜ್ಜರೂಟನೂ ಬ್ಯಾಡ ಅನ್ನಂಗಾಗ್ಯದೆ" ಎಂದಳು ಜುಮ್ಮಿ.

"ಕದಬಳ್ಳಿತ ಟೆಂಪೊ ಆಕ್ಸಿಡೆಂಟಾಯ್ತಲ್ಲಾ ಅದರ ಕತೆಗೊತ್ತ ಮಾವ ನಿಂಗೆ?"

"ಇಲ್ಲ ಕಣೇಳ್ಳ."

"ಅದು ಹರಿಜನರ ಮದುವೆ ಬೀಗರೂಟ ಕಣ ಮಾವ. ಈ ಟೆಂಪೊ ತಗಂಡೋಗಿದ್ದೋನು ಯಾವುದೊ ಬ್ಯಾರೆ ಜಾತಿ. ಆ ನನಮಗ ನಾನು ಹರಿಜನರ ಮನೆಲಿ ಉಣ್ಣದಿಲ್ಲ ಅಂದನಂತೆ. ಅದ್ಕೆ ಕಾರ್ಯ ಮಾಡಿದೋರು ಒಂಚೂರು ಬೇಜಾರಾಗದಂಗೆ 'ಅಂಗರೆ ಹೋಟ್ಲಿಗೋಗಿ ಉಂಡು ಬಾರಪ್ಪ' ಅಂತ ದುಡ್ಡು ಕೊಟ್ಟು ಕಳಿಸಿದ್ರಂತೆ. ಆ ಮುಂಡೆಮಗ ಉಣ್ಣದ್ರು ಬದ್ಲು, ವಟ್ಟೆತುಂಬ ಬ್ರಾಂದಿ ಕುಡಕಂಡು ಬಂದ. ನೇರ ಹೋಗಿ ಲಾರಿಗ್ವಡದು ಹದುಮೂರು ಜನ ಪ್ರಾಣ ತಗದ ಅತ್ತಗೆ" ಎಂದ ಉಗ್ರಿ.

"ಅಯ್ಯೋ ಮುಂಡೆ ಮಗನೆ, ಯಂತ ಅನಾವುತ ಮಾಡಿದನಯ್ಯಾ" ಎಂದು ಕಾಳಮಾವ ಲ್ವಚಗರಿದ.

"ಆಗ್ಲಿಂದ ಬೀಗರೂಟ ಅಂದ್ರೆ ಹೆದ್ರಿಕಾಯ್ತದೆ ಕಣಮಾವ" ಎಂದಳು ಜುಮ್ಮಿ.

"ಜನ ಸಾಯುದ ಅಂಗೇ ನೋಡಿದ್ದಿನಿ ನಾನು. ಮದಿವಿಗೋದೋರು, ದೇವುರಿಗೋದೋರು, ಅಯ್ಯಪ್ಪನಿಗೋದೋರೆ ಸಾಯ್ತರಲ್ಲ ಏನಿದರ ಕತೆ ಅಂತಿನಿ" ಎಂದ ಸೀರ.


"ಅವುರದಿರಲಿ ಕಣೊ ಮಾವ. ಲಗ್ನಪತ್ರಿಕೆ ಕೊಡಕ್ಯೋದ ಗಂಡೆ ಸತ್ತಿಲವೆ" ಎಂದಳು ಜುಮ್ಮಿ.

"ಯಾವ ಸಾವಿಗೂ ಅರ್ಥವೇಯಿಲ್ಲ ಹೋಗತ್ತಗೆ" ಎಂದು ಕಾಳಮಾವ ಹೇಳುವುದಕ್ಕೂ, ವಾಟಿಸ್ಸೆ ಬರುವುದಕ್ಕೂ ಬಂದೇ ಆಯ್ತು. ದುರುಗುಟ್ಟಿದ ವಾಟಿಸ್ಸೆ,

"ಇದ್ಯಾಕ್ ದ್ವಡಪ್ಪ ಹಿಂಗಂತಿ. ನಿನ್ನ ಸಾವಿಗೆ ಖಂಡಿತ ಒಂದು ಒಳ್ಳೆ ಅರ್ಥ ಇದ್ದೇ ಇರತದೆ ತಿಳಕೊ."

"ತಿಳಕಂಡೇನು ಮಾಡ್ಲೀ?"

"ನೀನೇನು ಮಾಡದ ಬ್ಯಾಡ. ನಾವು ಬ್ಯಾರೆ ಜನಕೆ ಹೇಳ್ತಿವಿ. ನಮ್ಮ ದ್ವಡಪ್ಪ ಇದ್ದ, ಯಾರಿಗೂ ಅನ್ಯಾಯ ಮಾಡ್ಲಿಲ್ಲ, ಯಾರಾಸ್ತಿನೂ ಲಪಟಾಯಿಸಲಿಲ್ಲ, ಕುಡಿಲಿಲ್ಲ, ತಿನ್ನಲಿಲ್ಲ, ಬೀಡಿಬುಟ್ರೆ ಇನ್ನೇನು ಸೇದಲಿಲ್ಲ, ಏಕಪತ್ನಿ ವ್ರತಸ್ಥನಾಗಿದ್ದ, ಹುಟ್ಟಿದಾಗಿಂದ ಸಾಯೋವರಿಗೂ ರಾಗಿಮುದ್ದೆ ತಿಂದ. ಅದ್ಕೆ ನೋಡಿ ಸುಖವಾಗಿ ಜಗಲಿಮ್ಯಾಲೆ ಪ್ರಾಣಬಿಟ್ಟ. ನೀವು ಅವುನಂಗೆ ಬಾಳಕ್ಕೆ ಟ್ರೈ ಮಾಡಿ ಅಂತ ಹೇಳ್ತೀನಿ"



ಎಂದು ವಾಟಿಸ್ಸೆ ಹೇಳುವಾಗ ನಗಾಡಿದ ಜುಮ್ಮಿ,

"ಕಾಳಮಾವನ ಪ್ರತಾಪ ಅಷ್ಟೆ ಏನ್ಲ?" ಎಂದಳು.

"ಅಷ್ಟೆ ಅಲ್ಲ ಕಣಕ್ಕ, ಇನ್ನ ಅದೆ. ನಾಲ್ಕು ಗಂಡು ಮಕ್ಕಳು, ಮೂರು ಹೆಣ್ಣು ಮಕ್ಕಳಿಗೂ ಮದುವೆ ಮಾಡಿದ. ಮದುಲ್ನೆ ಮಗಳ ಗಂಡನ ತಿಥಿಯ ತಾನೇ ಮಾಡಿದ. ಇಂತವು ನೂರಾರವೆ. ಅವುನಿಂದ ನಮ್ಮೂರಿಗೆ ಒಂದು ಕಳೆ. ದ್ಯಾವೇಗೌಡ್ರು ಹ್ಯಂಗೆ ಜೆಡಿಎಸ್ ಪಾರ್ಟಿಗೆ ಮೇಟಿನೊ, ಅದೇ ತರ ನಮ್ಮ ಕಾಳ ದ್ವಡಪ್ಪನೂ ನಮ್ಮೂರ ಮೇಟಿ. ಅಲವೆ ದ್ವಡಪ್ಪ?" ಎಂದ ವಾಟಿಸ್ಸೆ.

"ಕೇಮಿದ್ರೆ ಮಾಡ್ಕ."

"ಜೆಡಿಎಸ್ನಲಿ ದ್ಯಾವೇಗೌಡ್ರು ಹೋದಮ್ಯಾಲೆ ಕುಮಾರಣ್ಣ ಮೇಟಿ ಆದ್ರೆ ನಮ್ಮ ಕಾಳಮಾವ ಹೋದ ಮ್ಯಾಲೆ ಯಾರೂ ಇಲವಲ್ಲೊ?"

"ಯಾರಾರ ಹುಟಗತ್ತರೆ ಕಣೊ ಉಗ್ರಿ, ಡೋಂಟ್ ವರಿ. ನಮ್ಮದೇನು ಜೆಡಿಯು ಪಾರ್ಟಿ ಅನ್ನಕಂಡ್ಯ, ಪರಿಸ್ಥಿತಿನೆ ಲೀಡ್ರುಗಳ ತಯಾರು ಮಾಡ್ತದೆ. ಆದ್ರೆ ಎಡೂರಪ್ಪನಂತ ಲೀಡ್ರು ಯಾರಿಗೂ ಬ್ಯಾಡ ಕಣಪ್ಪ, ಇಂತ ಕಿವಿಕಿತ್ತ ಮೂಗರಕನ್ನ ಇಡೀ ದೇಸನೆ ಕಂಡಿಲ್ಲ."

"ಲಲ್ಲುಪ್ರಸಾದ ಇದ್ನಲೊ?"

"ಇವುನೆದ್ರಿಗೆ ಆ ಲಲ್ಲು ನಿಲ್ಲು ಕಣೊ ಉಗ್ರಿ. ಇತ್ತಗೆ ಬೆಂಗಳೂರಲ್ಲಿ ಡಿನೋಟಿಫಿಕೇಷನ್ ಹಗರಣ ನ್ಯಡಿತಾಯಿದ್ರು, ಎಡೂರಪ್ಪ ಜಮೀನ ಕೊಳ್ತುತಲೇ ಇದ್ನಂತೆ. ಇಂತ ಧೈರ್ಯ ಇಡೀ ದೇಶದಲ್ಲಿ ಯಾವನಿಗಿದ್ದತೇಳು ಮತ್ತೆ?"

"ಇಲ್ಲ ಬುಡು, ಇದೊಂತರ ಕಳ್ಳ ಅಂತ ಕರಗಂಡು ಬರುವಾಗ್ಲೆ ದಾರೀಲಿ ಸಿಕ್ಕಿದ್ದ ಬಗಲಿಗಾಯ್ಕಂಡು ಬರೋ ಗಿರಾಕಿ ಸುದ್ದಿ ಕೇಳಿದಂಗಾಯ್ತು."

"ಅಂತ ಜೆಡಿಎಸ್‌ನೋರೆ ಇವುನ ವಿರುದ್ಧ ಹೋರಾಡಿ ಹೋರಾಡಿ ಸಾಕಾಗಿಬುಟ್ರು. ಕಾಂಗ್ರೆಸ್ಸಿನೋರಂತು ಯಾವ ತರದ ಚಳವಳಿ ಮಾಡನ ಅನ್ನವುಲ್ಲೇ ಸುಸ್ತಾದ್ರು. ಇನ್ನೊಂದು ಸುದ್ದಿ ಏನಪ್ಪ ಅಂದ್ರೆ ಅದು ನಿನಿಗೂ ಗೊತ್ತದೆ."

"ಗೊತ್ತಿಲ್ಲ ಹೇಳೊ."

"ನಮ್ಮ ದೇವೇಗೌಡ್ರ ರಾಜಕಾರಣದ ಶೈಲಿಗೆ ಸಿಕ್ಕ ಪ್ರತಿಫಲ ಏನಪ್ಪ ಅಂದ್ರೆ ಎಡೂರಪ್ಪ."

"ಅದ ಹಿಂದೊಂದು ಸತಿ ಹೇಳಿದ್ದಲ್ಲೊ."

"ಇರ್ಲಿ ಕೆಲುವು ಮ್ಯಾಟ್ರು ರಿಪೀಟಾದ್ರು ಚನಾಗಿರತವೆ. ಭಾಳಾ ಬೇಜಾರಾಗೊ ವಿಷಯ ಏನಪ್ಪ ಅಂದ್ರೆ, ಈ ಎಡೂರಪ್ಪನಂಥೋನು, ದ್ಯಾವೇಗೌಡ್ರ ಬೈಯ್ಯದ ಕೇಳಕ್ಯಾಗದಿಲ್ಲ, ಗೌಡ್ರು ಪ್ರಧಾನಿಯಾಗಿದ್ರು ಅನ್ನದು ನ್ಯದರಿಲ್ಲದಂಗೆ ಎಡೂರಪ್ಪನಂಥೋನು ಟೀಕೆ ಮಾಡದು ನನಗೇ ಏನೊ ಒಂಥರಾ ಕಣೊ."

"ದ್ಯಾವೇಗೌಡ್ರೆ ಕೇರ್ ಮಾಡದಿಲ್ಲ, ನೀನ್ಯಾಕೆ ಬೇಜಾರಾಯ್ತಿಯೊ."

"ದ್ಯಾವೇಗೌಡ್ರಿಗೆ ಬೇಜಾರಾಗದಿದ್ರೆ ಅಥವಾ ಮನಸಿಗೆ ನೋವಾಗೊತರ ಇದ್ರೆ, ರಾಜಕಾರಣವ ಈ ಮಟ್ಟಕೆ ತರತಿರಲಿಲ್ಲ. ಅದು ಬುಡು, ಆದ್ರು ಹಿಮಾಲಯ ಹತ್ತಿ ಇಳುದು ಬಂದೋನ್ನ ಬೂಕನಕೆರೆ ಬೆಟ್ಟದ ಮೇಲಿರೋನು ಟೀಕೆ ಮಾಡಿದ್ರೆ ಬೇಜಾರಾಗದಿಲವೇನೊ?"

"ನಿನ್ನ ಬೇಜಾರಂಗಿರ್ಲಿ, ಲಿಂಗಾಯಿತ್ರಿಗೆ ಎಷ್ಟು ಖುಷಿಯಾಗ್ಯದೆ ಗೊತ್ತೆನೊ? ಈ ದ್ಯಾವೇಗೌಡ್ನ ಎದುರುಸೋನೆ ಇರಲಿಲ್ಲ, ನಮ್ಮ ಎಡೂರಪ್ಪ ಯಂಗೆ ಯದೆ ತಟ್ಟಿಗಂಡು ನಿಂತವುನೆ ನೋಡಿ ಅಂತ ಕುಂತವುರೆ. ಇದಕೇನೇಳ್ತಿ?"

"ಸುಮ್ಮನಂಗಂತರೆ ಕಣೊ. ಪಾಪ ವಳಗಡೆ ಈ ಎಡೂರಪ್ಪ ಯಾವ ತರದ ಲಿಂಗಾಯ್ತ, ಕೆಡತಿನಿ ಅಂತ ಹಿಂಗೂ ಕೆಟ್ಟೋದರೆ ಅಂತ ಬೇಜಾರು ಮಾಡಿಕಳರು ಬೇಕಾದೋಟು ಜನವುರೆ. ಕ್ಯಟ್ಟತನ ಯಾವ ಜನಾಂಗದ ಸೊತ್ತು ಅಲ್ಲ, ಅಂಗೆ ವಳ್ಳೆತನನೂ. ಮೈಂಡ್ ಇಟ್ ಅಂಡ್ ಮೇಕ್ ನೋಟ್-ಬರ್ಲಾ." ●

...ಬಹಳ ಹಿಂದಿನ ಗೆಳೆಯ •••

...ಶಕಗಳ ಹಿಂದೆ ಕಂಡಿದ್ದ, ಮೆಚ್ಚಿದ್ದ, ಪ್ರೀತಿಸಿದ್ದ ಗೆಳೆಯರ ಬಗ್ಗೆ ನನ್ನಲ್ಲಿರುವ ವ್ಯಾಮೋಹ ಕಂಡು ನನಗೇ ...ಯಾಗುತ್ತದೆ. ಒಮ್ಮೆ ಶಿವಮೊಗ್ಗೆಯ ಒಂದು ಸಭೆಗೆ ಗೆಳೆಯರು, ಶಿಷ್ಯರು ಸಿದ್ಧತೆ ನಡೆಸಿದ್ದರು. ಆಗ ...ಗ್ಗೆಯ ಸುತ್ತಮುತ್ತಲ ಊರುಗಳಿಂದ ನನ್ನನ್ನು ಬಲ್ಲವರನ್ನು ಕರೆತರಬೇಕೆಂದು ಯೋಚಿಸಿದ್ದರು. ಆಗ ... ಇದ್ದಕ್ಕಿದ್ದಂತೆ "ಬಿನವಳ್ಳಿಯಲ್ಲಿ ಮಹೇಶ ಇದ್ದಾನಲ್ಲ, ಅವನ್ನ ಕರೆದುಕೊಂಡು ಬನ್ನಿ" ಅಂದೆ. "ಅರೆ! ... ಅದು ಹೇಗೆ ಗೊತ್ತು?" ಅಂದರು. "ಗೊತ್ತು, ಅವನು ಮಾಧ್ಯಮಿಕ ಶಾಲೆಯ ನನ್ನ ಸಹಪಾಠಿ. ...ಳ್ಳಿಯ ಸ್ಕೂಲಿಗೆ ಬರ್ತಿದ್ದ, ತುಂಬ ತಮಾಷೆಯವನು. ಈಗ ಹೇಗಿದ್ದಾನೆ?" ಅಂದೆ. ವರ್ಷಗಳು ತಮ್ಮ ...ಮವನ್ನು ಅವನ ಮೇಲೆ ಬಿಟ್ಟಿದ್ದವು. ಆತ ಅದೇ ಮುಗುಳ್ನಗೆಯ ಹಗುರ ಮಾತುಗಳ, ಆದರೆ ...ದ ವ್ಯಕ್ತಿಯಾಗಿದ್ದ, ನನ್ನನ್ನು ಕಂಡೊಡನೆ ಕೈಹಿಡಿದುಕೊಂಡು ಸುಮ್ಮನೆ ನಿಂತ. ಅವನನ್ನು ... ನನಗೆ ಅಪಾರ ಸಂತೋಷವಾಗಿತ್ತು, ಅವನೇ ಮಾಡುತ್ತಿದ್ದ ಒಂದೆರಡು ಜೋಕ್ ಹೇಳಿ ...ಪಡಿಸಿದೆ....

...ನ್ನೆ ಮಧ್ಯಾಹ್ನ ತೀರಾ ಸುಸ್ತಾಗಿ ಮಲಗಿದ್ದೆ. ಆದರೆ 'ಏನಾದರೂ ಕೆಲಸವಿದ್ದರೆ ಎಬ್ಬಿಸಿ' ... ಸಹಾಯಕರಿಗೆ ಹೇಳಿದ್ದೆ. ಒಂದೆರಡು ಗಂಟೆ ಮಲಗಿ ಎದ್ದಾಗ ನನ್ನ ಟೇಬಲ್ ಮೇಲೆ ... ಆಹ್ವಾನ ಪತ್ರಿಕೆ ಇತ್ತು, ಅದು ಮದುವೆಯದು. ರೇವಣ್ಣ ಎಂಬುವರ ಮಗನ ಮದುವೆ. ... ನೋಡುತ್ತಿದ್ದಂತೆ ನನಗೆ ತೀರಾ ಪರಿಚಯದ ರೇವಣ್ಣನ ಮಗನ ಮದುವೆ ಅನ್ನಿಸಿತು. ...ತ್ತೂರು ವರ್ಷದ ಹಿಂದೆ ನಾನು ಶಿವಮೊಗ್ಗೆಯಲ್ಲಿ ಅಧ್ಯಾಪಕನಾಗಿದ್ದಾಗ ನನ್ನ ಜೊತೆಗಿದ್ದ ...ವಣ್ಣ ಎಕನಾಮಿಕ್ಸ್ ಅಧ್ಯಾಪಕನಾಗಿದ್ದ, ಕಪ್ಪಗೆ ಎತ್ತರಕಿದ್ದವನು; ಮಂಡ್ಯದ ಹತ್ತಿರದ ...ಂದ ಬಂದ ಒಕ್ಕಲಿಗರ ಕುಟುಂಬದವನು. ನನ್ನ ಹಿನ್ನೆಲೆಯನ್ನೇ ಉಳ್ಳ ಈ ರೇವಣ್ಣ ನನ್ನ ...ನಾಗಿದ್ದ, ನನಗಿಂತ ಸೌಮ್ಯ ಸ್ವಭಾವದವನು; ಆದರೆ ಬುದ್ಧಿವಂತ, ತುಂಬ ...ಸಾಮಾನ್ಯಪ್ರಜ್ಞೆಯುಳ್ಳವನು. ಆಗ ನಮ್ಮ ಜೊತೆಗಿದ್ದ ಚರಿತ್ರೆಯ ಶಿವಣ್ಣ, ಎಕನಾಮಿಕ್ಸ್ ಟಿ. ಶಿವಣ್ಣ ...ಸಾಯಶಾಸ್ತ್ರದ ನಾಗಭೂಷಣರಾವ್, ರಾಜ್ಯಶಾಸ್ತ್ರದ ಹನುಮಂತಪ್ಪ ಮುಂತಾದ ಎಲ್ಲರಿಗಿಂತ ...ಪನಾದ ಈತ ಗದ್ದೆಲಿಂಗಯ್ಯ, ರಾಮಸ್ವಾಮಿ, ವೆಂಕೋಬರಾವ್, ಶಿವಸ್ವಾಮಿ ಮುಂತಾದವರಿಗಿಂತ ನನಗೆ ಹತ್ತಿರದವನಾಗಿದ್ದ. ನಮ್ಮ ಗೆಳೆತನ ಕಂಡು ಕರುಬುವವರಿದ್ದರು; ಇವರಿಬ್ಬರ ಮಧ್ಯೆ ಅದೇನು ಸಮಾನ ವಿಷಯಗಳಿರಬಹುದು ಎಂದು ವಿಸ್ಮಯಪಡುವವರಿದ್ದರು. ಆದರೆ ನಾವು ಯಾವುದಕ್ಕೂ 'ಕೇರ್' ಮಾಡುತ್ತಿರಲಿಲ್ಲ. ನನ್ನಲ್ಲಿದ್ದ ಹಳೆಯ ಸ್ಕೂಟರ್ ಮೇಲೆ ಓಡಾಡುತ್ತಾ ಹರಟುವುದು, ಗೋಪಿ ಹೋಟೆಲ್‌ನಲ್ಲಿ ತಿಂಡಿ ಮೆಲ್ಲುವುದು, ಏನೇನೊ ಚರ್ಚಿಸುವುದು–ನಮ್ಮಿಬ್ಬರ ಮಧ್ಯೆ ಸಣ್ಣ ಮನಸ್ತಾಪ ಕೂಡ ಆದ ನೆನಪಿಲ್ಲ. ಒಮ್ಮೆ ಈತ ತನ್ನ ಮನೆಗೆ ಊಟಕ್ಕೆ ಕರೆದಿದ್ದ. ಅಲ್ಲಿ ಬಂದಿದ್ದ ಬಹುಪಾಲು ಜನ ಒಕ್ಕಲಿಗರು. ಗದ್ದೆಲಿಂಗಯ್ಯ ಸ್ವಲ್ಪ ತಮಾಷೆಯವರು, ಗೇಲಿ ಮಾಡುವುದರಲ್ಲಿ ಎತ್ತಿದ ಕೈ. ಮಾತಿನ ಮಧ್ಯೆ "ಲೇ ಗೌಡ್ರ, ಹೀಗಾಗೇ ನೀವು ಲಿಂಗಾಯತರಿಗೆ ರಾಜ್ಯ ಒಪ್ಪಿಸಿಕೊಟ್ಟಿದ್ದು" ಅಂದರು. ರೇವಣ್ಣ ತುಂಬ ಸಂಕೋಚದಿಂದ ಮುದುಡಿಕೊಂಡು, 'ಹಾಗೆಲ್ಲ ಮಾತಾಡಬಾರದು' ಎಂದು ಏನೇನೋ ಹೇಳಿದ. ನಾನು ದೊಡ್ಡದಾಗಿ ನಕ್ಕು, 'ಲೇ ರೇವಣ್ಣ, ಸುಮ್ಮಿರಯ್ಯ, ಜನ ಮಾತಾಡಿಕೊಳ್ಳಬಾರದು, ಬೈಕೊಳ್ಳಬಾರದು ಅಂದ್ರೆ ಹೇಗೆ? ಮಾತಾಡ್ಲಿ. ನನಗೇನೂ ಬೇಸರವಿಲ್ಲ' ಅಂದೆ. ಅಲ್ಲಿಗೆ ವಾತಾವರಣ ತಿಳಿಯಾಯಿತು. ಗದ್ದೆಲಿಂಗಯ್ಯ ಕೂಡ ತುಂಬ ಒಳ್ಳೆಯ ಮನುಷ್ಯ. ಈ ಗದ್ದೆಲಿಂಗಯ್ಯನವರನ್ನು ಹದಿನೈದು ವರ್ಷದ ನಂತರ ಮಂಡ್ಯದಲ್ಲಿ ನೋಡಿ ಸಂತೋಷಪಟ್ಟಿದ್ದೆ. ಆತ ಆಗ ಮಂಡ್ಯದ ಸರ್ಕಾರಿ ಕಾಲೇಜಿನಲ್ಲಿ ಕೆಮಿಸ್ಟ್ರಿ ಅಧ್ಯಾಪಕರಾಗಿದ್ದಂತೆ ನೆನಪು.



ನಾನು ಸಾಮಾನ್ಯವಾಗಿ ಮದುವೆಗಳಿಗೆ ಹೋಗುವುದಿಲ್ಲ. ಮಂತ್ರಿ, ಅಧಿಕಾರಿಗಳು, ಗಣ್ಯರ ಮನೆಯ ಮದುವೆಗಳಿಗಂತೂ ಹೋಗುವುದೇ ಇಲ್ಲ. ಅವತ್ತು (ಭಾನುವಾರ) ಈ ರೇವಣ್ಣನ ಮಗ ಡಾ. ರಮೇಶ್ ಮದುವೆಗೆ ಹೋಗಲೇಬೇಕೆಂದು ಹಠ ಹಿಡಿದದ್ದು ನೋಡಿ ನನ್ನ ಸಹಾಯಕರಿಗೆ ಆಶ್ಚರ್ಯ. ನಾನೂ ವಿವರಿಸಲು ಹೋಗಲಿಲ್ಲ. ಭಾನುವಾರ ಬೆಳಗ್ಗೆ ಆ ಆಹ್ವಾನ ಪತ್ರಿಕೆಯನ್ನು ಜೋಪಾನವಾಗಿಟ್ಟುಕೊಂಡು ಮದುವೆಗೆ ಹೋಗಿಬಂದೆ. ಮೂವತ್ತೂರು ವರ್ಷಗಳ ಹಿಂದೆ ಎರಡು ವರ್ಷ ಜೊತೆಗಿದ್ದ ಈ ಗೆಳೆಯ–ಈಗತಾನೆ ನಿವೃತ್ತನಾಗಿದ್ದಾನೆ. ಹಾಗೆಯೇ ಇದ್ದ. ಒಂದೇ ಒಂದು ಕಾಯಿಲೆ ಇಲ್ಲ. ನಾವು ಹೇಗೆ ಮಾತಾಡುತ್ತಿದ್ದೆವು ಎಂಬುದನ್ನೇ ಮರೆತು ಬಹುವಚನ ಬಳಸಿದ. ನಾನು ನಕ್ಕು ಅಪ್ಪಿಕೊಂಡು "ನೀನೊಬ್ಬ ಮೂರ್ಖ ಕಣಯ್ಯ. ನಿನ್ನನ್ನು ನೋಡಿ ನನಗೆ ಎಷ್ಟು ಸಂತೋಷವಾಗಿದೆ ಗೊತ್ತಾ?" ಅಂದೆ. ರೇವಣ್ಣನಿಗೂ ಖುಷಿಯಾಗಿತ್ತು.

ಕಾಲ ಹೇಗೆ ಜಾರಿ ಹೋಗುತ್ತದೆ! ಮತ್ತೆ ಮೂವತ್ತೂರು ವರ್ಷಕ್ಕೆ ಇಲ್ಲಿ ನಾವ್ಯಾರೂ ಇರುವುದಿಲ್ಲ. ಎಂದೋ ತೋರಿದ ಪ್ರೀತಿ ಮಾತ್ರ ಇಂಥ ಪಂಕ್ತಿಗಳಾಗಿ ಉಳಿಯುತ್ತವೆ. ನನ್ನ ಜೀವನ ಚರಿತ್ರೆ ಕೂಡ ಅಂಥವೇ. ಅದರ ಬರವಣಿಗೆಯತ್ತ ಗಮನ ಹರಿಸುವುದಕ್ಕೆ ಆಗಿಯೇ ಇಲ್ಲ!

–ಫೆಬ್ರವರಿ 15, 1995

ಜಾತಕ ಫಲ!

ಹಿಂದೆ ಸರ್ ಎಂ. ವಿಶ್ವೇಶ್ವರಯ್ಯನವರ ಮೆದುಳನ್ನು ಮರಣೋತ್ತರ ಪರೀಕ್ಷೆಗೊಳಪಡಿಸಬೇಕು ಎಂಬ ಮಾತು ಕೇಳಿಬರುತ್ತಿತ್ತು. ಅವರ ಮೇಧಾವಿತನಕ್ಕೆ ಕಾರಣ ಕಂಡುಹಿಡಿಯುವ ಕುತೂಹಲ ಇದರ ಹಿಂದಿತ್ತು. ಸನ್ಮಾನ್ಯ ಯಡ್ಯೂರಪ್ಪನವರು 'ಬ್ರಹ್ಮಾಂಡ ಭ್ರಷ್ಟಾಚಾರಿ' ಎಂದು ದೇಶದಾದ್ಯಂತ ಕುಖ್ಯಾತಿ ಪಡೆದಿದ್ದರೂ ತಮ್ಮ ಪದವಿಗೆ ಅಂಟಿ ಕುಳಿತಿರುವುದನ್ನು ನೋಡಿದರೆ ಅವರ ಚರ್ಮ ಹೇಗೆ ರೂಪಿಸಲ್ಪಟ್ಟಿದೆ ಎಂಬುದನ್ನು ತಿಳಿಯಲು ಮರಣೋತ್ತರ ಪರೀಕ್ಷೆಗೆ ಒಳಪಡಿಸಬೇಕು ಎಂದು ಓದುಗರೊಬ್ಬರು ಸಲಹೆ ನೀಡಿದ್ದಾರೆ. ಇದರ ಅವಶ್ಯಕತೆ ಇಲ್ಲ ಎಂಬುದು ನಮ್ಮ ನಮ್ರ ವಿನಂತಿ. ಏಕೆಂದರೆ...



ಸನ್ಮಾನ್ಯ ಯಡ್ಯೂರಪ್ಪನವರಿಗೆ ಕಷ್ಟಗಳ ಸರಮಾಲೆಯೇ ಅಡಿಗಡಿಗೆ ಎದುರಾಗುತ್ತಿವೆ. ಅವುಗಳನ್ನೆಲ್ಲ ಅಗ್ನಿಪರೀಕ್ಷೆ ಎಂದೇ ಅವರು ಪರಿಭಾವಿಸಿದ್ದರು. ಅವುಗಳಲ್ಲೆಲ್ಲ ಯಶಸ್ವಿಯಾಗಿದ್ದರು. ಒಂದರ ಹಿಂದೆ ಒಂದು ಇಂತಹ ಕಷ್ಟಗಳ ಪರಂಪರೆಯೇ ನಿರಂತರವಾಗಿ ಎದುರಾಗುತ್ತಿದ್ದುದು ಅವರ ಚಿಂತೆಗೆ ಕಾರಣವಾಯಿತು. ನಿರಂತರವಾಗಿ ಅಗ್ನಿಪರೀಕ್ಷೆ, ಜಯವನ್ನೇ ನಂಬಿರುವ ಬದಲಿಗೆ ಇದಕ್ಕೆ ಮೂಲಕಾರಣ ಹುಡುಕಲು ಬಯಸಿದರು. ಅವರ ಆಸ್ಥಾನ ಜ್ಯೋತಿಷಿಗಳೊಡನೆ ಸಮಾಲೋಚಿಸಿದರು. ಆ ವಿದ್ವಾಂಸರು ಸುದೀರ್ಘವಾದ ಚಿಂತನೆ ಹಾಗೂ ಗ್ರಹಗತಿಗಳ ಸಂಚಾರವನ್ನು ಅಭ್ಯಸಿಸಿದ ಬಳಿಕ 'ಇದು ನಿಮ್ಮ ಹಣೆಬರಹ' ಎಂದಿರಬಹುದು. ಇದನ್ನು ಸನ್ಮಾನ್ಯರು ನಂಬಿರಬೇಕು. ಆದಕ್ಕೆ 'ನನ್ನ ಜಾತಕದಲ್ಲಿಯೇ ಇಂತಹ ಸಂಕಷ್ಟಗಳನ್ನು ಅನುಭವಿಸಬೇಕು ಎಂದಿದೆ' ಎಂದು ಇತ್ತೀಚೆಗೆ ನವದೆಹಲಿಯಲ್ಲಿ ಹೇಳಿದ್ದಾರೆ!

ಜಾತಕದಲ್ಲಿ ಉಲ್ಲೇಖಿಸಿರುವುದು ಸತ್ಯ ಎಂದು ನಾವೂ ನಂಬಿದ್ದೇವೆ.

ದೈನಿಕ ಧಾರಾವಾಹಿಯಂತೆ ದಿನಕ್ಕೊಂದು ಭ್ರಷ್ಟಾಚಾರ ಆರೋಪ ಸಾಕ್ಷ್ಯಾಧಾರಗಳ ಸಹಿತ ಬಹಿರಂಗಗೊಳ್ಳುತ್ತಿವೆ. ಇಂತಹ ಗುರುತರವಾದ ಆರೋಪಗಳು ಅವರ ಮೇಲಿದ್ದರೂ ಮುಖ್ಯಮಂತ್ರಿ ಪದವಿಗೆ ಅಂಟಿ ಕುಳಿತಿದ್ದಾರೆ. ಭಂಡ-ಮೊಂಡ ಮುಖ್ಯಮಂತ್ರಿ ಎಂದೆಂದೂ ಕಂಡಿರಲಿಲ್ಲ ಎಂದೆಲ್ಲ ದೂರುತ್ತಿದ್ದಾರೆ. ಆರೋಪಗಳು ಸಾಬೀತಾದರೂ ಅವರೇಕೆ ಮುಖ್ಯಮಂತ್ರಿ ಪದವಿ ತ್ಯಜಿಸಿಲ್ಲ ಎಂದರೆ ಅವರ ಜಾತಕಫಲವೇ ಹಾಗೆ ಹೇಳುತ್ತೇ!

ಜಾತಕದಲ್ಲಿಯೇ ಇದನ್ನೆಲ್ಲ ಸ್ಪಷ್ಟವಾಗಿ ಸೂಚಿಸಿರುವುದರಿಂದ ಮರಣೋತ್ತರ ಪರೀಕ್ಷೆ ಅವಶ್ಯಕತೆ ಇಲ್ಲ ಅಲ್ಲವಾ...

ರಾಜಕಾರಣಿ ಮಾತು

ಪ್ರಕರಣ -1

ವಿಧಾನಸಭೆ ಅಧಿವೇಶನ.

ಶೋಭಾ ಕರಂದ್ಲಾಜೆ ಭಾಷಣ.

ಸದಾ ನಗುಮುಖದ ಮಂತ್ರಿಣಿ ಮಾತು ಅಂದರೆ ಸಾಮಾನ್ಯವಾ... ಕಿವಿಗೆ ಇಂಪು, ಕಣ್ಣಿಗೆ ತಂಪು ನೀಡ್ತಿತ್ತು. ಅವರು ಹೇಳುತ್ತಿದ್ದರು-'ಪರೀಕ್ಷೆ ಸಮಯದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗದಿರಲಿ ಎಂದು ಸಂಜೆ ಆರು ಗಂಟೆಯಿಂದ ಬೆಳಗಿನ ಆರು ಗಂಟೆಯವರೆಗೆ ನಿರಂತರ ವಿದ್ಯುತ್ ಸರಬರಾಜು ಮಾಡಲಾಗುತ್ತದೆ!

ಎಷ್ಟೊಂದು ಕಾಳಜಿ ಮಕ್ಕಳ ಮೇಲೆ ತಾಯಿಗೆ!

ಆದರೆ....

ಹಾಗೆ ಆಗಲೇ ಇಲ್ಲ!

ಪ್ರಕರಣ -2

'ಮಾಟ' ಕಾಟದಿಂದ ಬಲೇ ದಿಗಿಲುಗೊಂಡಿದ್ದರು ಯಡ್ಯೂರಪ್ಪನವರು. 'ಸಿದ್ದರಾಮಯ್ಯನವರೇ ಈ ಮಾಟಪಿತೃ' ಎಂಬುದನ್ನು ಬಹಿರಂಗಗೊಳಿಸಿದ್ದರು. ಇದನ್ನು ಕೇಳಿ ಕೆರಳಿದ ಅಯ್ಯನವರು 'ಯಡ್ಯೂರಪ್ಪನ ಮೇಲೆ ಮಾನನಷ್ಟ ಮೊಕದ್ದಮೆ ಹೂಡ್ತೀನಿ' ಅಂತ ಗುಡುಗಿದ್ದರು.

ಯಡ್ಡಿ-ಸಿದ್ದು ಕೋರ್ಟಲಿ ಎದುರಾ ಬದುರಾ ನಿಂತ್ರೆ ನೋಡೋಕೆ ಸುಂದಾಗಿರ್ತದೆ ಅಂತ, ಅಂತಹ ಸಮಯ ಎದುರು ನೋಡುತ್ತಿತ್ತು ರಾಜ್ಯದ ಜನತೆ. ಆದರೆ....

ಎಚ್.ಎಲ್. ಕೇಶವಮೂರ್ತಿ



ಅಣಕ

ಸಿದ್ದರಾಮಯ್ಯ ಗುಡುಗು ಗುಡುಗಾಗೇ ಉಳಿಯಿತು. ಮೊಕದ್ದಮೆ ಹೂಡಲೇ ಇಲ್ಲ!

ವಿಧಾನಸಭೆ ಅಧಿವೇಶನ ಬಂತು. 'ಮಾಟ' ಪ್ರಸ್ತಾಪ ಆಯಿತು. 'ನಾನೇ ಮಾಡಿಸಿದ್ದು ಅನ್ನೋ ಆರೋಪ ಮಾಡಿದ್ರಿ ನೀವು' ಅಂದ್ರು ಸಿದ್ದು. 'ನಾನು ಹಂಗೆ ಹೇಳಲೇ ಇಲ್ಲ' ಅಂದ್ರು ಯಡ್ಡಿ. 'ಮಾಧ್ಯಮಗಳಲ್ಲಿ ಬಂದದೆ' ಅಂದ್ರು ಸಿದ್ದು. 'ನಮಗೂ ನಿಮಗೂ ತಂದಿಡೋಕೆ ಯಾರೋ ಬರ್ತವ್ರೆ' ಅಂದ್ರು ಯಡ್ಡಿ!

'ತಂದಿಡೋರು ಯಾರು?' ಅನ್ನುವುದು ಯಡ್ಡಿಗೂ ಗೊತ್ತು; ಸಿದ್ದುಗೂ ಗೊತ್ತು!

ಆದರೆ ಅದಲ್ಲ ವಿಷಯ. ಸಿದ್ದರಾಮಯ್ಯನವರಿಗೆ ಮಾನನಷ್ಟ ಮೊಕದ್ದಮೆ ವಿಷಯ ಮರೆತೇ ಹೋಗಿತ್ತು!

ಪ್ರಕರಣ-3

'ಅಪ್ಪ ಮಕ್ಕಳದ್ದೆಲ್ಲ ಬಿಚ್ಚಿಡ್ತೀನಿ' ಗುಡುಗಿದರು ಯಡ್ಡಿ.

ಎಲ್ಲಿ ಬಿಚ್ತಾರಂತೆ ಅಂದ್ರೆ ವಿಧಾನಸಭೇಲಿ.

ವಿಧಾನಸಭೆ ಅಧಿವೇಶನ ಬಂತು. ಹೋಯಿತು.

ಲಾಡಿ ಬಲವಾಗಿ ಗಂಟಾಕಿಕೊಂಡಿತ್ತೋ ಏನು ಕತೆಯೋ ಏನನ್ನೂ ಬಿಚ್ಚಿಡಲೇ ಇಲ್ಲ!

ಮಗು ತಪ್ಪು ಮಾಡಿದಾಗ ತಾಯಿ 'ಒದ್ದು ಸಾಯಿಸಿಬಿಡ್ತೀನಿ' ಅಂತಾಳೆ. ಆದ್ರೆ ಆಮೇಲೆ ಮುದ್ದಿಸಿ ತಿನ್ನೋಕೆ ತಿಂಡಿ ಕೊಡ್ತಾಳೆ, ಹಂಗೇನಾ ಇವರ ನಡವಳಿಕೇನೂ ಅಂತಾ....

ಉದ್ದ ಹೋದವ ಅಡ್ಡಬಂದ!

ಬಡವರಿಗೂ-ಯಡ್ಯೂರಪ್ಪನವರಿಗೂ ಕಳ್ಳುಬಳ್ಳಿ ಸಂಬಂಧ ಇದ್ದಂಗೆ. ಅವರನ್ನು ನೋಡಿದ ತಕ್ಷಣ ಅದೇನಾಗುತ್ತೋ ಏನೋ ಗೋಳೋ ಅಂತ ಅಳ್ತಾರೆ. ಅವರಿಗೆ ಯಾವ ರೀತಿಯಲ್ಲಾದರೂ ಸಹಾಯ ಮಾಡಬೇಕು ಅನ್ನೋ ಯೋಚಿಸುತ್ತಾರೆ ಅಂತ ಕಾಣುತ್ತೆ, ಅವರ ಮಂತ್ರಿ ಮಂಡ ಸದಸ್ಯರೂ ಅದೇ ಜಾಯಮಾನದವರಿರಬೇಕು. ರಾಯಚೂ ಸರ್ಕಾರಿ ಆಸ್ಪತ್ರೆಯ ಅದ್ವಾನ ನೋಡಿ, ಬಡವರ ಗೋ ನೊಂದು ವೈದ್ಯಕೀಯ ಶಿಕ್ಷಣ ಸಚಿವರು ಕಣ್ಣಲ್ಲಿ ನೀ ಹಾಕಿದರು. ರೋಗಿಗಳಿಗೆ ಬೇಕಿರುವುದು. ಮಂತ್ರಿಯ ಕಣ್ಣೀ ಅಲ್ಲ, ಸುವ್ಯವಸ್ಥೆಯ ಆಸ್ಪತ್ರೆ ತಜ್ಞ ಮಾನವೀಯ ವೈ ಸೇವೆ ಅನ್ನುವವರೂ ಇರಬಹುದು... ಇರಲಿ. ಸಣ ಯಡ್ಯೂರಪ್ಪನವರಿಗೂ ಅದು ತಿಳಿದುಬಂದಿದೆ. ಸಕಾ ಎಷ್ಟು ಪ್ರಯತ್ನಿಸಿದರೂ ಬಡವರಿಗೆ ಗುಣಮಟ್ಟದ ಸೆ ನೀಡಲಾಗುತ್ತಿಲ್ಲವಲ್ಲ ಎಂದು ಮರುಗಿದ್ದಾರೆ. ಏನಾದರ ಮಾಡಿ ಉತ್ತಮ ಸೇವೆ ಸಲ್ಲಿಸಲೇಬೇಕು ಅಂತ ಯೋಚಿಸುತ್ತಿದ್ದಾರಂತೆ. ಒಂದು ಚಿಂತನೆ ಅಂದರೆ ಸರ್ಕಾ ಆಸ್ಪತ್ರೆಗಳನ್ನು ಮಠಗಳಿಗೆ ವಹಿಸಿಕೊಡುವುದಂತೆ!

ಅದ್ಭುತವಾದ ಚಿಂತನೆ!

ಸರ್ಕಾರಿ ಆಸ್ಪತ್ರೆಗಳಿಗೆ ಉದ್ದುದ್ದ ಹೋದವನು ಅಡ್ಡ ಹಿಂತಿರುಗುತ್ತಾನಂತೆ! ಖಾಸಗಿ ಆಸ್ಪತ್ರೆಗಳಲ್ಲಿ ಇ ಪುನರಾವರ್ತನೆ, ಆಗುವುದು ಎಂಬುದು ಮಾತ್ರ ಅ ಮನೆಯವರೂ ತಮ್ಮೆಲ್ಲ ಚರ-ಸ್ಥಿರ ಆಸ್ತಿಗಳನ್ನೂ ಕಳ್ಕೊಂ ಅವರ ದಾರೀನ ಹಿಡೀತಾರೆ!

ಜನಸಂಖ್ಯೆ ನಿಯಂತ್ರಣಕ್ಕೆ ಇದಕ್ಕಿಂತ ಉತ್ತಮ ವಿಧಾ ಇರಲಾರದು!

ಇದೇ ಚಿಂತನೆ ಮುಂದುವರೆದರೆ...

ಗುಣಮಟ್ಟದ ವಿದ್ಯುತ್ ಸರಬರಾಜು ಮಾಡ ಆಗುತ್ತಿಲ್ಲ,

ಖಾಸಗಿಯವರಿಗೆ ವಹಿಸಿ!

ಮೌಲಿಕ ಶಿಕ್ಷಣ ನೀಡಲು ಸರ್ಕಾರ ಸೋತಿದೆ,

ಗುರುಮಠಗಳಿಗೆ ವಹಿಸಿ!

ಜನರಿಗೆ ರಕ್ಷಣೆ ನೀಡಲು ಸಾಧ್ಯವಾಗುತ್ತಿಲ್ಲ

ಖಾಸಗಿ ಏಜೆನ್ಸಿಗೆ ವಹಿಸಿ!

....


....

ದಕ್ಷ ಸರ್ಕಾರ ನೀಡಲು ಸಾಧ್ಯವಾಗುತ್ತಿಲ್ಲ

ದಕ್ಷ ಅಧಿಕಾರಿಗಳಿಗೆ..............

ಕರ್ನಾಟಕದಿಂದಲೇ ಬಿಜೆಪಿ ಹಠಾವ್ಹೋ!

ಮಾರ್ಚ್ 30, 2011 'ಗೌರಿ ಲಂಕೇಶ್' ಪತ್ರಿಕೆಯಲ್ಲಿ ಪ್ರಕಟವಾದ ವರದಿ 'ಈಶ್ವರಪ್ಪ & ಕಂ ಕಿರಿಕ್'' ವಾಸ್ತವತೆಗೆ ಹಿಡಿದ ಕೈಗನ್ನಡಿಯಾಗಿದೆ. ರಾಜ್ಯದಲ್ಲಿ ಪ್ರಸ್ತುತ ಬಿಜೆಪಿಯಲ್ಲಿ ಕೆ.ಎಸ್. ಈಶ್ವರಪ್ಪ & ಕಂಪನಿ "ಯಡಿಯೂರಪ್ಪ ಹಠಾವ್ಹೋ ಬಿಜೆಪಿ ಬಚಾವ್ಹೋ" ಎಂಬ ನಾಮಾಂಕಿತದಲ್ಲಿ ಬಂಡಾಯದ ಬಾವುಟ ಹಾರಿಸಿರುವುದು ಎಷ್ಟು ನಿಜವೋ ಅಷ್ಟೇ ನಿಜ ದೆಹಲಿಯಲ್ಲಿರುವ ಚೆಡ್ಡಿಗಳ ಹೈಕಮಾಂಡ್ ಎಂಬ ಬ್ರಾಹ್ಮಣಕೂಟಕ್ಕೆ ಜಗ್ಗದ ರಾಜ್ಯದ ಶೂದ್ರ ಯಡಿಯೂರಪ್ಪನನ್ನು ಉಪಾಯದಿಂದ ಮುಗಿಸಬೇಕೆಂಬ ಆಶೆ. ಈಗ ಅದು ಮುಖ್ಯಮಂತ್ರಿ ಪದವಿ ಆಕಾಂಕ್ಷಿತ ರಾಜ್ಯದ ಬ್ರಾಹ್ಮಣ ಸಂಸದನ ಕೈವಾಡದಿಂದ ಕಾರ್ಯರೂಪಕ್ಕೆ ಬರುತ್ತಿದೆ.



ಯಡಿಯೂರಪ್ಪರ ಸರ್ವಾಧಿಕಾರಿ ಧೋರಣೆ, ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವಲ್ಲಿ ಎಸಗುತ್ತಿರುವ ಎಡವಟ್ಟುಗಳು, ವರ್ತನೆಗಳು ಬಿಜೆಪಿಯಲ್ಲಿಯೇ ಭಿನ್ನರು ಹೆಚ್ಚಾಗಲು ಕಾರಣವಾಗುತ್ತಿದೆ. ಬಿಜೆಪಿ ಭಿನ್ನಮತೀಯರು ಯಡಿಯೂರಪ್ಪನನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸುತ್ತೇನೆ ಎಂಬ ಭ್ರಮೆಯಲ್ಲಿರಬಹುದು. ಆದರೆ ಯಾವುದೇ ಕಾರಣಕ್ಕೂ, ಜಗಮೊಂಡ ಯಡಿಯೂರಪ್ಪ ಮುಖ್ಯಮಂತ್ರಿ ಪದವಿಯಿಂದ ಖಂಡಿತ ಇಳಿಯುವುದಿಲ್ಲ, ಆದರೂ ದೆಹಲಿಯ ಮತ್ತು ರಾಜ್ಯದ ಬಿಜೆಪಿಯ ಕುತಂತ್ರ ಬ್ರಾಹ್ಮಣರು (ಈ ಮಾತು ಕುತಂತ್ರ ಬ್ರಾಹ್ಮಣರಿಗೆ ಮಾತ್ರ ಅನ್ವಯಿಸುತ್ತದೆ) ಶೂದ್ರರನ್ನು ಬುಟ್ಟಿಗೆ ಹಾಕಿಕೊಂಡು ಯಡ್ಡಿಯನ್ನು ಇಳಿಸುತ್ತೇವೆಂದು ಕನಸು ಕಾಣುತ್ತಿದ್ದಾರೆ. ಅದು ನಿಜವಾಗಿಯೂ ತಿರುಕನ ಕನಸೇ. ಒಂದು ವೇಳೆ ಯಡಿಯೂರಪ್ಪ ಮುಖ್ಯಮಂತ್ರಿ ಪದವಿ ಬಿಡಲೇಬೇಕಾದ ಪರಿಸ್ಥಿತಿ ಬಂದರೆ ಪತ್ರಿಕೆ ತಿಳಿಸಿದ ಹಾಗೆ ಯಡಿಯೂರಪ್ಪ ವಿಧಾನಸಭೆ ವಿಸರ್ಜನೆ ಮಾಡುವುದಂತೂ ಖಂಡಿತ.

ಈಗಾಗಲೇ ಯಡಿಯೂರಪ್ಪನ ಬೆಂಬಲಕ್ಕಿರುವ ದಿಗ್ಗಜರೆಲ್ಲ ಹೊಸ ಪಕ್ಷವನ್ನು ಕಟ್ಟಲು ಎಲ್ಲ ರೀತಿಯ ತಯಾರಿ ಮಾಡಿಕೊಂಡಿರುವುದು ಗುಟ್ಟಾಗಿ ಉಳಿದಿಲ್ಲ. ಆಗಲಾದರೂ ರಾಜ್ಯದಲ್ಲಿ ನಿರ್ಮಾಣವಾಗುವ 'ಬ್ರಾಹ್ಮಣರ ಜನತೆ ಪಕ್ಷ'ದಿಂದ ರಾಜ್ಯಕ್ಕೆ ನೆಮ್ಮದಿ ಲಭಿಸಬಹುದೇನೋ?

-ಪಂಚನಹಳ್ಳಿ ಜಿ. ದಯಾನಂದ ಸಾಗರ್, ಬೆಂಗಳೂರು




ಕಲ್ಕುಳಿ ಹೆಗ್ಡೆಯವರ ಮಂಗನ ಬೇಟೆ (7)ಯಲ್ಲಿ ಜೀತದಾಳು ಮಕ್ಕಳ ಹೆಸರಿಡುವ ಸಂಗತಿಯ ಬಗ್ಗೆ ಓದಿ ಇದನ್ನ ಬರೆಯುತ್ತಿದ್ದೇನೆ. ಸಾಧಾರಣವಾಗಿ ಪೇಟೆಯ ವಾತಾವರಣದಲ್ಲಿ ಹುಟ್ಟಿ ಬೆಳೆದ ನನಗೆ ಇಂತಹ ಸಂಗತಿಯ ಅರಿವಿತ್ತಾದರೂ ಇದರ ವಿಶ್ವರೂಪದರ್ಶನವಾದದ್ದು ಸುಮಾರು 93-94 ರಲ್ಲಿ ವೋಟರ್ಸ್ ಐಡೆಂಟಿಟಿ ಕಾರ್ಡ್ ಸಂಬಂಧ ಮಂಗಳೂರಲ್ಲಿ ಕೆಲಸ ಮಾಡುತ್ತಿದ್ದಾಗ ಜಿಲ್ಲೆಯ ಮತದಾರರ ಹೆಸರುಗಳನ್ನು ನೋಡುವಂತ ಅವಕಾಶ ಸಿಕ್ಕಿತ್ತು, ಕಂಪ್ಯೂಟರ್ ಸಂಬಂಧಿ ಕೆಲಸವಾದ್ದರಿಂದ ಬ್ರಾಹ್ಮಣ ಅಥವಾ ಮೇಲ್ಜಾತಿಯವರೇ ಹೆಚ್ಚಾಗಿದ್ದ ಅಲ್ಲಿ ಬೊಗ್ರ (ಗಂಡು ನಾಯಿ) ಹರಿಜನ, ಬೊಗ್ಗಿ (ಹೆಣ್ಣು ನಾಯಿ) ಹರಿಜನ, ನಾಯಿ ಹರಿಜನ, ಕಕ್ಕೆ, ಪಂಜಿ, ಮರ್ಲ ಹರಿಜನರಂತಹ ಸುನಾಮಗಳು ಕಾಣಸಿಕೊಂಡಾಗ "ಇವುಗಳಿಗೆ ಇಡಲು ಬೇರೆ ಹೆಸರೇ ಸಿಕ್ಲಿಲ್ವ?" ಅಂತ ಅದರ ಹಿನ್ನೆಲೆ ತಿಳಿಯದೇ ಎಲ್ಲಾ ಸೇರಿಕೊಂಡು ನಗುತ್ತಿದ್ದರು. ಆದರೆ ಈ ನಗುವವರಿಗೇನು ಗೊತ್ತು? ಇವೆಲ್ಲ ಸ್ವಇಚ್ಛೆಯಿಂದ ಇಟ್ಟುಕೊಂಡ ಹೆಸರುಗಳಾಗಿರದೇ ಮೇಲರಿಮೆ (superiority complex) ವಂತರು ಆಳು ಮಕ್ಕಳಿಗೆ ದಯಪಾಲಿಸಿದಂತವುಗಳೆಂದು.

ಹಳೆ ತಲೆಮಾರಿನ ಕೆಳವರ್ಗದ ಮಂದಿಯಲ್ಲಿ ಇಂತಹ ಹೆಸರು ಸಾಮಾನ್ಯ ಇದ್ದರೂ ಸರ್ಕಾರೀ ವ್ಯವಹಾರಕ್ಕೆ ಸಹ್ಯ ಎನಿಸುವ ಬೇರೆಯೇ ಹೆಸರಿರುವುದೂ ಇದೆ. ಆಳುಮಕ್ಕಳು 'ಅಹಂಕಾರ' ಬೆಳೆಸಿಕೊಂಡು ನಮ್ಮ ಮೇಲೇ ಸವಾರಿ ಮಾಡುವಂತಾಗದಿರಲಿ ಎಂದು ಅವರ ವ್ಯಕ್ತಿತ್ವವನ್ನ ಚಿವುಟುವಂತಹ ಪ್ರಕ್ರಿಯೆ ಇದು.

-ರವಿ ಪುತ್ತೂರ, ದಕ್ಷಿಣ ಕನ್ನಡ

'ಒಂದು ಸಮಾರಂಭ ಮತ್ತು ಒಂದು ತಪ್ಪಿದ ಅನಾಹುತ' ಎಂಬ ತಲೆಬರಹದ ಕೆಳಗೆ ನಿಮ್ಮ ಮತ್ತು ಸಂತೋಷ್ ಹೆಗ್ಡೆಯವರ ಚಿತ್ರವನ್ನು ನೋಡಿ ಗಡಿಬಿಡಿ ಆಯಿತು. ಏನಪ್ಪ ಅದು ಅನಾಹುತ?! ಹೆಗ್ಡೆಯವರು ಯಡ್ಯೂರಪ್ಪನವರ ಕೃಷಿ ಮುಂಗಡ ಪತ್ರವನ್ನು ಯದ್ವಾತದ್ವ ಹೊಗಳಿದ್ದಾರೋ ಏನೋ ಅಂದುಕೊಂಡೆ.



'ಕಂಡಹಾಗೆ' ಅಂಕಣ ಪೂರ್ತಿ ಓದಿದ ಮೇಲೆ ತಿಳಿಯಿತು ನಿಮ್ಮ ಹಾಗೂ ಇಶಾಳ ಬಸ್ಕತ್ ವಿಚಾರ. ಈ ಬಸ್ಕತ್ ವಿಚಾರ ಓದಿದ ನಂತರ ನನಗೂ ಮೈ ಜುಮ್ ಅಂತು. ಏಕೆಂದರೆ ನಮಗೂ ಕೂಡ ಬೇರೂರಿನ ರೈಲ್ವೆ ನಿಲ್ದಾಣದಲ್ಲಿ ಇಂತಹದ್ದೇ ಅನುಭವ ಆಗಿತ್ತು. ಇಲ್ಲಿ ನೀವು ಮತ್ತು ನಿಮ್ಮ ಪುಟ್ಟ ಇಶಾ ಅಪಾಯಕ್ಕೆ ಸಿಲುಕಿದ್ರಿ. ಅಲ್ಲಿ ನಾನು ನಮ್ಮ ಅಕ್ಕ, ಭಾವ ಮತ್ತು ಅವರ ಮಕ್ಕಳು ರೈಲು ಹತ್ತೋದಕ್ಕೆ ಸಾಹಸ ಮಾಡಿದ್ದನ್ನು ನೆನೆಸಿಕೊಂಡ್ರೆ ಈಗಲೂ ನನ್ನ ಮೈ ಕಂಪಿಸುತ್ತೆ. ನೀವು ತಕ್ಷಣವೇ ರೈಲ್ವೆ ಸಚಿವಾಲಯಕ್ಕೆ ಟ್ರೈನುಗಳು ರೈಲ್ವೆ ನಿಲ್ದಾಣದಲ್ಲಿ ಕಡಿಮೆ ವೇಗದಲ್ಲಿ ಚಲಿಸಲಿ ಎಂಬ ಪತ್ರವನ್ನು ಬರೆಯಿರಿ. ಹಾಗೆ ನಿಮಗೂ ಹಾಗೂ ಪುಟ್ಟ ಇಶಾಳಿಗೂ ಆಲ್ ದ ಬೆಸ್ಟ್.

-ಬೂಕೆಗೌಡ, ಕುರುಬರಹಳ್ಳಿ

…ೀಶ್ ಬೇಡಿಕೆ ಈಗ ದುಪ್ಪಟ್ಟಾಗಿದೆ.

…ಡೆ 'ಕೆಂಪೇಗೌಡ' ಚಿತ್ರದ ಸಕ್ಸಸ್‌ನಿಂದಾಗಿ …ೆ ಚಿತ್ರರಂಗದಲ್ಲಿ ಸಿಕ್ಕಾಪಟ್ಟೆ ಆಫರ್‌ಗಳು ಬಂದು …ತದಲ್ಲಿ ಬಿದ್ದಿವೆ. ಮತ್ತೊಂದೆಡೆ ಇನ್ನೇನು …ರುವ ಬೈ ಎಲೆಕ್ಷನ್‌ನಲ್ಲಿ ಸುದೀಪ್‌ಗೆ ಟಿಕೆಟ್ …ನಾ ಮುಂದು ತಾಮುಂದು ಎಂದು ಮೂರ್ನಾಲ್ಕು …ು ಪಕ್ಷಗಳು ಅವರ ಹಿಂದೆ ಬಿದ್ದಿವೆ.

…ಿ ಅಧಿಕಾರ ಉಳಿಸಿಕೊಳ್ಳಲು ಆಪರೇಷನ್ …ೈಯಿಟ್ಟು ದೊಡ್ಡ ಮೊತ್ತಕ್ಕೆ ಜಗಳೂರಿನ ಕಾಂಗ್ರೆಸ್ …ಮಚಂದ್ರನನ್ನು ಖರೀದಿಸಿತ್ತು. ಹೀಗಾಗಿ ಈಗಲ್ಲಿ …ಾವಣೆ ಎದುರಾಗಿದೆ. ಈ ಚಿಡ್ಡಿಗಳ ಪಾಲಾಗಿರುವ …ದ್ರನ ವಿರುದ್ಧ ಜಗಳೂರಿನಲ್ಲಿ ಸುದೀಪ್‌ನನ್ನು …ಲುವು ಸಾಧಿಸಬೇಕೆಂಬ ಅಪೇಕ್ಷೆ ವಿರೋಧಿ …ೆ.


…ೂರು ಕ್ಷೇತ್ರವನ್ನು ಕಾಂಗ್ರೆಸ್‌ನಲ್ಲೇ ಉಳಿಸಿಕೊಂಡರೆ …ರ್ಕಾರವನ್ನು ಉರುಳಿಸಲು ಹಾಗೂ ಉಳಿದ …ಅಧಿಕಾರ ಹಿಡಿಯಲು ಅವಕಾಶ ಸಿಗಬಹುದೆಂದು …ರು ಗೆಲ್ಲುವ ಕುದುರೆ ಸುದೀಪ್‌ನನ್ನು ತಮ್ಮ …ೆ ಕೆಡವಿಕೊಳ್ಳಲು ಮುಂದಾಗಿದ್ದಾರೆ. ಹೇಗಾದರೂ …ಕ್ಷನ ಮೂಲಕ ಚಿಡ್ಡಿಗಳಿಗೆ ಕಿಚ್ಚು ಹತ್ತಿಸಬೇಕೆಂಬುದು …ರ ಗೇಮ್ ಪ್ಲಾನ್!

…ಾಬಾದ್‌ನಲ್ಲೊಂದು ಮೀಟಿಂಗು

…ಚ್. ಪಟೇಲ್ ಕಾಲದಲ್ಲಿ ಸುದೀಪನ ಅಪ್ಪ …್ ಸಂಜೀವ್ ಜನತಾ ದಳದಲ್ಲಿ ಸಕ್ರಿಯವಾಗಿ …ಕೊಂಡಿದ್ದವರು. ಈಗ ಎಂಎಲ್‌ಸಿ ಆಗಿರುವ …ರ ಚಿಕ್ಕಪ್ಪ ಸರೋವರ್ ಶ್ರೀನಿವಾಸ್ ಕೂಡಾ …ಬೆಂಬಲಿಗರೇ ಆಗಿದ್ದಾರೆ.

…ಸುದೀಪ್ ರಾಜಕಾರಣಕ್ಕೆ ಕಾಲಿಡುವ ಮಾತು …ಕೇಳಿಬರುತ್ತಿರುವುದರಿಂದ ಮಾಜಿ ಮುಖ್ಯಮಂತ್ರಿ …ಸ್ವಾಮಿ ಕೂಡಾ ಕಿಚ್ಚನ ಮೇಲೆ ಜಾತ್ಯತೀತ …ದ ಹೊರೆ ಹೊರಿಸಲು ಸನ್ನದ್ಧರಾಗಿದ್ದಾರೆ. …ಸಿನಿಮಾದವರ ಪವರು ಎಂಥದ್ದು ಎಂಬುದನ್ನು …ಕುಮಾರಣ್ಣ, ಸುದೀಪ್ ಜೆಡಿಎಸ್‌ಗೆ ಬಂದರೆ …ಮಾ ವರ್ಚಸ್ಸು ಪಕ್ಷಕ್ಕೆ ಹೆಚ್ಚು ಉಪಯುಕ್ತವಾಗುತ್ತದೆ …ಂಬಿಕೆಯಲ್ಲಿದ್ದಾರೆ.

…ಹಿಂದೆ ನಟ ಶಶಿಕುಮಾರ್ ಕೂಡಾ …ದಿಂದ ಜನತಾದಳದ …ನೇ ಲೋಕಸಭೆಗೆ …ಾಗಿದ್ದರು. ಆನಂತರ ತಮ್ಮ …ೆ ಅಪರಾಧಗಳಿಂದ …ರ್ ರಾಜಕೀಯವಾಗಿ …ದರು. ಆದರೆ ಸುದೀಪ್‌ಗೆ …ಮಿಸಂ ಅನ್ನು ಮೆಂಟೇನ್ …ಅಭ್ಯಾಸವಿರುವುದರಿಂದ …ರ್‌ರಷ್ಟು ಹೆಸರು …ಳ್ಳುವುದಿಲ್ಲ ಎನ್ನುವುದು …ರ ನಂಬಿಕೆ.



ಜೂ.ಎನ್‌ಟಿಆರ್


…ೀಪ್‌ರನ್ನು ತಮ್ಮ ಬಲೆಗೆ ಕೆಡವಿಕೊಳ್ಳಲು …ಸ್ವಾಮಿ ಮಾಸ್ಟರ್ ಪ್ಲಾನ್ ಮಾಡಿದ್ದಾರೆ. ಹತ್ತನ್ನೆರಡು …ಮುಂಚೆ ಸುದೀಪ್ ಹೈದರಾಬಾದಿನಲ್ಲಿದ್ದಾಗ ವೆಸ್ಟ್ …ರಿ ಪ್ರಾಂತ್ಯದ ಶಾಸಕ ಕೊಡಾಲಿ ನಾಣಿ ಮತ್ತು …ೋಹನ್ ತರಹದ ಟಿಡಿಪಿ ಮುಖಂಡರು ಜ್ಯೂ. …ರ್ ಮನೆಗೇ ಕಿಚ್ಚನನ್ನು ಕರೆಸಿಕೊಂಡಿದ್ದಾರೆ. ಅಲ್ಲಿ …ಮುಖಂಡರು "ಜಗಳೂರು ಅಥವಾ ಚನ್ನಪಟ್ಟಣ …ಟಿಕೆಟು ಕೊಡ್ತೀವಿ, ಎಲೆಕ್ಷನ್‌ಗೆ ನಿಲ್ಲಿ" ಎಂದು …ದ್ದಾರೆ. ಅಷ್ಟೇ ಅಲ್ಲ "ಕಾಂಗ್ರೆಸ್ ಪಕ್ಷದ ಮುಖಂಡ …ಂದಾಣಿಕೆ ಇಲ್ಲ. ಅಲ್ಲಿ ಇರುವ ನಾಯಕರಿಗೇ …ಮನ್ನಣೆ ಸಿಗುತ್ತಿಲ್ಲ, ಈಗಾಗಲೇ ಚಿತ್ರರಂಗದಿಂದ …ರಾಜಕಾರಣದಲ್ಲಿ ನೆಲೆಗೊಂಡಿರುವ ಅಂಬರೀಶ್ …ಜನಪ್ರಿಯತೆ, ವರ್ಚಸ್ಸು, ಸಾಮರ್ಥ್ಯಗಳನ್ನು …ಳ್ಳುವಲ್ಲಿ ಕಾಂಗ್ರೆಸ್ ಪಕ್ಷ ವಿಫಲವಾಗಿದೆ. ಇನ್ನು …ವಾದಿ ಬಿಜೆಪಿಯನ್ನು ನಂಬಿದವರಿಗಂತೂ ರಾಜಕೀಯ ಭವಿಷ್ಯವಿಲ್ಲ" ಎಂದೆಲ್ಲ ಆಂಧ್ರ ನಾಯಕರು ಕಿಚ್ಚನ ಕಿವಿ ಕಚ್ಚಿದ್ದಾರೆ.

ಆದರೆ ಅದೇ ಸಮಯದಲ್ಲಿ ಬೆಂಗಳೂರಿನಲ್ಲಿ ಸುದೀಪ್ ತಂದೆ ಸರೋವರ್ ಸಂಜೀವ್ ಕಾಂಗ್ರೆಸ್‌ನ ಶ್ಯಾಮನೂರು ಶಿವಶಂಕರಪ್ಪನಿಂದ ಹಿಡಿದು ಕಾಂಗ್ರೆಸ್ ಇತರೆ ಲೀಡರು ಗಳೊಂದಿಗೆ ಕೂತು ತಮ್ಮ ಮಗನ ರಾಜಕೀಯದ ಆರಂಗೇಟ್ರಂ ಬಗ್ಗೆ ಮೀಟಿಂಗು ನಡೆಸಿದ್ದಾರೆ.

ಸುದೀಪ್ 'ಕೈ' ಹಿಡಿದರೆ ಕಾಂಗ್ರೆಸ್ ಪಕ್ಷಕ್ಕೆ ಸಾಕಷ್ಟು ಲಾಭವಾಗಲಿದೆ. ಅದು ಜಗಳೂರು ಕ್ಷೇತ್ರವೊಂದಕ್ಕೆ ಸೀಮಿತವಾಗದೆ ರಾಜ್ಯಾದ್ಯಂತ ಅನುಕೂಲ ಮಾಡಿಕೊಡಲಿದೆ ಎಂಬುದು ಕಾಂಗ್ರೆಸ್ಸಿಗರ ಲೆಕ್ಕಾಚಾರ. ಹೇಗಾದರೂ ಮಾಡಿ ಕಿಚ್ಚನನ್ನು ಕ್ಯಾಚ್ ಮಾಡಿದರೆ ಆತ ಕಮರ್ಷಿಯಲ್ ನಟನಾಗಿ ಸಾಕಷ್ಟು ಪಾಪ್ಯುಲಾರಿಟಿ ಪಡೆದಿರುವುದರಿಂದ ಅವರ ಅಭಿಮಾನಿಗಳು ಕೂಡಾ ಕಾಂಗ್ರೆಸ್ ಕಡೆ ವಾಲಬಹುದು ಎಂಬ ನಿರೀಕ್ಷೆ ಇದೆ.

ಇದೆಲ್ಲದಕ್ಕೂ ಮಿಗಿಲಾಗಿ ಜಾತಿಯ ಪ್ರಾಬಲ್ಯ ಸುದೀಪ್‌ಗೆ ಹೆಚ್ಚು ಬೇಡಿಕೆ ತಂದಿದೆ. ಜಗಳೂರಿನಲ್ಲಿರುವ ಒಂದೂವರೆ ಲಕ್ಷದಷ್ಟು ಮತಗಳಲ್ಲಿ ಸುಮಾರು ಅರವತ್ತು ಸಾವಿರ ಮತ ಲಿಂಗಾಯತರದ್ದಾದರೆ, ಇನ್ನುಳಿದುದರಲ್ಲಿ ನಾಯಕ, ಬೋವಿ, ಹರಿಜನರ ಮತಗಳು ಹಂಚಿಹೋಗಿವೆ. ಹೀಗಿರುವಾಗ ನಾಯಕ ಜನಾಂಗದ ಪ್ರತಿನಿಧಿಯಾಗಿ ಸುದೀಪ್‌ರನ್ನು ಚುನಾವಣಾ ಅಖಾಡಕ್ಕೆ ಇಳಿಸಿದರೆ ಬಿಜೆಪಿ ಏನೇ ಸರ್ಕಸ್ ಮಾಡಿದರೂ ಕೈಯನ್ನು ಬೀಟ್ ಮಾಡಲು ಸಾಧ್ಯವಾಗುವುದಿಲ್ಲ ಎನ್ನುವುದು ರಾಜಕೀಯ ನಾಯಕರ ಲೆಕ್ಕಾಚಾರ. ಅದು ವರ್ಕ್‌ಔಟ್ ಆಗುವ ತಂತ್ರ ಕೂಡ ಹೌದು.

● ಸುದೀಪ್‌ಗೆ ಮುಂದೊಂದು ದಿನ ರಾಜಕಾರಣದಲ್ಲಿ ನೆಲೆಗೊಳ್ಳುವ ಆಸೆಯಂತೂ ಇದ್ದೇ ಇದೆ. ಈ ನಿಟ್ಟಿನಲ್ಲೇ ತನ್ನ ಇತ್ತೀಚಿನ ಚಿತ್ರಗಳಲ್ಲಿ ಕೆಲ ಸಮುದಾಯಗಳನ್ನು ಹಿಡಿದಿಟ್ಟುಕೊಳ್ಳುವ ಪ್ರಯತ್ನವನ್ನು ಕಿಚ್ಚ ಮಾಡುತ್ತಲೇ ಬಂದಿದ್ದಾರೆ. ●




ಕಿಚ್ಚನ ಹೊಸ ಖದರ್!

ಈ ಮಧ್ಯೆ ಬಿಜೆಪಿ ಪಕ್ಷ ಕೂಡಾ ಕಿಚ್ಚನನ್ನು ಹಿಡಿದು ತನ್ನ ಬುಟ್ಟಿಗೆ ಹಾಕಿಕೊಳ್ಳುವ ಎಲ್ಲ ಪ್ರಯತ್ನವನ್ನೂ ಮಾಡುತ್ತಿದೆ. ಆಪರೇಷನ್ ಕಮಲದಲ್ಲಿ ಪರ್ಚೇಸು ಮಾಡಿದ ರಾಮಚಂದ್ರರನ್ನೇ ಜಗಳೂರಿನಲ್ಲಿ ಬಿಜೆಪಿ ಕ್ಯಾಂಡಿಡೇಟ್ ಮಾಡಲು ನಿರ್ಧರಿಸಿತ್ತು, ಆದರೆ ಅದು ಸಾಧ್ಯವಾಗಲಿಲ್ಲ.

ಅಪ್ಪನ ತಹತಹ

ರಾಜಕೀಯಕ್ಕೆ ಬರಬೇಕೆಂಬ ಒಲವು ಸುದೀಪ್‌ಗೆ ಅದೆಷ್ಟಿದೆಯೋ ಗೊತ್ತಿಲ್ಲ, ಆದರೆ ಸುದೀಪ್‌ಗಿಂತ ಅವರ ತಂದೆ ಸರೋವರ್ ಸಂಜೀವ್‌ಗೆ ಮಗನನ್ನು ಪಾಲಿಟಿಕ್ಸ್‌ನಲ್ಲೂ ಹೀರೋ ಮಾಡಿಸಬೇಕು ಎಂಬ ತಹತಹವಿದೆ. ಆದರೆ ಅದಕ್ಕೆ ಸೂಕ್ತ ಕಾಲ ಬಂದಿರಲಿಲ್ಲ. ಕಳೆದ ಹಲವಾರು ವರ್ಷಗಳಲ್ಲಿ ಯಾವುದೇ ಚುನಾವಣೆ ಎದುರಾದಾಗ 'ಈ ಬಾರಿ ಸುದೀಪ್ ರಾಜಕೀಯ ಸೇರುತ್ತಾರಂತೆ' ಎಂಬ ಮಾತು ಕೇಳಿಬರುತ್ತಿದ್ದು, ಆದರೆ ಈ ಬಾರಿ ಈ ಮಾತನ್ನು ಅಷ್ಟು ಸುಲಭಕ್ಕೆ ತಳ್ಳಿಹಾಕ ಲಾಗುವುದಿಲ್ಲ, ತೀರಾ ಸುದೀಪ್ ಸ್ಪರ್ಧಿಸು ವುದೇ ಇಲ್ಲ ಎಂದ ಸಂದರ್ಭದಲ್ಲಿ ಜಗಳೂರಿನಲ್ಲಿ ಅರಸೀಕೆರೆ ದೇವೇಂದ್ರಪ್ಪನನ್ನು ಆ ಜಾಗಕ್ಕೆ ರೆಡಿಮಾಡಿಟ್ಟಿದ್ದಾರೆ.



ಸಂಜೀವ್

ಕಳೆದ ಲೋಕಸಭಾ ಚುನಾವಣೆಯಲ್ಲಿ ಸುದೀಪ್ ಅಂಬರೀಶ್ ಪರ ಪ್ರಚಾರ ಮಾಡಿದ್ದರು. ಆಗ ಸುದೀಪ್ ಕಾಂಗ್ರೆಸ್ ಸೇರಿದ್ದಾರೆ ಎಂದೇ ಜನ ಮಾತಾಡಲಾರಂಭಿಸಿದ್ದರು. ಆದಕ್ಕೆ ಸರಿಯಾಗಿ ಅಂದು ಸುದೀಪ್‌ರನ್ನು ಚಿತ್ರದುರ್ಗ ಲೋಕಸಭಾ ಕ್ಷೇತ್ರದಿಂದ ನಿಲ್ಲಿಸಲು ಕಾಂಗ್ರೆಸ್ ತುದಿಗಾಲಲ್ಲಿ ನಿಂತಿತ್ತು, ಆದರೆ ಸ್ವತಃ ಸುದೀಪ್ ಆಗ ಚುನಾವಣೆಗೆ ನಿಲ್ಲಲು ಒಪ್ಪಿರಲಿಲ್ಲ. ಯಾಕೆಂದರೆ ಆಗ ಸುದೀಪ್ ಚಿತ್ರರಂಗದಲ್ಲಿ ಸಾಕಷ್ಟು ಬ್ಯುಸಿ ಆಗಿದ್ದರು. ಅವರ ನಿರ್ದೇಶನದ ಹಲವು ಚಿತ್ರಗಳು ಪ್ರೊಡಕ್ಷನ್ ಹಂತದಲ್ಲಿದ್ದವು. ಜೊತೆಗೆ ಹಿಂದಿ ಚಿತ್ರಗಳಲ್ಲೂ ಸುದೀಪ್ ಬ್ಯುಸಿಯಾಗಿದ್ದರು.

ಸದ್ಯ ಕನ್ನಡ ಚಿತ್ರರಂಗದಲ್ಲಿರುವ ಕೆಲವೇ ಕೆಲವು ಓಡುವ ಕುದುರೆಗಳಲ್ಲಿ ಸುದೀಪ್ ಅಗ್ರಸ್ಥಾನದಲ್ಲಿದ್ದಾರೆ. ಈಗ ಸುದೀಪ್‌ಗೆ ಕೈತುಂಬಾ ಚಿತ್ರಗಳಿವೆ. ಹಾಗಿದ್ದೂ ಅವರು ರಾಜಕಾರಣಕ್ಕೂ ಎಂಟ್ರಿ ಕೊಟ್ಟರೆ ಒಂದೇ ಸಮಯದಲ್ಲಿ ಎರಡೂ ದೋಣಿಗಳಲ್ಲಿ ಸಾಗುವುದು ಅಷ್ಟು ಸುಲಭದ ಮಾತಲ್ಲ.

ಆದರೆ ಸುದೀಪ್‌ಗೆ ಮುಂದೊಂದು ದಿನ ರಾಜಕಾರಣದಲ್ಲಿ ನೆಲೆಗೊಳ್ಳುವ ಆಸೆಯಂತೂ ಇದ್ದೇ ಇದೆ. ಈ ನಿಟ್ಟಿನಲ್ಲೇ ತನ್ನ ಇತ್ತೀಚಿನ ಚಿತ್ರಗಳಲ್ಲಿ ಕೆಲ ಸಮುದಾಯಗಳನ್ನು ಹಿಡಿದಿಟ್ಟುಕೊಳ್ಳುವ ಪ್ರಯತ್ನವನ್ನು ಕಿಚ್ಚ ಮಾಡುತ್ತಲೇ ಬಂದಿದ್ದಾರೆ. ತೆಲುಗಿನ 'ವಿಕ್ರಮಾರ್ಕುಡು'ವನ್ನು 'ವೀರಮದಕರಿ' ಯನ್ನಾಗಿಸಿದ ಸುದೀಪ್ ಉದ್ದೇಶ ನಾಯಕ ಜನಾಂಗವನ್ನು ತನ್ನತ್ತ ಸೆಳೆಯುವುದೇ ಆಗಿತ್ತು.

ಸುದೀಪನ ವೃತ್ತಿ ವೈರಿ ದರ್ಶನ್ 'ಮಂಡ್ಯದ ಮರಿ ಗಂಡು' ಎಂದು ಮೆರೆಯುತ್ತಿರುವಾಗಲೇ ಸುದೀಪ್ ಸೈಲೆಂಟಾಗಿ 'ಕೆಂಪೇಗೌಡ' ಎಂಬ ಚಿತ್ರದ ಮೂಲಕ ಒಕ್ಕಲಿಗ ಸಮುದಾಯದ ಅಭಿಮಾನಿಗಳನ್ನೂ ತನ್ನ ಸುಪರ್ದಿಗೆ ಎಳೆದುಕೊಳ್ಳುವ ಪ್ರಯತ್ನದಲ್ಲಿ ಗೆದ್ದಿದ್ದಾರೆ. ಇದು ಕೇವಲ ದರ್ಶನ್ ಅಭಿಮಾನಿಗಳನ್ನು ಹೈಜಾಕ್ ಮಾಡುವ ಉದ್ದೇಶ ಮಾತ್ರವಲ್ಲ, ರಾಜಕಾರಣಕ್ಕೆ ಬಂದರೂ ವರ್ಕ್‌ಔಟ್ ಮಾಡಿಕೊಳ್ಳಬಹುದು ಎಂಬ ದೂರಾಲೋಚನೆ ಸುದೀಪ್‌ನದ್ದು!



ಯಶಸ್ವೀ ನಟ

ಸುದೀಪ್ ತಲೆಕೆಟ್ಟ ಆಸಾಮಿ, ಗರ್ವಿ, ನೇರಾನೇರ ಮಾತಾಡಿ ವಿವಾದವನ್ನು ಮೈಮೇಲೆಳೆದುಕೊಳ್ಳುವ ಹುಂಬ ಎಂಬುದು ಎಷ್ಟು ನಿಜವೋ ಆತ ಶುದ್ಧ ಕಸುಬುದಾರ, ಹಿಡಿದ ಕೆಲಸಕ್ಕೆ ನಿಷ್ಠನಾಗಿ ದುಡಿಯುವ ಛಲಗಾರ ಎಂಬುದೂ ಅಷ್ಟೇ ನಿಜ. ಜೀರೋ ಲೆವೆಲ್‌ನಿಂದ ಬಂದು ಇವತ್ತು ಯಶಸ್ವಿ ನಟನಾಗಿರುವ ಸುದೀಪ್ ಇದಕ್ಕಾಗಿ ಗಿಮಿಕ್ಕುಗಳನ್ನು ಮಾಡಿದ ವ್ಯಕ್ತಿಯಲ್ಲ, ಬದಲಾಗಿ ಆತನ ಯಶಸ್ಸು ಮತ್ತು ಕೀರ್ತಿಗೆ ಆತನ ಶ್ರಮ ಮತ್ತು ಪ್ರತಿಭೆ ಕಾರಣ ಎಂಬುದು ಎಲ್ಲರೂ ಒಪ್ಪುವ ಸತ್ಯ. ಸಿನಿಮಾದ ಬಗ್ಗೆ ಒಂದು ವಿಜನ್ ಹೊಂದಿರುವ ಸುದೀಪ್ ರಾಜಕೀಯವನ್ನೂ ಅದೇ ದೃಷ್ಟಿಯಿಂದ ನೋಡುತ್ತಿರುವಂತೆ ಕಾಣುತ್ತಿದೆ. 'ಸಿನಿಮಾ ನಿರ್ಮಿಸುವುದು, ಎಲೆಕ್ಷನ್‌ಗೆ ನಿಂತು ದುಡ್ಡು ಇನ್‌ವೆಸ್ಟ್ ಮಾಡುವುದು ಎರಡೂ ಒಂದೇ. ಲಾಭದ ಗ್ಯಾರೆಂಟಿ ಇಲ್ಲ' ಎಂದು ಗಾಂಧಿನಗರದ ಲೆಕ್ಕಾಚಾರದಲ್ಲಿ ಮಾತಾಡುವ ಸುದೀಪ್ 'ಎಲೆಕ್ಷನ್‌ಗೆ ನಿಲ್ಲೋದಿಲ್ಲ' ಎಂದು ಮಾತ್ರ ಕಡಕ್ಕಾಗಿ ಹೇಳುತ್ತಿಲ್ಲ.

ಅತಿ ಹೆಚ್ಚು ಅಭಿಮಾನಿ ಸಂಘಗಳನ್ನು ಹೊಂದಿರುವ, ಕ್ರಿಯಾಶೀಲ ನಿರ್ದೇಶಕನಾಗಿರುವ, ಯಶಸ್ವೀ ಹೀರೋ ಎನಿಸಿಕೊಂಡಿರುವ ಸುದೀಪ್‌ಗೆ ಇನ್ನಷ್ಟು ಎತ್ತರಕ್ಕೆ ಏರುವ ಅವಕಾಶಗಳು ಚಿತ್ರರಂಗದಲ್ಲೇ ಇದೆ. ಇದರೊಂದಿಗೆ ಆತ ಎಲೆಕ್ಷನ್ನು, ಪಾಲಿಟಿಕ್ಸು ಎಂದು ಎದ್ದು ನಿಂತರೆ…

ಬಲ್ಲವರ್‍ಯಾರು?!

• ಅರುಣ್.ಜೆ

Regd.No.KA/RNP/BGS/2036/2011-13 Posted at : GPO, Bangalore-01, Fri/Saturday R B P LANKESH, Kannada Weekly Price Rs. 12/- 6-4-2011

ಪೂಜಾ ಪಂಚಾಯ್ತಿ

"ನಾನು ಆಂಧ್ರ ಪ್ರದೇಶದಿಂದ ಬಂದು ಕನ್ನಡ ಚಿತ್ರವನ್ನು ನಿರ್ಮಿಸಿ, ತುಂಬಾ ತೊಂದರೆಯಲ್ಲಿದ್ದೇನೆ. ನಾನು ವಾಸವಾಗಿರುವ ಮನೆ ಬಾಡಿಗೆಯನ್ನು ಆರು ತಿಂಗಳಿನಿಂದ ಕೊಟ್ಟಿರುವುದಿಲ್ಲ. ನನ್ನ ಕಾರನ್ನು ಸಹ ಮಾರಾಟ ಮಾಡಿ, ಬಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದೇನೆ. ಈ ಚಿತ್ರ ಬಿಡುಗಡೆಯಾಗದೆ ನನ್ನ ಮತ್ತು ನಿರ್ಮಾಪಕರ ಸಾಲದ ಹೊರೆ ಜಾಸ್ತಿಯಾಗಿರುತ್ತದೆ ಮತ್ತು ನಾವು ಮಾಡಿರುವ ಸಾಲಗಳಿಗೆ ಜವಾಬು ನೀಡಲಾಗದೆ ಪ್ರಾಣತ್ಯಾಗ ಮಾಡುವ ಪರಿಸ್ಥಿತಿಯಲ್ಲಿದ್ದೇವೆ."

-ಇದು ನಿರ್ಮಾಪಕ ಕಂ ನಿರ್ದೇಶಕ ಶಿವಗಣಪತಿ ಎಂಬಾತನ ಮನವಿ.

ರಮ್ಯಾ ರಗಳೆ ಬೆಳೆಯುತ್ತಿದ್ದಂತೇ ಈಗ ಪೂಜಾ ಗಾಂಧಿ ಪಂಚಾಯ್ತಿ ಶುರುವಾಗಿದೆ.

'ನೀನಿಲ್ಲದೆ' ಚಿತ್ರವನ್ನು ನಿರ್ಮಿಸಿರುವ ಆಂಧ್ರದ ಚನ್ನಪತಿ ನಾಗಮಲ್ಲೇಶ್ವರಿ ಮತ್ತು ನಿರ್ದೇಶಿಸಿರುವ ಶಿವಗಣಪತಿ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ಮನವಿಯೊಂದನ್ನು ಸಲ್ಲಿಸಿ ಪೂಜಾ ಗಾಂಧಿಯ ವಿರುದ್ಧ ದೂರನ್ನು ನೀಡಿದ್ದಾರೆ.



'ನೀನಿಲ್ಲದೆ' ಸಿನಿಮಾಕ್ಕಾಗಿ ಪೂಜಾ ಗಾಂಧಿ ಹನ್ನೆರಡು ಲಕ್ಷ ರೂಪಾಯಿ ಸಂಭಾವನೆ ಪಡೆದು ನಟಿಸಲು ಒಪ್ಪಿದ್ದಳು. ನಾಲ್ಕು ಲಕ್ಷ ಮುಂಗಡ ಹಣವನ್ನು ನೀಡಲಾಗಿತ್ತು, ಅಗ್ರಿಮೆಂಟ್ ಪ್ರಕಾರ ಇನ್ನುಳಿದ ಎಂಟು ಲಕ್ಷ ಸಂಭಾವನೆಯನ್ನು ಚಿತ್ರ ಬಿಡುಗಡೆಗೆ ಮುನ್ನ ಕೊಡಬೇಕಿದ್ದದ್ದು ನಿರ್ಮಾಪಕನ ಜವಾಬ್ದಾರಿ. ಆದರೆ ಈ ಚಿತ್ರದ ವಿತರಣೆಯ ಹಕ್ಕು ಪಡೆಯಲು ಕರ್ನಾಟಕದ ಯಾವ ನರಪಿಳ್ಳೆಯೂ ಒಪ್ಪದ ಕಾರಣ ಸಂಭಾವನೆ ಬಾಕಿ ಕೊಡುವಲ್ಲಿ ನಿರ್ಮಾಪಕರು ವಿಫಲರಾಗಿದ್ದಾರೆ.

ಇತ್ತ ಪೂಜಾ ಗಾಂಧಿ ಬಾಕಿ ದುಡ್ಡು ಕೊಡದೇ ಹೋದರೆ ಚಿತ್ರದ ಬಿಡುಗಡೆಯನ್ನು ಸ್ಥಗಿತಗೊಳಿಸುತ್ತೇನೆ ಎಂದು ಹಠ ಹಿಡಿದಿದ್ದಾಳೆ. ಅದಕ್ಕೆ ನಿರ್ಮಾಪಕರು ಪೂಜಾ ಗಾಂಧಿಗೆ ಬಾಕಿ ಸಂಭಾವನೆಯ ಬದಲು ಒಂದು ಪ್ರದೇಶದ ವಿತರಣಾ ಹಕ್ಕನ್ನು ನೀಡುವ ಆಶ್ವಾಸನೆ ಕೊಟ್ಟಿದ್ದರಂತೆ. ಆದರೆ ಪೂಜಾ ಮಾತ್ರ ಅದಕ್ಕೆ ಒಪ್ಪಿರಲಿಲ್ಲ. 'ನನಗೆ ಬಾಕಿ ಹಣ ಕೊಡಿ. ನನಗೆ ವಿತರಣೆ ಹಕ್ಕಿನ ಉಸಾಬರಿ ಬೇಡ' ಎಂದು ಆಕೆ ಹಟ್ಟು ಹಿಡಿದಿದ್ದಾರೆ. ಸದ್ಯ ಈ ವಿವಾದ ಕೂಡಾ ಛೇಂಬರ್ ಮತ್ತು ಕಲಾವಿದರ ಸಂಘದ ಪಡಸಾಲೆಗೆ ವಕ್ಕರಿಸಿಕೊಂಡಿದೆ.

ಬಹುಶಃ ತಾನು ನಟಿಸಿದ ಚಿತ್ರಗಳು ಹಿಟ್ ಆಗುತ್ತಿದ್ದರೆ ಪೂಜಾ ಯಾವುದಾದರೂ ಏರಿಯಾದ ವಿತರಣೆ ಹಕ್ಕು ಪಡೆದು ಸಂಭಾವನೆಯನ್ನು ಕೈಬಿಡುತ್ತಿದ್ದಳೇನೋ? ಆದರೆ ಆಕೆ ನಟಿಸುತ್ತಿರುವ ಚಿತ್ರಗಳು ಬಾಕ್ಸ್ ಆಫೀಸಿನಲ್ಲಿ ಮೈಚೆಲ್ಲಿ ಮಕಾಡೆ ಮಲಗುತ್ತಿದ್ದು ಬಂಡವಾಳ ಹಾಕಿದ ನಿರ್ಮಾಪಕನಿಗೆ ನಾಲ್ಕಾಣೆಯ ವರಮಾನವೂ ಬರುತ್ತಿಲ್ಲ. 'ಕಳೆದ ಮೂರು ವರ್ಷಗಳಿಂದ ಚಾಲ್ತಿಯಲ್ಲಿದ್ದ ಪೂಜಾ ಗಾಂಧಿಯ ಜಮಾನ ಮುಗೀತಾ' ಎಂಬಷ್ಟರಮಟ್ಟಿಗೆ ಪೂಜಾಳ ಸಿನಿಮಾ ನಸೀಬು ಎಕ್ಕುಟ್ಟಿಹೋಗಿದೆ. ಎರಡು ವರ್ಷಗಳ ಹಿಂದೆ ಗಾಂಧಿನಗರದವರು ಪೂಜಾ ಗಾಂಧಿಯನ್ನು 'ಅದೃಷ್ಟ ದೇವತೆ' ಎಂದೆಲ್ಲಾ ಹೊಗಳಿ ಅಟ್ಟಕ್ಕೇರಿಸಿದ್ದರು. ಅದೇನು ದರಿದ್ರವೋ ಏನೋ ಇತ್ತೀಚೆಗೆ ಪೂಜಾ ಮುಖ ನೋಡಿದರೆ ಕನ್ನಡದ ಪ್ರೇಕ್ಷಕರು ಮುಖ ಸಿಂಡರಿಸುತ್ತಿದ್ದಾರೆ. 'ಮಹರ್ಷಿ', 'ಜನುಮದ ಗೆಳತಿ', 'ಅನು', 'ಕೋತಗನ ಕೋಳಿ ನುಂಗಿತ್ತಾ?', 'ಇನಿಯ', 'ಹುಚ್ಚಿ', 'ನಿನಗಾಗಿ ಕಾದಿರುವೆ', 'ಮಿನುಗು', 'ಗೋಕುಲ', 'ಹರಿಕಥೆ', 'ರಾಣಿ ಮಹಾರಾಣಿ', 'ಆಪ್ತ' ಸೇರಿದಂತೆ ಹತ್ತಾರು ಚಿತ್ರಗಳು ಕೋಪೆದ್ದುಹೋಗಿವೆ. ಹೀಗೆ ಒಂದರಹಿಂದೆ ಒಂದು ತೋಪು ಚಿತ್ರಗಳಲ್ಲೇ ಪೂಜಾ ನಟಿಸಿರುವುದ ರಿಂದ ಪೂವ ಗಾಂಧಿನಗರದ ಮಂದಿ ಈ ಹಿಂದೆ ಈಕೆಯನ್ನು 'ಇಂದಿರೆ-ಚಂದಿರೆ' ಎಂದು ಕೊಂಡಾ ಡಿದ್ದರೋ ಅವರೆಲ್ಲ ಈಗ 'ಲತ್ತೆ ಹೀರೋಯಿನ್' ಎಂದು ಮೂದಲಿಸುತ್ತಿದ್ದಾರೆ. ಕೆಲ ನಿರ್ಮಾಪಕ ರಂತೂ ಪೂಜಾ ಗಾಂಧಿ ಹೆಸರು ಕೇಳಿದರೆ ಎಗರೆಗರಿ ಬೀಳುತ್ತಿದ್ದಾರೆ.

ಇಷ್ಟೆಲ್ಲ ಚಿತ್ರಗಳು ತೋಪಾಗುತ್ತಿದ್ದರೂ ಪೂಜಾಳ ಸಂಭಾವನೆ ಮಾತ್ರ ಸಿಕ್ಕಾಪಟ್ಟೆ ಏರುತ್ತಲೇ ಇದೆ. ಮೇಲಾಗಿ ಇತ್ತೀಚಿನ ಆಕೆಯು ನಿರ್ಮಾಪಕರಿಗೆ ಸಹಕಾರವನ್ನು ಕೊಡುತ್ತಿಲ್ಲ ಎಂಬ ಮಾತು ನಿರ್ಮಾಪಕರ ಸಂಘದ ಕಾಂಪೌಂಡಿನೊಳಗೆ ಕೇಳಿಸುತ್ತಿದೆ.

ಸದ್ಯದ ಪರಿಸ್ಥಿತಿ ನೋಡಿದರೆ ಪೂಜಾ ಗಾಂಧಿ ಎಂಬ ಪಂಜಾಬಿ ಬೆಡಗಿಯನ್ನು ಗಾಂಧಿನಗರದವರು ಒತ್ತಾಯಪೂರ್ವಕವಾಗಿ ಗಂಟುಮೂಟೆ ಕಟ್ಟಿಸುವ ಎಲ್ಲ ಕುರುಹುಗಳೂ ಕಾಣುತ್ತಿವೆ...

• ಅರುಣ್

ಲೈಫು ಇಷ್ಟೇನೆ!



ಬೆಂಗಳೂರಿನ ಕಾರ್ಪೊರೇಟರುಗಳ[...] ಈಗ ಒಬ್ಬೊಬ್ಬರಾಗಿ ಸಿನಿಮಾ ನಿರ್ಮಾಪಕರ[...] ಪಟ್ಟಿಗೆ ಸೇರುತ್ತಿದ್ದಾರೆ. ಮೊನ್ನೆಮೊನ್ನೆಯಷ್ಟೇ[...] ಎಚ್.ಬಿ.ಆರ್. ಲೇಔಟ್‌ನ ಮಹಾನಗರ[...] ಪಾಲಿಕೆ ಸದಸ್ಯ ಗೋವಿಂದರಾಜು ತಮ್ಮ ಮಗ ಶ್ರೀಕಾಂತ್‌ಗಾಗಿ[...] 'ಒಲವೇ ಮಂದಾರ' ಅನ್ನೋ ಸಿನಿಮಾವನ್ನು ನಿರ್ಮಿಸಿ ಸೈ ಎನಿಸಿ[...] ಕೊಂಡಿದ್ದರು.

ಈಗ ಮಂಗಮ್ಮನಪಾಳ್ಯದ ಮಾಜಿ ಕಾರ್ಪೊರೇಟರ್ ಮತ್ತು ಹಾಲಿ[...] ಕಾರ್ಪೊರೇಟರ್ ಹಸೀನಾ ತಾಜ್ ಅವರ ಪತಿ ಆಸ್ಲಾಂ ಚಿತ್ರ ನಿರ್ಮಾಣಕ್ಕೆ[...] ಮುಂದಾಗಿದ್ದಾರೆ. ಚಿತ್ರರಂಗದ ಘಮಲೇ ಗೊತ್ತಿಲ್ಲದ ಆಸ್ಲಾಂ ನಿರ್ಮಿಸುತ್ತಿರುವ 'ಲೈಫು ಇಷ್ಟೇನೇ' ಚಿತ್ರದಲ್ಲಿ ಮತ್ತೊಬ್ಬ ನಿರ್ಮಾಪಕ ಜಾಕ್ ಮಂಜ ಕೂಡಾ ಭಾಗಿಯಾಗಿದ್ದಾರೆ. ಯೋಗರಾಜ್ ಭಟ್ ಅವರ 'ಪಂಚರಂಗಿ' ಮತ್ತು 'ಮನಸಾರೆ' ಚಿತ್ರಗಳಿಗೆ ಚಿತ್ರಕತೆ ಬರೆದಿದ್ದ ಪವನ್ ಕುಮಾರ್ 'ಲೈಫು ಇಷ್ಟೇನೆ' ಚಿತ್ರದ ಮೂಲಕ ನಿರ್ದೇಶಕರಾಗಿ ಬಡ್ತಿ ಪಡೆದಿದ್ದಾರೆ.



ಚಿತ್ರ ಆರಂಭವಾದ ಮೇಲೆ ಸ್ಕ್ರಿಪ್ಟು, ಡೈಲಾಗುಗಳನ್ನು ತಿದ್ದಲು[...] ಕೂತು ನಿರ್ಮಾಪಕರ ಜೇಬಿಗೆ ಕತ್ತರಿ ಹಾಕುವ ನಿರ್ದೇಶಕರಿರುವಾಗ[...] ಪವನ್ ಮಾತ್ರ ಚಿತ್ರದ ಪ್ರತಿಯೊಂದು ದೃಶ್ಯವೂ ಹೀಗೇ ಬರಬೇಕು[...] ಎಂದು ಪ್ಲಾನ್ ಮಾಡಿ ಲ್ಯಾಪ್‌ಟಾಪ್‌ನಲ್ಲಿ ಫೀಡ್ ಮಾಡಿಟ್ಟಿದ್ದಾರಂತೆ[...] ಹೀಗಾಗಿ ದಿನದ ಹನ್ನೆರಡು ಗಂಟೆಗಳ ಕಾಲ ಸತತವಾಗಿ ಶೂಟಿಂಗ್[...] ಮುಗಿಸಿ ಹಣ ಹಾಕಿದವರನ್ನು ಸೇಫ್ ಮಾಡುತ್ತಿದ್ದಾರಂತೆ.

ಭಟ್ಟರ ನಿಲಯದ ಕಲಾವಿದ ದಿಗಂತ್ ಈ ಚಿತ್ರಕ್ಕೂ ನಾಯಕನಾಗಿ[...] ದ್ದಾನೆ. ಪೋಷಕ ಕಲಾವಿದೆ ಸುಧಾ ಬೆಳವಾಡಿ ಅವರ ಪುತ್ರಿ ಅಂಯು[...] ಬೆಳವಾಡಿ ಈ ಚಿತ್ರದ ನಾಯಕಿ.

ಸದ್ಯಕ್ಕೆ ಸುದ್ದಿ ಇಷ್ಟೇನೇ!

ಅಕುಲನಿಗೆ ಕಪಾಳ ಮೋಕ್ಷಂ!

ಕಳೆದವಾರವಷ್ಟೇ 'ಲಂಕೇಶ್'ನಲ್ಲಿ 'ಪ್ಯಾಟೆ ಹುಡುಗೀರ ಹಳ್ಳಿ ಲೈಫು[...] ಎಂಬ ದಟ್ಟದರಿದ್ರದ ರಿಯಾಲಿಟಿ ಶೋ[...] ಬಗ್ಗೆ ವರದಿಯಾಗಿತ್ತು. ಈಗ ಅದೆ[...] ರಿಯಾಲಿಟಿ ಶೋ ಸ್ಪಾಟ್‌ನಿಂದ ಹಾಟ್[...] ನ್ಯೂಸ್ ಒಂದು ಬಂದಿದೆ.



ಸಿಟಿ ಹುಡುಗಿಯರೊಂದಿಗೆ ಅಲ್ಲಿನ[...] ಸ್ಥಳೀಯ ನಿವಾಸಿಗಳು ಕಾದಾಡುವ ಟಾಸ್[...] ವೊಂದನ್ನು ಚಿತ್ರೀಕರಿಸುತ್ತಿದ್ದರಂತೆ. ಎ[...] ಬಿಡಂಗಿಯಂತಾಡುವ ಕಾರ್ಯಕ್ರಮದ ಆ್ಯಂಕರ್ ಅಕುಲ್ ಬಾಲಾ[...] ಅದೇನು ಯಡವಟ್ಟು ಮಾಡಿದನೋ? ಇದ್ದಕ್ಕಿದ್ದಹಾಗೆ ರೊಚ್ಚಿಗೆ[...] ಹಳ್ಳಿ ಯುವಕರು ಆತನ ಮೇಲೆ ಮುರಕೊಂಡು ಬಿದ್ದು ಕೆನ್ನೆಕೆನ್ನೆಗೆ[...] ಬಾರಿಸಿದ್ದಾರೆ. ನಂತರ ಈ ವಿಚಾರ ಬಾದಾಮಿಯಲ್ಲಿರುವ ಕೆರೂರ[...] ಗ್ರಾಮಕ್ಕೆ ಗೊತ್ತಾಗಿ ದೊಡ್ಡ ರಾದ್ಧಾಂತವಾಗಿ ಮಾರ್ಪಟ್ಟಿದೆ.

ಯಾವಾಗ ಈ ರಿಯಾಲಿಟಿ ಶೋ ದವರು ಕೆರಕಲಮಟ್ಟಿ, ಕೆರೂರಿನ[...] ಬೀಡುಬಿಟ್ಟರೋ ಆವಾಗಿನಿಂದ ಅಲ್ಲಿನ ಪೊಲೀಸರಿಗೆ ತಲೆಮೇಲೆ ಕೆಂಡ[...] ಮಳೆ ಬಿದ್ದಂತಾಗಿದೆ. ಹೀಗಾಗಿ ಅಲ್ಲಿನ ಸಿಪಿಐ ಆರ್.ಬಿ. ಪಾಟೀಲ[...] ಚಿತ್ರೀಕರಣ ಸ್ಥಳಕ್ಕೆ ಬಂದು 'ಗಂಟುಮೂಟೆ ಕಟ್ಟಿ' ಎಂದು ಅಬ್ಬರಿಸಿದ್ದಾ[...] ಸದ್ಯಕ್ಕೆ ರಿಯಾಲಿಟಿ ಮಂದಿ 'ನಮಗೆ ಹಳ್ಳಿ ಜನರಿಂದ ರಕ್ಷಣೆ ಕೊಡಿ[...] ಎಂದು ಪೊಲೀಸರಿಗೇ ಮನವಿ ಸಲ್ಲಿಸಿದ್ದಾರೆ. ಆದರೆ ತಾಂಡಾದ ಜ[...] ಮಾತ್ರ ರಿಯಾಲಿಟಿ ಶೋನ ವಿರುದ್ಧ ಕುದಿಯುತ್ತಿದ್ದಾರೆ.

ಜನರ ಭಾವನೆಗಳನ್ನು ಸರಕಾಗಿಸಿಕೊಂಡಿರುವ ಟೀವಿ ಚಾನೆಲ್‌ನವರಿ[...] ಯಾವ ಊರಿನಲ್ಲಿ ಬೆಂಕಿ ಬಿದ್ದರೇನು? ಯಾರ ಜೀವ ಬಿಟ್ಟರೇನು[...] ಎಲ್ಲವೂ ಲಾಭವೇ!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, ...